ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)

ಸಚಿಚಿಕೆ 6; ಸಂಪುಟ 14 ; ಸೆಪ್ಟೆಂಬರ್ –ಡಿಸೆಂಬರ್ 2020 ; ಅಂಕಣ- ಭರತಕೌತುಕ

ಧಾರ್ಮಿಕ ನೃತ್ತ - "ಚಿಂದು" - ಗೀತ - ನೃತ್ಯ - ನೃತ್ತ ಪದ್ಧತಿ*

- ಕಾಂಚನ ರೋಹಿಣಿ ಸುಬ್ಬರತ್ನಂ

ಮಾನವ ಮಾನಸಕ್ಕೆ ತಾನು ಮಾಡಿದ ಪಾಪಕರ್ಮಗಳೆಲ್ಲದರ ಪ್ರಾಯಶ್ಚಿತ್ತವಾಗಲೂ, ತಾನು ಮಾಡಿದ ಕರ್ಮಗಳು ಸವೆಯಲೂ, ದೈಹಿಕವಾಗಿ ನೋವನ್ನೂ ಕಷ್ಟವನ್ನೂ ಅನುಭವಿಸುವಂತಹ ವ್ರತಗಳನ್ನು ಕೈಗೊಳ್ಳಬೇಕು ಎಂಬ ನಂಬಿಕೆ ಬೇರೂರಿದೆ. ಈ ನಂಬಿಕೆಗಳೂ ಆಚರಣೆಗಳೂ ಮತದಿಂದ ಮತಕ್ಕೆ, ಜನಾಂಗಗಳಿಂದ ಜನಾಂಗಗಳಿಗೆ ವ್ಯತ್ಯಾಸಗಳನ್ನು ಹೊಂದಿದ್ದು ಆಬಾಲವೃದ್ಧಸ್ತ್ರೀಯರಾದಿಯಾಗಿ ನಂಬಿಕೆಗಳನ್ನೂ, ಆಚರಣೆಗಳನ್ನೂ ಅನುಕರಿಸಿ ತಮ್ಮ ಶಕ್ತ್ಯಾನುಸಾರ ಆಚರಿಸುತ್ತಾರೆ. ಇಂತಹ ಧಾರ್ಮಿಕ ಕ್ರಿಯೆಗಳಲ್ಲಿ ಚಿಂದು ನೃತ್ತವೂ ಸಹ ಒಂದು.

ಕಲಾತ್ಮಕವಾದ ಇಂತಹ ಧಾರ್ಮಿಕ ಆಚರಣೆಗಳ ಸಮಯದಲ್ಲಿ ದೈಹಿಕವಾಗಿ ಅನುಭವಿಸುವ ಅತಿಶಯವಾದ ನೋವು-ಬಾವುಗಳನ್ನು ತಡೆದುಕೊಳ್ಳಲು, ವಾದ್ಯಗಳೂ ಗೀತಗಳೂ ಉಪಯುಕ್ತವಾಗುವುದೇ ವಿಶೇಷವಾದ ಸಂಗತಿ. ಇಂತಹ ಆಚರಣೆಗಳಿಗೆ ಒಂದು ದೊಡ್ಡ ಉದಾಹರಣೆಯೆಂದರೆ, ಒರಿಸ್ಸಾ ದೇಶದಲ್ಲಿ ಸಂತಲ್ ಜನಾಂಗದವರು ಆಚರಿಸುವ ಯುರಹಬ್ಬ. ಇದು ಮಕರ ಸಂಕ್ರಾಂತಿಯಂದು ಬರುತ್ತದೆ. ಇಂತಹ ಕಠಿಣ ಸಂದರ್ಭಕ್ಕೆಂದೇ ಆರಿಸಿದ ಕೆಲವು ವ್ಯಕ್ತಿಗಳ ಬೆನ್ನಿನಲ್ಲಿ ಕಬ್ಬಿಣದ ದಬ್ಬಣದಂತಹ ದೊಡ್ಡ ಸೂಜಿಯಿಂದ ಚುಚ್ಚಿ ಅದರಿಂದ ಹಗ್ಗವನ್ನು ಹಾಕಿ ಎಳೆಯುತ್ತಾರೆ. ಇದರಿಂದ ಅವರ ದೇಹವನ್ನು ಬಿದಿರಿನ ಗಳುವೊಂದಕ್ಕೆ ಕಟ್ಟಿ ಹಳ್ಳವೊಂದರಲ್ಲಿ

ಇಡುತ್ತಾರೆ. ಇನ್ನೊಬ್ಬನು ಹೀಗೆ ಬಿದಿರಿಗೆ ಕಟ್ಟಿದ ವ್ಯಕ್ತಿಯನ್ನು ಹಗ್ಗದ ಇನ್ನೊಂದು ಬದಿಯಿಂದ ಎಳೆದು ಆ ವ್ಯಕ್ತಿಯನ್ನು ತೂಗಾಡಿಸುತ್ತಾನೆ. ಹೀಗೆ ಮಾಡುವಾಗ ರಕ್ತಧಾರೆ ಹರಿದಷ್ಟೂ ಆ ವ್ಯಕ್ತಿಯ ಪಾಪಗಳ ಪ್ರಾಯಶ್ಚಿತ್ತವಾಗುತ್ತದೆ, ದೇವಿಯ ಅನುಗ್ರಹವುಂಟಾಗುತ್ತದೆ ಎಂದು ಜನ ನಂಬುತ್ತಾರೆ. ಈ ಎಲ್ಲ ಧಾರ್ಮಿಕ ಆಚರಣೆಗಳಲ್ಲಿ, ಭಕ್ತಿಯ ಆವೇಶವನ್ನುಂಟು ಮಾಡುವ, ದೇಹದಲ್ಲಿ ಉಂಟಾಗುವ ಅತಿಶಯವಾದ ಬಾಧೆಯನ್ನು ತಡೆದುಕೊಂಡು ಭಕ್ತಿಯಲ್ಲೇ ಮನವನ್ನು ನೆಡುವಂತೆ ಮಾಡುವ ಉಪಾಯವನ್ನು ಮದ್ದಲೆ, ತಮಟೆ, ಢಕ್ಕೆ, ತಾಳಗಳಂತಹ ಲಯವಾದ್ಯಗಳ ವಾದನವೂ, ಜನರ ಭಕ್ತ್ಯಾವೇಷಗಳಿಂದ ಕೂಡಿದ ನಾಮಾವಳಿಗಳ ಉದ್ಘೋಷಗಳೂ ಸಾಧಿಸುತ್ತವೆ. ಇಂತಹ ಧಾರ್ಮಿಕ ಸಂದರ್ಭದಲ್ಲಿ ಸಂತಲ್ ಜನಾಂಗದ ನುರಿತ ಜನರಿಂದ ಲಕ್ಷ್ಮೀಕಥೆ ಮುಂತಾದ ಕಥನಗಳ ಗಾಯನವೂ ಇದನ್ನೇ ಸಾಧಿಸುತ್ತದೆ.



ಭಾರತೀಯ ಧಾರ್ಮಿಕ ಆಚರಣೆಗಳ, ಸಂಸ್ಕಾರಗಳ ಪರಂಪರೆಯಲ್ಲಿ, ಷೋಡಶ ಸಂಸ್ಕಾರಗಳಲ್ಲಿಯೂ ಸಂಗೀತ - ನೃತ್ಯಗಳು ಬಹು ಪ್ರಾಚೀನದಿಂದ ಇರುವಂತಹದೆ. ಮಾನವ ಜನಾಂಗದಲ್ಲಿ ಗರ್ಭಾವಸ್ಥೆಯ ಶಿಶುವಿನಿಂದ ಹಿಡಿದು ಅಂತ್ಯೇಷ್ಟಿಯವರೆಗೂ ಇರುವ ಸಂಸ್ಕಾರಗಳ ಆಚರಣೆಗಳಲ್ಲಿ ಸಂಗೀತ - ನೃತ್ಯಗಳು ಪ್ರಮುಖ ಪಾತ್ರವನ್ನು ವಹಿಸಿವೆ. ಇದು ಜನಾಂಗದಿಂದ ಜನಾಂಗಕ್ಕೆ, ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ವ್ಯತ್ಯಾಸವಾಗಿವೆ. George Feuetstein ಎಂಬ ಆಂಗ್ಲ ವಿದ್ವಾಂಸನು "Rituals are special forms of action that are intended to create higher states of consciousness through the ceremonial use of images, statues, or other symbolic representations of deities and other elevated spiritual beings, including teachers" ಎಂದು ಹೇಳುತ್ತಾನೆ. ಆ ನಾಡಿನ ಜನಕ್ಕೆ ಗುರು ಎನ್ನುವ ಪರಿಕಲ್ಪನೆ ಇಲ್ಲದ್ದರಿಂದ ಟೀಚರ್ ಎಂದೇ ಆತ ಹೇಳಿದ್ದಾನೆ. ಭಾರತೀಯ ಧಾರ್ಮಿಕ ಸಂಸ್ಕಾರಗಳಿಗೆಲ್ಲ ಇರುವ ಈ ಲಕ್ಷಣಗಳು ಭಾರತೀಯ ನೃತ್ಯ - ಸಂಗೀತಗಳಿಗೂ ಇದ್ದೇ ಇವೆ. ಇವು ಭಾರತೀಯ ಸಂಸ್ಕೃತಿಯ ಮೂಲೋದ್ದೇಶಕ್ಕೆ

Copyright reserved

ಪೂರಕವಾಗಿರುವುದು ಮಾತ್ರವಲ್ಲದೆ, ವೇದಗಳ ಕಾಲದಿಂದ ಹಿಡಿದು ಇಂದಿನವರೆಗೂ ಸಹ ಸಂಗೀತ -ನೃತ್ಯಾದಿಗಳ ಪ್ರಯುಕ್ತಿಯಲ್ಲಿ, ಪ್ರಮುಖ ಅಂಗವಾಗಿಯೇ ಇವೆ.

ಸಂಗೀತ-ನೃತ್ಯಗಳಿಂದ ಅತೀಂದ್ರಿಯ ಶಕ್ತಿಗಳು ಸಿದ್ಧಿಯಾಗಿ ವಶವಾಗುತ್ತವೆ, ಜೀವಾತ್ಮಕ್ಕೆ ಪಂಚೇಂದ್ರಿಯಗಳೂ ಸ್ವಾಧೀನವಾಗುತ್ತವೆ, ಪರಮಾತ್ಮನ ಸನ್ನಿಧಿ ದೊರಕುತ್ತದೆ, ಮೋಕ್ಷವೇ ಲಭಿಸುತ್ತದೆ ಎಂಬಿತ್ಯಾದಿ ನಂಬಿಕೆಗಳು ಬೇರೂರಿದ್ದರಿಂದಲೇ ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಸಂಗೀತ - ನೃತ್ಯಗಳು ಅತೀ ಪ್ರಾಚೀನ ಕಾಲದಿಂದಲೂ ಜನಜೀವನದಲ್ಲಿ ಹಾಸುಹೊಕ್ಕಾಗಿವೆ. ಭಾರತೀಯ ಧಾರ್ಮಿಕತೆಯ ಮೇಲೆ ಎಂತೆಂತಹ ಆಕ್ರಮಣಗಳೇ ಆದರೂ ಇಂದಿಗೂ ಇವು ಬೇರೂರಿವೆಯೆಂದರೆ ಅವುಗಳು ಮಾನವಮಾನಸಕ್ಕೆ ಎಷ್ಟು ಅವಶ್ಯವೂ ಆಗಿದೆಯೆಂದು ಊಹಿಸಬಹುದು. ಧಾರ್ಮಿಕತೆಯಲ್ಲಿ ಸಂಗೀತ-ನೃತ್ಯಗಳಿರುವುದಂತೂ ವಿಶ್ವಸಮಸ್ತವ್ಯಾಪಿಯೇ.

ಇದರಲ್ಲಿ ಶಿಷ್ಟ ಹಾಗೂ ಜನಪದವೆಂದು ವಿಂಗಡಿಸಬಹುದು. ಶಿಷ್ಟರ ಧಾರ್ಮಿಕ ಸಂಗೀತ ನೃತ್ಯಾದಿಗಳಲ್ಲಿ ದೈಹಿಕವಾಗಿ ಕಠಿಣಶಿಕ್ಷೆಗಳು ಇಲ್ಲದೆ ಸಂಗೀತ ಹಾಗೂ ನಾಟ್ಯಗಳು ಶಾಸ್ತ್ರೀಯತೆಯತ್ತ ವಾಲಿದರೆ ಜನಪದ ನೃತ್ಯದಲ್ಲಿ ದೈಹಿಕವಾಗಿ ಬಾಧೆಯಾಗುವ ಕಠಿಣಾತಿಕಠಿಣ ಸಂಸ್ಕಾರಗಳನ್ನೆಷ್ಟೋ ಅವರ ಮೇಲೆಯೇ ಪ್ರಯೋಗಿಸಿಕೊಳ್ಳುತ್ತಾರೆ. ಇಂತಹ ನೃತ್ಯದಲ್ಲಿ ಚಿಂದುವೂ ಸೇರಿದೆ. ಇದರ ಹಾಡಿನ ಸಾಹಿತ್ಯವೂ ಜನಪದ ಶೈಲಿಯಲ್ಲಿದ್ದು ದ್ವಿಪದಿ, ತ್ರಿಪದಿಗಳಲ್ಲಿ ರಚಿತವಾಗಿರುತ್ತದೆ. ಇಂತಹ ಜನಪದ ನೃತ್ಯ ಹಾಗೂ ಪ್ರಬಂಧಗಳನ್ನೂ ನಮ್ಮ ಸಂಗೀತಶಾಸ್ತ್ರಜ್ಞರು ಸಹ ಅತ್ಯಂತ ಪ್ರಾಚೀನದಿಂದಲೇ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸುತ್ತ, ದಾಖಲಿಸುತ್ತಲೇ ಬಂದಿರುವುದು ನಮ್ಮ ದೇಶದ ಶಾಸ್ತ್ರಕಾರರ ಗರಿಮೆಗಳಲ್ಲೊಂದು.

ಹೀಗೆ ದ್ವಿಪದಿ, ತ್ರಿಪದಿ, ಚತುಷ್ಪದಿ (ಚೌಪದಿ), ಷಟ್ಪದಿ, ಆರ್ಯಾ, ಕಂದ, ದೋಧಕ ಮುಂತಾದ ಛಂದಃಪ್ರಕಾರಗಳೂ ಸಹ ಧಾರ್ಮಿಕ ವಿಧಿಗಳಲ್ಲಿ ಉಪಯುಕ್ತವಾಗುತ್ತಿದ್ದ ಗೇಯಪ್ರಕಾರಗಳೆಂದು ಎಣಿಸಿಕೊಂಡು ಸಂಗೀತರತ್ನಾಕರಾದಿ ಅನೇಕ ಸಂಗೀತಶಾಸ್ತ್ರಗ್ರಂಥಗಳಲ್ಲಿಯೂ ಹೇಳಿದ ಇಂತಹ ಎಷ್ಟೋ ವಿಧಗಳನ್ನು ಸಂಗೀತಶಾಸ್ತ್ರಗ್ರಂಥಗಳು **ದೇಶೀ** ಎಂಬ ಪರಿಭಾಷೆಯಲ್ಲಿ ಕರೆದಿವೆ. "ಜನಸಾಮಾನ್ಯರು ಅಥವಾ ಕವಿಗಳು ಇವುಗಳನ್ನು ಹಾಡುತ್ತಿದ್ದ ರೀತಿಯನ್ನು ಉಳಿಸಿ ಬರೆದಿಡುವುದು ಈ ಗ್ರಂಥಗಳ ಉದ್ದೇಶವಾಗಿತ್ತೇ ಹೊರತು ಈ ಅಥವಾ ಇಂತಹ ಪ್ರಬಂಧಗಳು 'ಶಾಸ್ತ್ರೀಯ' ಸಂಗೀತ ಸಾಮಗ್ರಿಯೆಂದು ತಿಳಿಸುವುದಲ್ಲ. ಧಾರ್ಮಿಕ, ಜಾನಪದ ಮುಂತಾದ ಸಂದರ್ಭಗಳಲ್ಲಿ ಬಳಸಲಾಗುತ್ತಿದ್ದ ಮಟ್ಟು, ಹಾಡು, ತಾಳ, ಸಂಗೀತವಾದ್ಯ, ನೃತ್ಯ ಮುಂತಾದವುಗಳನ್ನೂ ಸಂಗೀತಶಾಸ್ತ್ರಗ್ರಂಥಗಳಲ್ಲಿ ವರ್ಣನಾಸಂಪೂರ್ಣತೆಯ ದೃಷ್ಟಿಯಿಂದಲೂ, ಇವುಗಳೆಲ್ಲ ಸಂಗೀತದ ಅಂಗಗಳೇ ಎಂಬುದನ್ನು ಬೋಧಿಸುವುದಕ್ಕಾಗಿಯೂ ಸೇರಿಸಲಾಗುತ್ತಿತ್ತು" — ಎಂದು ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣರವರು ತಮ್ಮ ಶಿವಶರಣ ಸಂಗೀತ ಸಂಪದವೆಂಬ ಪುಸ್ತಕದಲ್ಲಿ ಹೇಳಿದ್ದಾರೆ.

Copyright Reserved

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)

ಸಚಿಚಿಕೆ 6; ಸಂಪುಟ 14 ; ,ಸೆಪ್ಟೆಂಬರ್ –ಡಿಸೆಂಬರ್ 2020 ; ಅಂಕಣ- ಭರತಕೌತುಕ

ಮಾರ್ಗ - ದೇಶೀ
ಕಾಲಾನುಕಾಲದಲ್ಲಿ ಗೀತವಾದ್ಯನರ್ತನಗಳಿಗೆ ಸಮುಚ್ಚಯದ ಸಂಗ್ರಹವಾಚಕ ಶಬ್ದವಾಗಿ, ಪ್ರಾಚೀನದಲ್ಲಿ ತೌರ್ಯತ್ರಿಕವೆಂದೂ, ಸಂಗೀತವೆಂದೂ ಪರಿಭಾಷೆಯಾಗಿ ಪ್ರಯೋಗವಾಗಲ್ಪಡುತ್ತಿತ್ತು. ಭಾರತೀಯ ಸಂಗೀತಶಾಸ್ತ್ರಜ್ಞರು ಮಾರ್ಗ ಹಾಗೂ ದೇಶೀ ಎಂಬ ಎರಡು ಸಂಗೀತ ಪದ್ದತಿಗಳನ್ನು ಅತ್ಯಂತ ಪ್ರಾಚೀನಕಾಲದಿಂದಲೂ ಹೇಳುತ್ತಲೇ ಬಂದಿದ್ದಾರೆ. ದೇಶೀ ಎಂಬ ಶಬ್ದವು ಮಾರ್ಗ ಎಂಬ ಮಾತಿಗೆ ವಿಷಮಪದವಾಗಿದೆ. ಬ್ರಹ್ಮ, ಸದಾಶಿವ ಮುಂತಾದ ಆಯಾ ಶಾಸ್ತ್ರ ಪ್ರವರ್ತಕರಿಂದ ಹುಡುಕಿ, ಸಿದ್ದಗೊಳಿಸಿ, ಭರತಾದಿಗಳಿಂದ ಶಂಭುವಿನ ಮುಂದೆ ಪ್ರಯುಕ್ತವಾಗಿ, ನಿಖರವಾದ ನಿಯಮಾವಳಿ - ಕಟ್ಟುಪಾಡುಗಳಿಗೆ ಒಳಪಟ್ಟು ಇಹಪರಗಳಲ್ಲಿ ಅಭ್ಯುದಯಕ್ಕೆ ಕಾರಣವಾಗಿರುವುದು ಮಾರ್ಗ.

ವಿವಿಧ ದೇಶಗಳಲ್ಲಿ ಆಯಾ ಜನಮನದ ಅಭಿರುಚಿಗೆ ತಕ್ಕಂತೆ ರೂಢಿಸುವ ಗೀತವಾದ್ಯನೃತ್ಯಗಳಲ್ಲಿ ಒಂದೊಂದಕ್ಕೂ ದೇಶೀ ಎಂದು ಹೆಸರು.

“ಮಾರ್ಗೋ ದೇಶೀತಿ ತದ್ ದ್ವೇಧಾ ತತ್ರ ಮಾರ್ಗಃ ಸ ಉಚ್ಯತೇ |
ಯೋ ಮಾರ್ಗಿತೋ ವಿರಿಂಚ್ಯಾದ್ಯೈಃ ಪ್ರಯುಕ್ತೋ ಭರತಾದಿಭಿಃ ||
ದೇವಸ್ಯ ಪುರತಃ ಶಂಭೋರ್ನಿಯತಾಭ್ಯುದಯಪ್ರದಃ|(1)

ಎಂದೂ..

“ವಿವಿಧ ದೇಶೇ ಜನಾನಾಂ ಯದ್ರುಚ್ಯಾ ಹೃದಯರಂಜಕಮ್ |
ಗೀತಂ ಚ ವಾದನಂ ನೃತ್ತಂ ತದ್ ದೇಶೀತ್ಯಭಿಧೀಯತೇ ||(1)

ಎಂದು ಶಾರ್ಙ್ಗದೇವನೆನ್ನುತ್ತಾನೆ. ಈ ಅರ್ಥಕ್ಕೆ ಆತನು ತನ್ನ ಪೂರ್ವಾಚಾರ್ಯರುಗಳಾದ ಮತಂಗ, ಜಗದೇಕಮಲ್ಲರುಗಳನ್ನು ಆಧರಿದ್ದಾನೆ. ಅತ್ಯಂತ ಪ್ರಾಚೀನದಿಂದಲೂ ಎಲ್ಲ ಶಾಸ್ತ್ರಜ್ಞರು ಮಾರ್ಗ ಪದ್ದತಿಯನ್ನು ಕುರಿತು ನೀಡಿದಷ್ಟೇ ಗೌರವವನ್ನು ದೇಶೀ ಪದ್ದತಿಯ ಗೀತವಾದನನರ್ತನಗಳಿಗೂ ನೀಡಿ,

Copyright reserved

ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)

ಸಚಿಚಿಕೆ 6; ಸಂಪುಟ 14 ; ಸೆಪ್ಟೆಂಬರ್ –ಡಿಸೆಂಬರ್ 2020 ; ಅಂಕಣ- ಭರತಕೌತುಕ

ಆಯಾ ಕಾಲಕ್ಕೆ ಪ್ರಚಲಿತವಾದ ಎಷ್ಟೋ ದೇಶೀ ಗೀತವಾದ್ಯನರ್ತನಗಳನ್ನು ಕುರಿತು ವಿವರಿಸಿದ್ದಾರೆ. ಅಂತಹುದರಲ್ಲಿ ದೇಶೀ ನೃತ್ತವಾದ ಚಿಂದುನೃತ್ಯವೂ ಒಂದು.

ಮೊದಲು ನಾವು ***ಸಂಗೀತಶಾಸ್ತ್ರಗ್ರಂಥಗಳಲ್ಲಿರುವ ಚಿಂದು ನೃತ್ಯದ ಲಕ್ಷಣಗಳು*** ಯಾವುವು ಎಂಬುದನ್ನು ಕೆಲವು ಶಾಸ್ತ್ರಗ್ರಂಥಗಳಲ್ಲಿರುವುದನ್ನೀಗ ತಿಳಿದುಕೊಳ್ಳೋಣ. ಈ ಎಲ್ಲ ಶಾಸ್ತ್ರಗ್ರಂಥಗಳಲ್ಲಿ ಹೇಳಿರುವ ಪರಿಭಾಷೆಗಳನ್ನು ಓದುಗ ಸ್ನೇಹಿಯಾಗಲೆಂದು ಅವುಗಳ ಅರ್ಥಗಳನ್ನೆಲ್ಲ ಹೇಳಲು ಯತ್ನಿಸಿದೆ. ಪರಿಭಾಷೆಗಳನ್ನು ಅರ್ಥ ಮಾಡಿಕೊಳ್ಳುವುದೂ, ಅವುಗಳನ್ನು ಅಂತೆಯೇ ಉಪಯೋಗಿಸುವುದು ಪ್ರತಿಶಾಸ್ತ್ರಕ್ಕೂ ಬಹಳ ಮುಖ್ಯ. ಆಯಾ ಶಾಸ್ತ್ರಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲೂ, ಅವುಗಳ ಶುದ್ಧತೆಯನ್ನು ಕಾಪಿಡಲೂ, ಪರಂಪರೆಯನ್ನು ಸರಿಯಾದ ಹಾದಿಯಲ್ಲಿ ಮುಂದುವರೆಸಲೂ, ಪ್ರಾಚೀನದ್ದನ್ನು ಅರ್ಥ ಮಾಡಿಕೊಳ್ಳಲೂ ಈ ಪರಿಭಾಷೆಗಳ ಸರಿಯಾದ ಪ್ರಯೋಗವು ಬಹಳ ಮುಖ್ಯವೇ ಆಗಿದೆ. ಇದರಲ್ಲಿ ಸ್ವೇಚ್ಛೆಯು ಎಂದೂ ಸಲ್ಲದು. ಅಂಥ ಸ್ವೇಚ್ಛೆ ಆಭಾಸಕ್ಕೆ ಕಾರಣವಾಗುತ್ತದೆ.

***ಪಂಡರೀಕವಿಠ್ಠಲನ ನರ್ತನನಿರ್ಣಯದಲ್ಲಿ ಚಿಂದು ಬಗೆಗಳು* —**

ಪಂಡರೀಕ ವಿಠ್ಠಲನು ತನ್ನ ನರ್ತನನಿರ್ಣಯದಲ್ಲಿ ಶ್ಲೋಕ 822 ರಿಂದ 844ನೆಯ ಶ್ಲೋಕದವರೆಗೂ ಚಿಂದುನೃತ್ಯ ಹಾಗೂ ಅವುಗಳ ಬಗೆಗಳನ್ನು ಹೇಳಿದ್ದಾನೆ. ನರ್ತನನಿರ್ಣಯವು ಚಿಂದೂ ನೃತ್ಯವನ್ನು ಕುರಿತಾಗಿ ಹೀಗೆ ಹೇಳಿದೆ :

ದ್ರಾವಿಡ ದೇಶದ ದೇಶೀ ಬಂಧವಾದ ನೃತ್ಯವನ್ನು ಚಿಂದು ಎಂದು ಕರೆಯುತ್ತಾರೆ. ಅದು ಆರು ಬಗೆಯಾಗಿ ಕಂಡುಬರುತ್ತದೆ. ಅವು —ಶುದ್ಧ ಚಿಂದು, ವಿಡು ಚಿಂದು, ತಿರುವಣ ಚಿಂದು, ಮಾಲಾ ಚಿಂದು, ಕೋಲಚಾರಿ ಚಿಂದು, ಹಾಗೂ ಗೀತಮುದ್ರಾ ಪದವು ಆದಿಯಲ್ಲಿರುವ ಚಿಂದು. (ಇವುಗಳಲ್ಲಿ ಶುದ್ಧ ಚಿಂದುವಿನ ಲಕ್ಷಣವು ನರ್ತನನಿರ್ಣಯದಷ್ಟೇ ಅಲ್ಲದೆ, ಬೇರೆಲ್ಲಿಯೂ ದೊರೆಯುವುದಿಲ್ಲ. ಬಹುಶಃ ಇಲ್ಲಿ ಮೂರು ಶ್ಲೋಕಾರ್ಧಗಳಷ್ಟು ಗ್ರಂಥಪಾತವಿರಬಹುದೆಂದು ರಾ. ಸ. ರವರು ಬರೆದಿದ್ದಾರೆ) .

— ಯಾವುದರಲ್ಲಿ ಉದ್ಗ್ರಾಹವಿದ್ದು ಧ್ರುವದಲ್ಲಿ ಬಿಡುತೆ ಇದೆಯೋ ಅದು ವಿಡುಚಿಂದು. ಪ್ರಬಂಧನಾಯಕನ ಅಂಕಿತವಿರುವ ಉದ್ಗ್ರಾಹ, (ಎಂದರೆ ಆರಂಭದ ಸಾಹಿತ್ಯ) ಅದರ ಪ್ರಮಾಣದ ಒಂದೂವರೆಯಷ್ಟು ಧ್ರುವ, (ಎಂದರೆ ಮುಖ್ಯವಾಗಿರುವ ಸಾಹಿತ್ಯವನ್ನು ಪುನಃ ಪುನಃ ಹಾಡುವ ಭಾಗ) — ಇವೆರಡನ್ನೂ ಪುನಃ ಪುನಃ ಹಾಡಿದರೆ ತಿರುವಣಿ ಚಿಂದು ಎನ್ನಿಸಿಕೊಳ್ಳುತ್ತದೆ. ಎಂತಹ ಅಥವಾ ಯಾವ, ಎಷ್ಟು ಇತ್ಯಾದಿಯಾಗಿ ನಿಯತವಿಲ್ಲದ ಪದಗಳ ಭಾಗಗಳಿಂದಾದ ಮಾಲೆಯೇ, ಮಾಲಾ ಶಬ್ದವು ಆದಿಯಲ್ಲಿರುವ ಚಿಂದುಕವಾಗುತ್ತದೆ. ಯಾವುದರಲ್ಲಿ ಪಾಟಾಕ್ಷರಗಳು (ಎಂದರೆ, ತರಿಕಿಟ ಮುಂತಾದ ಅವನದ್ಧವಾದ್ಯಗಳಿಗೆ ಉಪಯುಕ್ತವಾಗುವ ಶಬ್ದಗಳು), ಇವುಗಳ ಆಲಾಪ, ಎಂದರೆ ಸೊಲ್ಲುಕಟ್ಟುಗಳ ಗಾಯನ, ಅನಂತರ ತಾಲರಹಿತವಾದ, ಪದ-ರಾಗಗಳಿಂದ ಉದ್ದೀಪನಗೊಂಡ, ಆಯಾ ಕಥೆಯ ಬೀಜವನ್ನು ಸೂಚಿಸುವ ವಾಕ್ಯಗಳನ್ನು ಒಳಗೊಂಡ, ಆಮೇಲೆ ಐದು ಅಥವಾ ಏಳು ಚಿಂದುಗಳು, ಮಧ್ಯ ಮಧ್ಯದಲ್ಲಿ ಪಿಲ್ಲಮೂರು, ಕೈಮೂರೂಗಳು, ರಮ್ಯವಾದ ಕಲಾಸಗಳಿಂದ ಅತಿಸುಂದರವನ್ನಾಗಿಸಿದ ನೃತ್ಯವಿದ್ದು, ಜೊತೆಗೆ ಶಸ್ತ್ರಗಳನ್ನೂ ಕೂಡಿದ ಕಥೆಯ ಆವೃತ್ತಿ — ಇವುಗಳಿದ್ದರೆ ಅದು ಕೋಲಚಾರಿ ಚಿಂದುವಾಗುತ್ತದೆ. ಬೇರೆ ಕಥೆಯ ಪ್ರವರ್ತನೆಯಿದ್ದರೆ ಅಂತಹದು ಕಟ್ಟಣಚಿಂದುವಾಗುತ್ತದೆ. (ಇಲ್ಲಿ ಗಮನಿಸಿ - ಈಗಿನ ಚಿಂದುವಿನಂತೆಯೇ ಆಗಲೂ ಶಸ್ತ್ರವನ್ನು ಪ್ರಯೋಗಿಸಿಕೊಳ್ಳುತ್ತಿದ್ದ ಚಿಂದೂ ಇತ್ತು ಎಂಬ ಈ ವಿಷಯವು ಕಲಾಪ್ರಕಾರದ ಇತಿಹಾಸಕ್ಕೆ ಒಂದು ಶಾಸ್ತ್ರೀಯ ದಾಖಲೆಯೇ ಆಗಿದೆ).

Copyright reserved

ಗೀತಕ್ಕೆ ತನ್ನದೇ ಆದ ಗೀತಮುದ್ರಾ ಶಬ್ದವು ಆದಿಯಲ್ಲೇ ಇರುವಂತಹ ಚಿಂದುಕವು ಎಂಟು ವಿಧಗಳಿವೆಯೆಂದು ಪಂಡರೀಕ ವಿಠ್ಠಲನು ಹೇಳಿದ್ದಾನೆ. ಮೇಲಾಪಕ (ಹಾಡಿನಲ್ಲಿ ಅನುಪಲ್ಲವಿಯಂತೆ ಬರುವ ಭಾಗ,) ಅಂತರ (ಹಾಡಿನ ಅಂತ್ಯಕ್ಕೂ ಸ್ವಲ್ಪ ಮೊದಲು ಇರುವ ಸಾಹಿತ್ಯ, ಇವು ಸೂಡಾದಿ ಪ್ರಬಂಧಗಳಲ್ಲಿ ಇರುವಂತಹದು), ಹಾಗೂ ಆಭೋಗಗಳಲ್ಲಿ (ಹಾಡಿನ ಕಡೆಯ ಭಾಗ) - ಇವುಗಳೆಲ್ಲ ಸೇರಿ ಅಥವಾ - ಬಿಡಿ ಬಿಡಿಯಾಗಿಯೂ ಲೋಪವಾಗುವುದರಿಂದ ಎರಡು, ಮೂರು, ನಾಲ್ಕು, ಐದು ಧಾತುಗಳ ಚಿಂದುಗಳು ಆಗುತ್ತವೆ. ಮೇಲಾಪಕದಲ್ಲಿ ಪ್ರಯೋಗವಿದ್ದರೆ, (ವಾದ್ಯಗಳ ವಾದನವಿದ್ದರೆ) ಕೆಲವೊಮ್ಮೆ ಧ್ರುವದಲ್ಲಿ ಪ್ರಯೋಗವಿದ್ದರೆ, ಬಿಡುತೆಯು ಉದ್ಗ್ರಾಹದಲ್ಲಿರುತ್ತದೆ. ಅಂತರದಲ್ಲಿ ಪ್ರಯೋಗವಿದ್ದರೆ ಆಗ ಧ್ರುವದಲ್ಲಿ ಬಿಡುತೆ ಇರುತ್ತದೆ. ಹೀಗೆಯೇ ಯಾವಾಗಲೂ ಈ ಚಿಂದುವಿನ ಬಿಡುತೆ ಇರುತ್ತದೆ. (ಬಿಡುತೆಯೆಂದರೆ ಲಯ ವಾದ್ಯಗಳಲ್ಲಿ ಸಣ್ಣ ಮುಕ್ತಾಯದಂತಹ ಪಾಟಾಕ್ಷರಗಳ ವಾದನ). ಗೀತಮುದ್ರಾ ಚಿಂದುವು ಸ್ಯಂ(ಸ್ಪಂ)ದಿತಾ, ಅಪಸ್ಯಂದಿತಾ, ಅಧ್ಯರ್ತಿತಾ, ಸ್ಥಿತಾವರ್ತಾ – ಪ್ರಮುಖವಾಗಿ ಇವುಗಳಿಂದಲೂ ವೈಶಾಖ, ಮಂಡಲ, ಆಲೀಢ, ಪ್ರತ್ಯಾಲೀಢ ಇತ್ಯಾದಿ ಸ್ಥಾನಕಗಳಿಂದಲೂ, ಹಾಗೆಯೇ ರೇಖಾ – ಸೌಷ್ಠವ – ಲಾಸ್ಯಾಂಗಳಿಂದಲೂ, ಶಿರಸ್ಸು – ಪಾದ – ಹಸ್ತಗಳ ರೇಚಕಗಳಿಂದಲೂ, ಭಾವ-ಹಾವ - ವಿಲಾಸಗಳಿಂದಲೂ, ಸುಲೂ – ಚಿತ್ರಕಲಾಸಗಳಿಂದಲೂ ಮನೋಹರವಾದ, ಪಾಟ (=ಸೊಲ್ಲುಕಟ್ಟು) ವನ್ನು ಅನುಸರಿಸುವ, ಚಲನಶೀಲವಾದ ಇಂಪಾದ ಗೆಜ್ಜೆಯ ಧ್ವನಿಯಿಂದಲೂ, ಆಯಾ ಜಾತಿಗೆ ಸೇರಿದ, ದೇಶಭಾಷೆಯ ಸಾಹಿತ್ಯದಿಂದ ತಮಿಳು ಭಾಷೆಯೊಡಗೂಡಿ ಶೋಭಿಸುವ, ಸಂಪ್ರದಾಯಾನುಸಾರವಾದ ಚಿಂದು ನೃತ್ಯವನ್ನು ಆಚರಿಸಬೇಕು ಎಂದು ನರ್ತನನಿರ್ಣಯವು ಹೇಳಿದೆ.

ಪಂಡರೀಕ ವಿಠ್ಠಲನು ಚಿಂದುವಿನ ಲಕ್ಷಣಗಳೊಂದಿಗೇ ಘರ್ಘರ ಭೇದಗಳನ್ನು ಸೇರಿಸಿಯೇ ಹೇಳಿದ್ದಾನೆ. ಘರ್ಘರವೆಂದರೆ ಗೆಜ್ಜೆಗಳ ವಿಶೇಷವಾದ ಚಲನೆಗಳು. ಚಿಂದುವಿಗೆ ನೀಡಿದಂತಹ ಈ ಲಕ್ಷಣಗಳಿಂದಾಗಿ ಆತನ ಕಾಲದಲ್ಲಿ ಚಿಂದು ನೃತ್ತ - ನೃತ್ಯಗಳು ಎಷ್ಟು ಶಾಸ್ತ್ರೀಯವಾಗಿ ನರ್ತಿಸಲ್ಪಡುತ್ತಿದ್ದವೆಂದೂ, ಈಗ ಈ ನೃತ್ತಕಲೆಯಲ್ಲಿ ಎಷ್ಟು ನಷ್ಟವಾಗಿದೆಯೆಂದೂ ನಾವು ಊಹಿಸಬಹುದು.

ಅರ್ಥ ಕೋಶಗಳಲ್ಲಿ ಘರ್ಘರ ಶಬ್ದಕ್ಕೆ ಕರ್ಕಶವಾದ ಅನುಕರಣ ಶಬ್ದ, ಕೊಡ ಎಂದೂ, ಘರ್ಘರಿಕೆ ಶಬ್ದಕ್ಕೆ ಗೆಜ್ಜೆಗಳಿಂದ ಕೂಡಿದ ಒಂದು ಆಭರಣ, ಒಂದು ಬಗೆಯ ವಾದ್ಯವೆಂದು ಹೇಳಿದರೂ, ನೃತ್ತ - ನೃತ್ಯ - ನಾಟ್ಯಗಳ ಪರಿಭಾಷೆಯಲ್ಲಿ ಘರ್ಘರವೆಂಬುದು ಪಾದದ ವಿವಿಧ ಚಲನೆಯಿಂದ ಉಂಟಾಗುವ ಗೆಜ್ಜೆಗಳ ನಾದವೆಂದು ಸಂಜ್ಞೆ. ಸಂಗೀತರತ್ನಾಕರಾದಿ ಸಂಗೀತಶಾಸ್ತ್ರಗ್ರಂಥಗಳು ಘರ್ಘರದ ಭೇದಗಳನ್ನು ಹೇಳಿವೆ. ಸಂಗೀತರತ್ನಾಕರವನ್ನೇ ಘರ್ಘರದ ಈ ಲಕ್ಷಣಗಳಿಗಾಗಿ ಅಕ್ಷರಶಃ ಆಶ್ರಯಿಸಿದ ಪುಂಡರೀಕ ವಿಠ್ಠಲನು ತನ್ನ ನರ್ತನನಿರ್ಣಯದ ನಾಲ್ಕನೆಯ ನರ್ತಕ (ನೃತ್ತ) ಪ್ರಕರಣದ 835 ನೆಯ ಶ್ಲೋಕದಿಂದ 844 ನೆಯ ಶ್ಲೋಕಗಳಲ್ಲಿ ಘರ್ಘರ ಭೇದಗಳನ್ನು ಹೀಗೆ ವಿವರಿಸಿದ್ದಾನೆ. ಗೆಜ್ಜೆಯನ್ನು ವಾದ್ಯವೆಂದೇ ಆತನು ಪರಿಗಣಿಸಿದ್ದನ್ನು ನಾವು ಗಮನಿಸಬೇಕು. ಘರ್ಘರದ ಲಕ್ಷಣವು ಹೀಗಿದೆ. —

— “ಗೆಜ್ಜೆವಾದ್ಯಗಳ ಹೊಡೆತವು ಎಲ್ಲಿರುತ್ತದೋ ಅದು ಘರ್ಘರವೆಂದು ಸಮ್ಮತಿಸಿದೆ. ಅವು ಪಡಿವಾಟ, ಸಿರಿಪಿಟೀ, ಅಪಡವ, ಅಲಗಪಾಟ, ಸಿರಿಹಿರ ಮತ್ತು ಖುಲುಹುಲು ಎಂದು ಆರುವಿಧ. ನೆಲದ ಮೇಲೆ ತುದಿಗಾಲುಗಳನ್ನೂರಿ ಒಂದಾದಮೇಲೊಂದರಂತೆ ನೆಲವನ್ನು ಎರಡೂ ಹಿಮ್ಮಡಿಗಳಿಂದ ಅಥವಾ ಅಥವಾ ಒಂದರಿಂದಲೇ ಕುಟ್ಟುವುದು ಪಡಿವಾಟವೆನ್ನಿಸುತ್ತದೆ. ನೆಲದ ಮೇಲೆ ಅಂಗಾಲನ್ನೂರಿ ಮುಂದಕ್ಕೂ ಹಿಂದಕ್ಕೂ ಮತ್ತೆ ಮತ್ತೆ ಮುಂದಕ್ಕೆ ಜಾರಿಸುವುದು ಮತ್ತು ಹಿಂದಕ್ಕೆ ಜಾರಿಸುವುದು ಸಿರಿಪಿಟೀ ಎಂಬ ಘರ್ಘರ ಲಕ್ಷಣವಾಗುತ್ತದೆ. ಒಂದೇ ಅಂಗಾಲಿನಿಂದ ನೆಲವನ್ನು ಕುಟ್ಟುವುದು ಅಪಡವ. ಎರಡು ಪಾದಗಳನ್ನೂ ಅಂತರಿಕ್ಷದಲ್ಲಿ ಒಂದಾದಮೇಲೊಂದರಂತೆ ಕೋಮಲವಾಗಿ ಮೃದಂಗದ ಉಲ್ಲೋಲಪಾಟದ ಹಾಗೆ ನಡುಗಿಸುವುದು ಅಲಗಪಾಟ. ಒಂದು ಸಮಪಾದವಿರಲಾಗಿ ಅದನ್ನು ಇನ್ನೊಂದು ಮುಂದಕ್ಕೆ ಪ್ರೇರಿಸುತ್ತಿದ್ದರೆ ಅದರ ಮೊಳಕಾಲಿನ ನಡುಕಕ್ಕೆ ಸಿರಿಹಿರವೆಂದು ಹೆಸರು. ಎಡತುದಿಗಾಲು ನೆಲವನ್ನೂರಿ ಹಿಮ್ಮಡಿಯಿಂದ ನೆಲವನ್ನು ಕುಟ್ಟುವುದು, ಇನ್ನೊಂದರ ತುದಿಗಾಲು ನೆಲವನ್ನು ಮುಟ್ಟಿ ಬಲ - ಎಡಗಳಲ್ಲಿ ತಿರುಗುವುದು ಯಾವುದಿದೆಯೋ ಅದನ್ನು ಖುಲುಹುಲ ಎಂದು

Copyright preserved

ನೃತ್ತಪಂಡಿತರು ಹೇಳುತ್ತಾರೆ. ಹೀಗೆಯೇ ಸುಂದರವಾದ ಬೇರೆ ಘರ್ಘರಗಳನ್ನು ಪ್ರಯೋಕ್ತೃಗಳು ಊಹಿಸಿಕೊಳ್ಳಬೇಕು, ಎಲ್ಲ ಘರ್ಘರ ಭೇದಗಳನ್ನೂ ತಾಲವನ್ನು ಅನುಸರಿಸಿಕೊಂಡೇ ಮಾಡಬೇಕು" ಎಂದು ನರ್ತನನಿರ್ಣಯವು ಹೇಳಿದೆ.

ಶಾರ್ಙ್ಗದೇವನು ತನ್ನ ಸಂಗೀತರತ್ನಾಕರದಲ್ಲಿ ಗೆಜ್ಜೆವಾದ್ಯದ ಈ ವಿಶೇಷ ರೀತಿಯ ಚಲನೆಯ ಹೊಡೆತವನ್ನು ವಹನಿಯೆಂದು ಕರೆದಿದ್ದಾನೆ. ವಹನಿಯನ್ನು ಸಿಂಹಭೂಪಾಲ ಹಾಗೂ ಕಲ್ಲಿನಾಥರು ಅಭ್ಯಾಸವಿಶೇಷವೆಂದು ವ್ಯಾಖ್ಯಾನಿಸುತ್ತಾರೆ. ಘರ್ಘರ ಭೇದಗಳು ಕಥಕ್ ನೃತ್ತದಲ್ಲಿ ಹೆಚ್ಚು ಪ್ರಯೋಗದಲ್ಲಿ ಉಳಿದುಕೊಂಡಿರುವಂತೆ ತೋರುತ್ತದೆ. ಸಂಗೀತರತ್ನಾಕರದ ಸಿರಿಪಾಟವು ನರ್ತನನಿರ್ಣಯದಲ್ಲಿ ಸಿರಿಪಿಟೀ ಆಗಿದೆ. ಅಪಡವಪವು ಅಪಡವ ಆಗಿದೆ. ಬಹುಶಃ ಈ ವ್ಯತ್ಯಾಸಗಳು ಗ್ರಂಥವನ್ನು ಪ್ರತಿಮಾಡಿದವರಿಂದ ಉಂಟಾಗಿರುವ ಸಾಧ್ಯತೆಗಳನ್ನು ಅಲ್ಲಗೆಳೆಯುವಂತಿಲ್ಲ.

ಮೃದಂಗದ ಉಲ್ಲೋಲಪಾಟವೆನ್ನುವುದೊಂದು ಹಸ್ತಪಾಟವಿದೆ. ಮಾರ್ದಂಗಿಕನು ಎಂದರೆ ಮೃದಂಗವಾದಕನು ತೂಗಾಡುವ ಬಲಗೈಯಲ್ಲಿ, ನಿಂತ ಹೆಬ್ಬೆರಳನ್ನು ಎಡಗೈ ಮೇಲುಗಡೆಗೆ ಥಟ್ಟನೆ ಸೆಳೆಯುವುದು ಉಲ್ಲೋಲ. ಅದರ ಪಾಟಾಕ್ಷರಗಳು 'ಝ್ಗೇಥಾಂ ಝ್ಗೇಥಾಂ ಥಾಂ ಥಾಂ ಝ್ಗೇ' ಎಂಬುದಾಗಿರುತ್ತದೆ. ಸಂಗೀತರತ್ನಾಕರವು ಉಲ್ಲೋಲದ ಮೂರು ಪ್ರಕಾರಗಳನ್ನು ಪ್ರತಿಪಾದಿಸುತ್ತದೆ. ಅದರಲ್ಲಿ ಈಗ ಮೇಲೆ ಹೇಳಿದುದು ಮೊದಲನೆಯದು, ಅಂಗೈ ಮುಖದ ಮಧ್ಯದಲ್ಲಿ ಬಲ ಹೆಬ್ಬೆರಳನ್ನಿಟ್ಟು ನುಡಿಸುವುದು ಎರಡನೆಯದು, ಹೆಬ್ಬೆರಳಿನ ಸಮೇತವಾಗಿ ಇದೇ ಬಲಗೈಯಿಂದ ಹೊಡೆಯುವುದು ಮೂರನೆಯ ಉಲ್ಲೋಲದ ಪ್ರಕಾರವಾಗಿದೆ.

ನೃತ್ತರತ್ನಾವಳಿಯಲ್ಲಿ ಚಿಂತು (ಚಿಂದು) ನೃತ್ತ —

ಜಾಯಸೇನಾಪತಿಯ ನೃತ್ತರತ್ನಾವಳಿಯಲ್ಲಿಯೂ ಅನೇಕ ದೇಶೀನೃತ್ಯಗಳ ಲಕ್ಷಣಗಳನ್ನು ಹೇಳಿದೆ. ಅದರಲ್ಲಿ ಚಿಂತು/ಚಿಂದೂ ನೃತ್ತವೂ ಒಂದು.

1) श्रव्यैर्द्रावडिदेशीयैःक्लृप्तैस्ततकाकुरीतभिः। गीतार्थाभनियोपेतैःद्वपिदैश्र्चन्तिुसंज्ञकैः।
2) चन्तिुनृत्तमति प्रोक्तमदिं द्रवडिवल्लभम् ।। (ನೃ.ರ. 144, 116).

ಜಾಯಸೇನಾಪತಿಯು ಚಿಂತುನೃತ್ತವು ದೇಶೀ ನೃತ್ತದ ಬಗೆಗಳಲ್ಲಿ ಒಂದೆಂದೂ, ದ್ರಾವಿಡದೇಶದ್ದೆಂದೂ, ದ್ರಾವಿಡ ದೇಶದ ಜನರಿಗೆ ಈ ನೃತ್ತವು ಬಹು ಪ್ರಿಯವೆಂದೂ ಹೇಳುತ್ತಾನೆ. ಸುಂದರವಾಗಿ ಅಲಂಕರಿಸಿಕೊಂಡ ಸ್ತ್ರೀಯರು ತಮ್ಮ ಕೈಗಳನ್ನೂ ದೇಹವನ್ನೂ ಲಯಬದ್ಧವಾಗಿ ಒನಪಿನಿಂದ ಬಾಗಿ ಬಳುಕಿಸುತ್ತಾ ವಾದ್ಯಮೇಳಕ್ಕೆ ನರ್ತಿಸುತ್ತಾರೆಂದೂ, ಕೈಗಳಲ್ಲಿ ಚಪ್ಪಾಳೆ ತಟ್ಟುತ್ತ, ಲಲಿತವಾದ ಹೆಜ್ಜೆಗಳನ್ನಿಡುತ್ತ ಲಾಸ್ಯಾಂಗಗಳ ಪದ, ಗತಿ, ಚಾರಿಗಳನ್ನು ಅನ್ವಯಿಸಿ ನರ್ತಿಸುತ್ತಾರೆಂದೂ ದ್ವಿಪದಿ ಛಂದಸ್ಸಿನಲ್ಲಿ ರಚಿಸಿದ ಪ್ರಬಂಧಗಳನ್ನು ಹಾಡುತ್ತಾರೆಂದೂ, ಈ ಪ್ರಬಂಧಗಳ ಪದಗಳ ಅರ್ಥಕ್ಕೆ ತಕ್ಕಂತೆಯೂ ಲಾಸ್ಯಾಂಗಗಳಿಗೆ ತಕ್ಕಂತೆಯೂ ಅಭಿನಯಿಸುತ್ತಾರೆಂದು ವರ್ಣಿಸಿದ್ದಾನೆ. ನೃತ್ತರತ್ನಾವಳಿಯಲ್ಲಿ ಪ್ರಬಂಧ ಹಾಗೂ ವಾದ್ಯಗಳೊಂದಿಗೆ ಚಿಂದುವಿಗೆ ಹೇಳಿದ ಇನ್ನೊಂದು ಪ್ರಮುಖ ಲಕ್ಷಣವೆಂದರೆ ಸ್ತ್ರೀಯರು ತಮ್ಮ ಸ್ತನಗಳು, ತೋಳುಗಳು ಹಾಗೂ ಜಘನಗಳನ್ನು ಲಯಬದ್ಧವಾಗಿ ಕುಣಿಸುತ್ತ ನರ್ತಿಸುವುದು. ಇದು ದೇಶೀ ಲಾಸ್ಯಾಂಗವಾದ 'ಕಿತ್ತು' ವನ್ನು ಹೋಲುತ್ತದೆ : 'प्रयोगैश्र्चापि तैः कत्तिुप्रचुरैस्स्तुलयैर्मुहुः'.

Copyright preserved

ಜಾಯನನು ಹೇಳಿರುವ ಚಿಂದುವಿನ ಲಕ್ಷಣಗಳು ವೇಮನ ಸಂಗೀತಚಿಂತಾಮಣಿ, ದಾಮೋದರನ ಸಂಗೀತದರ್ಪಣ, ದೇವಣನ ಸಂಗೀತಮುಕ್ತಾವಲಿಯಲ್ಲಿಯೂ ಇವೆ. ಇವುಗಳಲ್ಲಿಯೂ ದ್ರಾವಿಡದೇಶದ ಭಾಷೆಯಲ್ಲಿ ರಚಿಸಲ್ಪಡುವ ಪ್ರಬಂಧವೆಂದೇ ಉಲ್ಲೇಖಿಸಿದೆ.

ಶುಭಂಕರ ವಿರಚಿತ ಸಂಗೀತದಾಮೋದರವು ಚಿಂದುವು ದ್ರಾವಿಡಭಾಷೆಯದು ಎಂದು ಲಕ್ಷಿಸುವುದರೊಂದಿಗೆ ನರ್ತಕರು ಕೈಗಳಲ್ಲಿ ತ್ರಿಶೂಲವನ್ನು ಹಿಡಿದು ನರ್ತಿಸುತ್ತಾರೆಂದೂ, ಚಿಂದುವಿನಲ್ಲಿ ವಿಡಚಿಂದು ಮತ್ತು ಕಲಚಾರಿಯೆಂಬ ಎರಡು ಮುಖ್ಯ ವಿಧಗಳಿವೆಯೆಂದೂ ಹೇಳುತ್ತದೆ (ಪು. 222. ತಂಜಾವೂರು ಸರಸ್ವತಿಮಹಲ್ ನ ಪ್ರತಿ). ದೇವಣನ ಸಂಗೀತಮುಕ್ತಾವಲಿಯು (ತಂಜಾವೂರು ಹಸ್ತಪ್ರತಿ ಪು. 113) ಚಿಂದುವು ತೆಲುಗು ಹಾಗೂ ತಮಿಳು ಭಾಷೆಯ ಪ್ರಬಂಧವನ್ನು ಉಳ್ಳದ್ದು, ಲಯದ ವೇಗೋತ್ಕರ್ಷವನ್ನು ಹೊಂದಿರುವಂತಹದು ಕಲಾಸವನ್ನು ನರ್ತಿಸಬೇಕಾದದ್ದು ಎಂದು ವರ್ಣಿಸಿದೆ ಹಾಗೂ ಪ್ರಬಂಧದ ಲಕ್ಷಣಗಳನ್ನು ಹೇಳಿದೆ.

ಕಲಾಸವೆನ್ನುವುದು ಒಂದು ವಾದ್ಯ 'ರೂಪಕ'. ಇದು ದೇಶೀನೃತ್ತಾಂಗವೆಂದು ವೇದನು ಸಂಗೀತಮಕರಂದದಲ್ಲಿ ಹೀಗೆ ನಿರೂಪಿಸಿದ್ದಾನೆ :
'ವಿವಿಧೈಃ ಪಾಟಶಬ್ದೈಶ್ಚಾಲಂಕೃತಂ ಯತಿಮಿಶ್ರಿತಮ್ ।
ಮಧ್ಯೆ ಪಿಲ್ಲಮೂರೂ ಯುಕ್ತಂ ಗ್ರಹಶ್ಚಾಪಿ ಮನೋಹರಮ್ ।
ಕಲಾಸರೂಪಕಂ ಪ್ರೋಕ್ತಂ ಸಂಗೀತಜ್ಞೈಃ ಪುರಾತನೈಃ।। (ಉದ್ಧೃತಿ, ರಾಮಕೃಷ್ಣ ಕವಿ, ಪು. 122. ಭರತಕೋಶ). ಪಿಲ್ಲಮೂರೂ ಎಂಬುದೂ ಸಹ ನೃತ್ಯಕ್ಕೆ ಅಳವಡಿಸುತ್ತಿದ್ದ ವಾದ್ಯಪ್ರಬಂಧವೇ.
ಪಂಡರೀಕವಿಠ್ಠಲನು ಕಲಾಸವು ವಾದ್ಯಪ್ರಬಂಧದ ಅವಳಿಖಂಡಗಳನ್ನು ಹೊಂದಿದ್ದು ಪ್ರೌಢಿಮೆಯಿಂದ ಕೂಡಿರುತ್ತದೆ ಎಂದು ಲಕ್ಷಿಸುತ್ತಾನೆ. (ನ. ನಿ. ಶ್ಲೋ. 89)..

ತಂಜಾವೂರು ದೊರೆಯಾಗಿದ್ದ ಶಹಜಿಯ ಆಶ್ರಯದಲ್ಲಿದ್ದ ವೇದಸೂರಿಯು ತನ್ನ ಸಂಗೀತಮಕರಂದದಲ್ಲಿ ನೃತ್ಯಾಧ್ಯಾಯದಲ್ಲಿ ಪ್ರಥಮ ಭಾಗದಲ್ಲಿ ಶುದ್ಧನೃತ್ಯಗಳಾಗಿ ಪುಷ್ಪಾಂಜಲಿ, ನಾಂದಿ, ಕಲ್ಯಾಣ ತಾಳ, ಮುಖಚಾಲೀ (ಪ್ರಥಮನೃತ್ಯ), ಲಕ್ಷ್ಮೀತಾಳ, ಮನೋಹರವೆಂಬ ಅಂಗಹಾರ, ನಾಮಾವಳಿ, ಯತಿನೃತ್ತ, ಶಬ್ದಚಾಲಿ, ನೇರಿಗಳು, ಉಡುಪುಗಳು, ತಾಳ ಉಡುಪಗಳು, ಫ್ವಾಡ ಮತ್ತು ಲಾಗಗಳು, ತಿರಿಪ, ತೀವಟ, ಸೂಡಾದಿ ಶಾಬ್ದ ನೃತ್ತ, ವಿವಿಧ ಶಬ್ದ ನೃತ್ತಗಳು, ವಿವರ್ತನ ನೃತ್ತ, ಕ್ವಾಡ ನೃತ್ತ, ಕೌಚಟ, ಸೂಡಾದಿ ಗೀತನೃತ್ತ, ಪ್ರಬಂಧ ನರ್ತನ, ಬೇರೆ ಬೇರೆ ಗೀತೆಗಳಿಗೆ ನೃತ್ತ, ಗೊಂಡಲಿ ನೃತ್ಯದ ನಿಯಮಗಳು —ಇವಿಷ್ಟನ್ನು ಹೇಳಿದರೆ ಎರಡನೆಯ ದೇಶೀ ನೃತ್ಯಗಳ ಭಾಗದಲ್ಲಿ ಲಾಸ್ಯಾಂಗಗಳು, ಚಿಂದು, ಧರು, ಕಟ್ಟರ, ಪಿಲ್ಲಮೂರೂ, ಮಾನ, ಕೈಮೂರು ಕಲಾಸಕ, ವೈದ್ಯೋತ, ಬಂಧನೃತ್ಯ, ಕಲ್ಪನೃತ್ಯ, ಜಕ್ಕರೀ, ಧ್ರುಪದ, ಬಹುರೂಪಕ, ಪೇರುಣೀ, ಪೆರುಣಿ ಪದ್ಧತಿ, ಚಚ್ಚರಿ, ರವ ಬೇಧಗಳನ್ನು ಹೇಳಿದ್ದಾನೆ. ಇದರಲ್ಲಿ ಚಿಂದನೃತ್ಯವು ದ್ರಾವಿಡಿ (ತಮಿಳು) ಭಾಷೆಯದೆಂದೂ, ಜಕ್ಕರಿಯು ಜೋನ್ಪುರ ಭಾಷೆಯದೆಂದೂ ಚಚ್ಚರಿಯು ತಿಹುರ್ಟ್ ಭಾಷೆಯದೆಂದೂ ಧರುವು ತೆಲುಗಿನದೆಂದೂ, ಲಗಚಾರವು ಪರ್ಶಿಯನ್ ಭಾಷೆಯದೆಂದೂ ಧ್ರುಪದವು ಉತ್ತರ ಭಾರತದ ಭಾಷೆಗಳಲ್ಲಿರುವುದೆಂದೂ, ಪ್ರಬಂಧವು ಮಹಾರಾಷ್ಟ್ರ ಭಾಷೆಯದೆಂದೂ ಉಲ್ಲೇಖಿಸಲ್ಪಟ್ಟಿದೆ. ತಾಂಡವ, ಲಾಸ್ಯಗಳ ದೇಶೀಯ ಸಮಯವನ್ನು ವರ್ಣಿಸುವಾಗಲೂ ವೇದಸೂರಿಯು ದೇಶೀ ನೃತ್ಯವು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಜನಾಭಿರುಚಿಗೆ ವ್ಯತ್ಯಾಸವಾಗುತ್ತದೆಂದು ಹೇಳಿ ಚಿಂದು, ಧರು, ಧ್ರುವಪದ ಇತ್ಯಾದಿಗಳು ದೇಶೀ ನೃತ್ಯಗಳು ಎಂದು ಹೇಳುತ್ತಾನೆ.

ವೇದಸೂರಿಯು ಈ ಗ್ರಂಥವನ್ನು ರಚಿಸಿದ ಕಾಲದಲ್ಲಿ ಮಹಾರಾಷ್ಟ್ರವೆಂಬುದು ಆಗ ಇದ್ದ ಬೃಹತ್ ಕರ್ಣಾಟಕಕ್ಕೆ ಅನ್ವಯವಾಗುತ್ತಿತ್ತು, ಶಹಜಿ ಮುಂತಾದ ತಂಜಾವೂರು ದೊರೆಗಳು ಕರ್ಣಾಟಕದವರಾಗಿದ್ದರು ಎಂಬ ಐತಿಹಾಸಿಕ ಸಂಗತಿಯ ಹಿನ್ನೆಲೆಯನ್ನು ನಾವು ಗಮನಿಸಬೇಕಾಗಿದೆ.

Copyright preserved

ಕೆ. ಕುಸುಮಾಬಾಯಿಯವರು ತಮ್ಮ ಗ್ರಂಥದಲ್ಲಿ ಚಿಂದು ನೃತ್ತ ಕಲೆಯು ತಂಜಾವೂರು ಹಾಗೂ ಮಧುರೈನ ನಾಯಕ ದೊರೆಗಳ ಕಾಲದಲ್ಲಿ ಬಹಳ ಪ್ರಿಯವಾದ ಪ್ರಖ್ಯಾತವಾಗಿದ್ದ ನೃತ್ತವಾಗಿತ್ತೆಂದು ಹೇಳುತ್ತಾರೆ. ಕಾಕತೀಯರ ಕಾಲದಲ್ಲಿ ಪ್ರಿಯವೂ ಪ್ರಸಿದ್ಧವೂ ಆಗಿತ್ತೆಂದು ಜಾಯಪಸೇನಾನಿಯ ನೃತ್ತರತ್ನಾವಳಿಯಿಂದಲೇ ತಿಳಿಯುತ್ತದೆ. ಈ ನೃತ್ತದಲ್ಲಿ 'ಕಿತ್ತು'ವೆಂಬ ಲಯದ ಗತಿಯು ಈ ನೃತ್ತದ ಲಾಸ್ಯಕ್ಕೆ ಅನ್ವಯವಾಗುತ್ತಿದ್ದು ತಮಿಳಿಗರಿಗೆ ಪ್ರಿಯವಾಗಿತ್ತು. ತೆಲುಗು ಭಾಷೆಯಲ್ಲಿ 'ಚಿಂತು' ಎಂಬ ದ್ವಿಪದಿ ಛಂದಸ್ಸೊಂದು ಇದ್ದು ಇದು ಗೀತವನ್ನು ಹಾಡಲೂ ನರ್ತಿಸಲೂ ಸುಂದರವಾಗಿರುತ್ತದೆ. ನರ್ತಿಸುವವರು ಸಾಹಿತ್ಯಾರ್ಥದತ್ತ ಗಮನವಿಡುತ್ತಾರೆ. ಚಿಂತು ಸಾಹಿತ್ಯದಲ್ಲಿರುವ ವಸ್ತುವು ರಸಿಕರ ಆಸಕ್ತಿ ಹಾಗೂ ಕುತೂಹಲವನ್ನು ಹೆಚ್ಚಿಸುತ್ತದೆ. ನರ್ತಕರಿಗೆ ಶಬ್ದಾರ್ಥಗಳ ರಸವೃದ್ಧಿ ಮಾಡುವಂತೆ ಪ್ರೇರೇಪಿಸುತ್ತದೆ. ತೆಲುಗುನಾಡಿನಲ್ಲಿ ಇದನ್ನು ಚಿಂತು ಎಂದು ಕರೆಯುತ್ತಾರೆ. ತಮಿಳಿನ ಭಾಷಾ ಉಚ್ಚಾರದಿಂದ ಚಿಂತವು ಚಿಂದು ಎಂದಾಗಿದೆಯೆಂದು ತೋರುತ್ತದೆ. ಚಿಂತುನೃತ್ತಕ್ಕೆ ತರುಣ ನರ್ತಕಿಯರು ಲಯ ವೈವಿಧ್ಯಗಳಲ್ಲಿ ಪಾಟಾಕ್ಷರಗಳನ್ನು ಹೇಳುವುದರೊಂದಿಗೆ ಅವುಗಳನ್ನು ಚಪ್ಪಾಳೆ ತಟ್ಟುತ್ತ ತೋರಿಸಿ, ಅದಕ್ಕೆ ಸರಿಯಾದ ಹೆಜ್ಜೆಗಳನ್ನು ಹಾಕಿ ನರ್ತಿಸುತ್ತಾರೆ. ಇದಕ್ಕೆ ಅವರಿಗೆ ಅವರ ವಾದ್ಯವೃಂದವು ಸಂಪೂರ್ಣವಾಗಿ ವಾದನದಲ್ಲಿ ಸಹಕರಿಸುತ್ತದೆ. ಆಂಧ್ರದ ಹಳ್ಳಿಗಳ ಉತ್ಸವಾದಿಗಳಲ್ಲಿ ಚಿಂತುನೃತ್ತವು ಬಹಳ ರೂಢಿಯಲ್ಲಿ ಇರುವಂತಹದು. ಪೋಲೆರಮ್ಮ, ಅಂಕಾಳಮ್ಮ ಮುಂತಾದ ದೇವತೆಗಳ ಜಾತ್ರೋತ್ಸವಗಳಲ್ಲಿ ದೇವರ ಎದುರಿನಲ್ಲಿ ಸ್ತ್ರೀ ಪುರುಷರಾದಿಯಾಗಿ ನರ್ತಿಸುತ್ತಾರೆ. ಈ ನರ್ತನಕ್ಕೆ ತಪ್ಪೆಟ, ದೊಡ್ಡ ತಾಳ, ಮರ್ದಲ ವಾದ್ಯಗಳು ಬಾಜಿಸಲ್ಪಡುತ್ತದೆ.

ಪಾರಿಭಾಷಿಕ ಶಬ್ದಾರ್ಥಗಳು —

*ಪ್ರಬಂಧ — ಪ್ರಬಂಧವೆನ್ನುವುದು ಶುದ್ಧಗೀತಗಳಿಗೆ ಮಾತ್ರ (ಎಂದರೆ ಗಮಕಾಲಪ್ತಿ, ಧಾತು, ಅಂಗಗಳಿರುವ ಹಾಡುಗಳಿಗೆ) ಅನ್ವಯಿಸುವ ಹೆಸರು. —

ಪ್ರಬಂಧದ ಅಂಗಗಳು — ಉದ್ಗ್ರಾಹ, ಮೇಲಾಪಕ, ಧ್ರುವ, ಆಭೋಗ, ಅಂತರ.

*ಉದ್ಗ್ರಾಹ — ಉದ್ಗ್ರಾಹವು ಗೀತದ ಮೊದಲಿನಲ್ಲಿರುತ್ತದೆ. ಗೀತವನ್ನು ಎತ್ತಿಕೊಳ್ಳುವುದರಿಂದ ಅದು ಮೊದಲನೆಯದು.

*ಮೇಲಾಪಕ -— ಮೇಲಾಪಕವು ಎರಡನೆಯದಾಗಿದೆ. ಉದ್ಗ್ರಾಹ - ಧ್ರುವಗಳನ್ನು ಮೇಲನ ಮಾಡುವುದರಿಂದ (=ಕೂಡಿಸುವುದರಿಂದ) ಈ ಹೆಸರು ಬಂದಿದೆ.

*ಧ್ರುವ —ನಿಯತವಾಗಿ ಇದ್ದೇ ಇರಬೇಕಾದುದರಿಂದ ಅಥವಾ ಮತ್ತೆ ಮತ್ತೆ ಮರುಕಳಿಸುವುದರಿಂದ, ಧ್ರುವವಾದುದರಿಂದ ಇದಕ್ಕೆ ಧ್ರುವವೆಂಬ ಹೆಸರಿದೆ. ಇದು ಪ್ರಬಂಧದ ಅಂಗಗಳ ಮೂರನೆಯ ಭಾಗ.

*ಆಭೋಗ — ಗೀತವು ಮುಗಿಯಿತೆಂದು ಸೂಚಿಸುವ ಐದನೆಯ ಭಾಗ.

*ಅಂತರ — ಧ್ರುವ - ಆಭೋಗಗಳ ನಡುವೆ ಅಂತರವೆಂಬ ಬೇರೆ ಒಂದು ಧಾತುವಿದೆ. ಸಾಲಗಸೂಡದಲ್ಲಿರುವ (ಇದು ನಂತರ ಸುಳಾದಿಯಾಯಿತು) ರೂಪಕಗಳಲ್ಲಿ ಮಾತ್ರ ಈ ಅಂತರವು ಕಂಡುಬರುತ್ತದೆ.

(ಮೇಲಿನವು ರಾ. ಸ. ರವರ ಪುಂಡರೀಕಮಾಲಾ ಗ್ರಂಥದ - ನರ್ತನನಿರ್ಣಯದ ಮೂರನೆಯ ಪ್ರಕರಣ - ಗಾಯಕ (ಪ್ರಬಂಧ) ಭಾಗದಲ್ಲಿದೆ)

*ಪ್ರಯೋಗ —ಪ್ರಯೋಗವೆಂದರೆ ಗಮಕಾಲಪ್ತಿ, ಅಕ್ಷರರಹಿತವಾದ ಆಲಾಪ.

*ಪಿಲ್ಲಮೂರು ಮತ್ತು ಕೈಮೂರುಗಳು — ಏಕರೂಪವಾದ ಕೂಟಪಾಟಗಳಿಂದ ರಚಿತವಾಗಿ ಅತ್ಯಂತ ಕೋಮಲ ಶಬ್ದಗಳನ್ನು ಹೊಂದಿ, ಅನೇಕ ವಿರಾಮಗಳಿದ್ದು, ತಾಲಛಂದಸ್ಸುಗಳಿಂದಲೂ ಉಜ್ವಲವಾದ ವರ್ಣಗಳಿಂದಲೂ ಕೂಡಿದ್ದು ಯಾವುದು ನುಡಿಸಲ್ಪಡುತ್ತದೋ ಅದನ್ನು ತಜ್ಞರು ಯತಿ ಎಂದು ಹೆಸರಿಸುತ್ತಾರೆ. (ಯತಿಯ ಈ ಲಕ್ಷಣವು ಸಂಗೀತರತ್ನಾಕರದಲ್ಲಿ ಜಕ್ಕಾ ಎಂಬ ನಾಮಾಂತರದಲ್ಲಿ

ಹೇಳಿದೆ.) ನೃತ್ಯಪ್ರಬಂಧ ಅಥವಾ ಗೀತಪ್ರಬಂಧದ ಅಂಗವಾಗಿದ್ದು ಅದರಲ್ಲಿ ತಜ್ಞರಾದವರು ನುಡಿಸಿದರೆ ಅದನ್ನು ಉಟ್ಟವಣವೆನ್ನುತ್ತಾರೆ. ಕೊನೆಯಲ್ಲಿ ಥೋಂಕಾರವು ಪ್ರಧಾನವಾಗಿರುವುದರಿಂದ ಬೇರೆಯವರು ಅದನ್ನು ಪಿಲ್ಲಮೂರು ಎಂದು ಕರೆಯುತ್ತಾರೆ. ಥೋಂಕಾರವು ಅಲ್ಪವಾಗಿದ್ದರೆ ಪಿಲ್ಲಮುರುವೆಂದೂ ಮಧ್ಯಸ್ಥವಾಗಿದ್ದರೆ ಕೈಮುರು ಎಂದೂ ಸಮ್ಮತಿಸುತ್ತಾರೆ. ಅವಳಿ ಖಂಡಗಳಿದ್ದು ಅತ್ಯಂತ ಪ್ರೌಢಿಮೆಯಿಂದ ಕೂಡಿರುವುದು ಕಲಾಸ, ಎಂದು ನರ್ತನನಿರ್ಣಯದ ತಾಲಧಾರಿ ಪ್ರಕರಣದಲ್ಲಿ ಪಂಡರೀಕವಿಠಲನು ಹೇಳಿದ್ದಾನೆ. ಯತಿಯ ಪ್ರಭೇಧಗಳಾಗಿ ನಿರೂಪಿತವಾಗಿರುವ ಮೂರು ಮತ್ತು ಪಿಲ್ಲಮೂರುಗಳು ಅನ್ಯತ್ರ ನೃತ್ಯಪ್ರಬಂಧಗಳಾಗಿ ದೊರೆಯುತ್ತವೆ. ಎಂದರೆ ಈ ವಾದ್ಯಪ್ರಬಂಧಗಳನ್ನು ನೃತ್ಯಕ್ಕೆ ಅಳವಡಿಸಲಾಗುತ್ತಿತ್ತು. ಉದಾಹರಣೆಗೆ ವೇದನು (ಸು. ಕ್ರಿ. ಶ. 1600)ಸಂಗೀತಮಕರಂದದಲ್ಲಿ ಪಿಲ್ಲಮೂರೂವನ್ನು ಹೆಚ್ಚು ಕಡಿಮೆ ವಾದ್ಯಖಂಡವನ್ನಾಗಿಯೇ, ಆದರೆ ದೇಶೀನೃತ್ತವೆಂದು ಕೊಡುತ್ತಾನೆ ಮತ್ತು ಕಲಾಸವೆಂಬ ವಾದ್ಯ'ರೂಪಕ'ವೊಂದನ್ನು ದೇಶೀನೃತ್ತಾಂಗವೆಂದು ನಿರೂಪಿಸುತ್ತಾನೆ. ಆದರೆ ಅದರಲ್ಲಿ ಅವಳಿಖಂಡಗಳು, ಅತ್ಯಂತ ಪ್ರೌಢಿಮೆ ಎಂಬ ಲಕ್ಷಣಗಳಿಲ್ಲ. (ವಿವರಣೆಗಳಿಗಾಗಿ ನೋಡಿ ರಾ. ಸ., ಪು. ಮಾ., ಪು. 288 - 289).

ಚಾರೀಗಳು - ಎಲ್ಲಿ ಪಾದದ, ಮೊಳಕಾಲಿನ. ತೊಡೆಯ, ಅಂತೆಯೇ ಸೊಂಟದ ಕ್ರಿಯೆಗಳನ್ನು ಏಕಕಾಲದಲ್ಲಿ ಮಾಡಲಾಗುವುದೋ ಅದು ಚಾರೀ ಎಂದು ಪ್ರಸಿದ್ಧವಾಗಿದೆ. (ಚಾರಿಗೆ ವ್ಯಾಯಾಮವೆಂದು ಹೆಸರು. ವಿವರಗಳಿಗೆ ನೋಡಿ. ರಾ.ಸ., ಪುಂ.ಮಾ., ಪು 559 - 560).
* ಸ್ಯಂ(ಸ್ಪಂ)ದಿತಾ — ಭೂಚಾರಿಯಾದ ಇದರಲ್ಲಿ ಎಡಪಾದವು ಸಮವೂ ತೊಡೆಯು ನಿಶ್ಚಲವೂ ಆಗಿದ್ದು ಬಲಪಾದವು ಓರೆಯಾಗಿ ಐದು ತಾಲಗಳಷ್ಟು ಸರಿಯುವುದು ಯಾವುದರಲ್ಲಿ ಇದೆಯೋ ಅದು ಸ್ಯಂದಿತಾ ಎಂದು ನರ್ತನನಿರ್ಣಯವು ಹೇಳಿದೆ. (ಶ್ಲೋ. 459)

* ಅಪಸ್ಯಂದಿತಾ — ಪಾದದ ಚಲನೆಯು ತಿರುಗುಮುರುಗಾದರೆ ಅದೇ ಅಪಸ್ಯಂದಿತಾ. (ನ. ನಿ. ಶ್ಲೋ. 460) ಎಂದರೆ ಬಲಪಾದವು ಸಮ, ತೊಡೆಯು ನಿಶ್ಚಲ. ಎಡಪಾದವು ಓರೆಯಾಗಿ ಐದು ತಾಲಗಳಷ್ಟು (ಹಸ್ತಗಳಷ್ಟು) ದೂರಸರಿಯುವುದು.

*ಅಧ್ಯರ್ಧಿಕಾ — ಇದು ಭೂಚಾರಿ. ಬಲಪಾದದ ಹಿಂದುಗಡೆ ಹಿಮ್ಮಡಿಯಲ್ಲಿ ಎಡಹೆಜ್ಜೆಯ ಚಲನವು ಯಾವಾಗ ಆಗುತ್ತದೆಯೋ, ಬಲಪಾದವನ್ನು ಪಕ್ಕಕ್ಕೆ ಸರಿಸಿದರೆ ಅದು ಅಧ್ಯರ್ದಿಕಾ ಎಂದು ತಿಳಿಯಬೇಕೆಂದು ನರ್ತನನಿರ್ಣಯದಲ್ಲಿ ಹೇಳಿದೆ (ಶ್ಲೋ. 452). ಅಧ್ಯರ್ಧಿಕಾ ಎಂದರೆ ಒಂದೂವರೆ. ಬಲಗಾಲು ಪೂರ್ತಿ ಚಲಿಸುತ್ತದೆ, ಎಡಗಾಲು ಅರ್ಧ ಚಲಿಸುತ್ತದೆ. ಆದ್ದರಿಂದ ಇದು ಅಧ್ಯರ್ಧಿಕಾ.

* ಸ್ಥಿತಾವರ್ತ — ಭೂಚಾರಿಯಾದ ಇದರಲ್ಲಿ ನೆಲವನ್ನು ತಾಕಿದ ಒಂದು ಪಾದದಲ್ಲಿ ಒಳವರ್ತುಲವನ್ನು ಚಲಿಸಿ ಅದಾದ ಮೇಲೆ ಪುನಃ ಇನ್ನೊಂದನ್ನು ಹಾಗೆಯೇ ಚಲಿಸಿದರೆ ಸ್ಥಿತಾವರ್ತಾ ಆಗುತ್ತದೆ. (ನ. ನಿ. ಶ್ಲೋ. 449 a.)

*ಸ್ಥಾನಕಗಳು — ಇವು ನೃತ್ತಶಾಸ್ತ್ರದಲ್ಲಿ ನಿರೂಪಿತವಾಗಿರುವ ನಿಲುವುಗಳು.
*ವೈಶಾಖ — ವೈಶಾಖ ಸ್ಥಾನಕದಲ್ಲಿ ಎರಡು ಪಾದಗಳೂ ಮೂರೂವರೆ ಚೋಟು ದೂರದಲ್ಲಿ ಓರೆಯಾಗಿದ್ದು ತೊಡೆಗಳೂ ಹಾಗೆಯೇ ಅದೇ ದೂರದಲ್ಲಿರುತ್ತವೆ. (ಸಂ. ರ. ಶ್ಲೋ. 1043). ನಂದಿಕೇಶ್ವರನು (ಭರತಾರ್ಣವ. V. ಶ್ಲೋ. 349) ಎಡಗೈ ಖಟಾಮುಖಮುದ್ರೆಯನ್ನೂ ಬಲಗೈ ಶಿಖರಮುದ್ರೆಯನ್ನೂ ಧರಿಸಬೇಕೆಂದು ಅಧಿಕವಾಗಿ ಹೇಳುತ್ತಾನೆ.

* ಮಂಡಲ 1.— ಒಂದೇ ಪಾದದ ಸಂಚಾರವು ಯಾವುದಿದೆಯೋ ಅದನ್ನು ಚಾರೀ ಎನ್ನುತ್ತಾರೆ. ಎರಡು ಪಾದಗಳು ಮುನ್ನಡೆಯುವುದು ಯಾವ ಚಾರಿಯೋ ಅದು ಕರಣ. ಮೂರು ಕರಣಗಳ ಸಂಯೋಗದಿಂದ

ಆದುದು ಖಂಡವೆಂದು ಹೆಸರಿಸಿದೆ. ಮೂರು ಅಥವಾ ನಾಲ್ಕು ಖಂಡಗಳ ಸಂಯೋಗದಿಂದ ಮಂಡಲವಾಗುತ್ತದೆ.
ಮಂಡಲ 2.—ಮಂಡಲವು ಒಂದು ಪುರುಷ ಸ್ಥಾನಕ. ಇದರಲ್ಲಿ ಎರಡು ಹೆಜ್ಜೆಗಳನ್ನೂ ಹೊರಪಕ್ಕಕ್ಕೆ ಓರೆಯಾಗಿ ಒಂದು ಗೇಣಿನ ಅಂತರದಲ್ಲಿ ನೆಲದ ಮೇಲೆ ಇಡಬೇಕು. ನಿತಂಬಗಳೂ ಮೊಣಕಾಲುಗಳೂ ಇದೇ ರೇಖೆಗೆ ಅಳವಟ್ಟು ನಿಶ್ಚಲವಾಗಿದ್ದು ಎರಡೂವರೆ ಗೇಣಿನ ಬದಲು ನಾಲ್ಕು ಗೇಣುಗಳ ಅಂತರದಲ್ಲಿರಬೇಕು. (ಶಾರ್ಙ್ಗದೇವ, ಸಂಗೀತರತ್ನಾಕರ, VII, 1046 - 1048).

*ಆಲೀಢ — ಆಲೀಢದಲ್ಲಿ ಎರಡು ಪಾದಗಳೂ ಓರೆಯಾಗಿದ್ದು, ಬಲದ ಪಾದವು ಐದು ಚೋಟುಗಳ ದೂರವಿರುತ್ತದೆ. ಎಡತೊಡೆಯು ಎತ್ತಿದ್ದು ನಿಶ್ಚಲವಾಗಿರುತ್ತದೆ. (ಸಂ. ರ. ಶ್ಲೋ. 1049).ನಂದಿಕೇಶ್ವರನಲ್ಲಿ (V, 351) ಕೈಗಳು ಖಟಕಾಮುಖ, ಮುಷ್ಟಿಮುದ್ರೆಗಳನ್ನು ಧರಿಸಿರುತ್ತವೆಂಬ ಅಧಿಕೋಕ್ತಿಯಿದೆ.

*ಪ್ರತ್ಯಾಲೀಢ — ಆಲೀಢದಲ್ಲಿರುವ ಪಾದಗಳೂ ತೊಡೆಗಳೂ ತಿರುಗುಮುರುಗಾದರೆ ಅದೇ ಪ್ರತ್ಯಾಲೀಢ. (ಸಂ. ರ. ಶ್ಲೋ. 1052) (ಭರತಾರ್ಣವ, V, 352).

*ರೇಖಾ —ತಲೆ, ಕಣ್ಣು, ಕೈಗಳು, ಮತ್ತು ಇತರ ಅಂಗಗಳ ನೃತ್ತಕರ್ಮಗಳ ಸಮರಸವಾದ ಕೂಟವಿದ್ದರೆ ಅಂತಹ ಮನೋಹರವಾದ ದೇಹಭಂಗಿಯು ರೇಖೆ.

*ಸೌಷ್ಠವ — ಎಲ್ಲಿ ಸೊಂಟ - ಮಂಡಿಗಳು ಸಮಭಂಗಿಯಲ್ಲಿರುತ್ತವೋ, ಮೊಳಕೈ - ಹೆಗಲು - ತಲೆಗಳೂ ಸಮಭಂಗಿಯಲ್ಲಿರುತ್ತವೋ, ಎದೆಯು ಉನ್ನತವಾಗಿ, ಶರೀರವು ಸನ್ನವಾಗಿ ಇರುತ್ತದೋ ಅದು ಸೌಷ್ಠವವಾಗುತ್ತದೆ. [ಸನ್ನವೆಂದರೆ ಶರೀರವು ತನ್ನ ಭಂಗಿಯಲ್ಲಿಯೆ ವಿಶ್ರಾಂತವಾಗುವುದು. ನಿಷಣ್ಣವೆಂದರೆ ಅದರ ಅಲುಗಲ್ಲಾಡದ ಸ್ಥಿತಿ.]

*ಲಾಸ್ಯಾಂಗ —ಎಲ್ಲ ಅಂಗಗಳ ವಿಲಾಸಮಯ ಸೌಂದರ್ಯ ವಿಚಿತ್ರತೆಯು ಲಾಸ್ಯಾಂಗವೆಂದು ಕರೆಯಲ್ಪಡುತ್ತದೆ (ಇದರಲ್ಲಿ ಹತ್ತು ದೇಶೀ ಲಾಸ್ಯಾಂಗಗಳನ್ನು ನರ್ತನನಿರ್ಣಯದಲ್ಲಿ ಹೇಳಿದೆ)

*ರೇಚಕ — 1..ರೇಚಕವೆನ್ನುವುದು ಸಂಚಾರೀ ಅಲಂಕಾರಗಳಲ್ಲಿ ಒಂದು. ಅದನ್ನು ಆರು ಕಲೆಗಳಲ್ಲಿ ನಡೆಸಬೇಕು. ಉದಾಹರಣೆಗೆ - ಸರಿಗರಿಸರಿಗ ರಿಗಮಗರಿಗಮ ಗಮಪಮಗಮಪ ಮಪಧಪಮಪಧ ಪದನಿಧಪಧನಿ ಧನಿಸನಿಧನಿಸ. (ವಿವರಗಳಿಗೆ ನೋಡಿ. ರಾ. ಸ., ಪುಂಡರೀಕಮಾಲಾ. ಪು. 24). 2..ರೇಚಕವು ಅಂಗಹಾರದಲ್ಲಿ ಒಂದು. ತಂಡುವು ಭರತನಿಗೆ ಉಪದೇಶಿಸಿದ ಅಂಗಹಾರಗಳೂ ತದಂಗಗಳಾದ ಕರಣ, ಚಾರೀ, ರೇಚಕ, ವರ್ತನೀ, ಮಂಡಲ, ಭ್ರಮರ, ಸ್ಥಾನಕ ಇತ್ಯಾದಿಗಳೂ ತಾಂಡವವೆನ್ನಿಸಿದವು.

*ಸುಲೂ — ಮೆಲ್ಲನೆಯ ಗಾಳಿಯಲ್ಲಿ ದೀಪದ ಕುಡಿಯಂತೆ ದೇಹವನ್ನು ಚಾಲಿಸುವುದನ್ನೂ ಅಥವಾ ಹಾವಿನ ಹೆಡೆಯ ಆಕಾರದಲ್ಲಿ ಚಾಲಿಸುವುದನ್ನು ಸುಲೂ ಎಂದು ಜ್ಞಾನಿಗಳು ಹೇಳುತ್ತಾರೆ.

*ಚಿತ್ರಕಲಾಸ —ಪಾತ್ರವು ನೃತ್ಯವಿದಾರಿಯ ಕೊನೆಯಲ್ಲಿ ಚಿತ್ರದಲ್ಲಿ ಬರೆದ ಹಾಗೆ ಭಂಗಿಯಲ್ಲಿ ದೇಹವನ್ನು ಏರ್ಪಡಿಸಿದರೆ, ಆಗ ತಾಲವಾದ್ಯವೂ (=ನಟ್ಟುವಾಂಗವೂ) ಕೂಡಿಕೊಂಡಿರಲಾಗಿ, ಅದು ಚಿತ್ರಕಲಾಸವಾಗುತ್ತದೆ.

*ನೃತ್ಯವಿದಾರಿ — ನೃತ್ಯವಿದಾರಿಯೆಂದರೆ ನೃತ್ಯಪ್ರಬಂಧದಲ್ಲಿ ಕೊನೆಯದಲ್ಲದ ಯಾವುದಾದರೊಂದು ಖಂಡವನ್ನು ಮುಗಿಸುವ ಭಾಗ.

Copyright preserved

*ಕಲಾಸ — ಕಲಾಸವೆಂಬ ವಾದ್ಯ'ರೂಪಕ'ವೊಂದನ್ನು ದೇವಣ್ಣಭಟ್ಟನು 'ಕಲಾಸವೆಂದರೆ ಗೀತಾಂತ್ಯದಲ್ಲಿ ತಾಲ - ಲಯಗಳಿಗೆ ಸಮವಾಗಿ, ನೃತ್ತಭಂಗಿಯನ್ನು ಸ್ಥಾಪಿಸುವುದು, ನೃತ್ತವನ್ನು ಮುಗಿಸುವಂತಹುದು' ಎಂದು ತನ್ನ ಸಂಗೀತಮುಕ್ತಾವಲಿಯಲ್ಲಿ ಹೇಳುತ್ತಾನೆ (ಉದ್ಧೃತಿ, ರಾಮಕೃಷ್ಣಕವಿ, ಭರತಕೋಶ, ಪು. 122). ಕನ್ನಡ, ತೆಲುಗು, ತಮಿಳುಗಳ ಯಕ್ಷಗಾನದಲ್ಲಿ ಕುಣಿತವನ್ನು ಮುಗಿಸುವ ಭಾಗಕ್ಕೆ ಕಲಾಸವೆಂದೆ ಹೆಸರಿದೆ. ಶಾಸ್ತ್ರೀಯ ನೃತ್ಯದಲ್ಲಿ ಕಲಾಸವೆಂಬುದು ಒಂದು ದೇಶೀ ಲಾಸ್ಯಾಂಗ. ಹಲವು ಕಲಾಸಪ್ರಕಾರಗಳನ್ನು ದೇವಣ್ಣಭಟ್ಟ (ಸಂಗೀತಮುಕ್ತಾವಲಿ), ವೇದ (ಸಂಗೀತ ಮಕರಂದ), ಅಶೋಕಮಲ್ಲ (ನೃತ್ಯಾಧ್ಯಾಯ) ಮುಂತಾದವರು ವರ್ಣಿಸುತ್ತಾರೆ.

ಚಿಂದುವಿನ ಲಕ್ಷಣಾಂತರ ನಿರೂಪಣೆಗೆ — ಜಾಯಸೇನಾಪತಿ {ನೃತ್ತರತ್ನಾವಲೀ ; VII, 113-116}, ಸಂಗೀತದರ್ಪಣಂ, {VII, 235-240}, ಶೌರೀಂದ್ರ ಮೋಹನ ಠಾಕುರ {ಸಂಗೀತ ಸಾರ ಸಂಗ್ರಹ VII, ಪು. 208} ; ವೇದನ { ಸಂಗೀತ ಮಕರಂದ ಉದ್ಧೃತಿ, ಭರತಕೋಶ, ಪು. 215} ಮುಂತಾದ ಗ್ರಂಥಗಳನ್ನು ನೋಡಬೇಕು. ವೇದನು ಕೋಲಚಾರಿಯನ್ನು ಕಲಚಾರಿಯೆಂದೂ, ಸ್ವಲ್ಪ ಚಿಂದುವೆಂದೂ ಕರೆದಿದ್ದಾನೆ. ಚತುರದಾಮೋದರನು (ಸಂಗೀತದರ್ಪಣಂ, ಉಕ್ತಸ್ಥಾನ) ಕಾಲಚಾರಿಯೆಂದು ವ್ಯವಹರಿಸಿದ್ದಾನೆ.

<u>ತಮಿಳುನಾಡಿನ ಚಿಂದುನೃತ್ಯ</u> –

ದಕ್ಷಿಣಭಾರತದಲ್ಲಿ ಹಲವಾರು ಜನಪದ ನೃತ್ತಗೀತರೂಪಗಳು ರೂಢಿಯಲ್ಲಿದೆ. ಇವುಗಳಲ್ಲಿ ತಮಿಳುನಾಡಿನಲ್ಲಿ ಚಿಂದುವು ಈಗ ಕಾವಡಿ, ನಯಾಂಡಿ, (ನೊಂಡಿ), ಶುರುಲ್ ನೊಂಡಿ, ವಳಿನಡ್ಯೈ ಎಂಬ ನಾಲ್ಕು ಬೇಧಗಳಲ್ಲಿ ರೂಢಿಸಿದೆ. ನಯಾಂಡಿಯೆಂದರೆ ವಾದ್ಯ ಮೇಳ. ಇದರಲ್ಲಿ ಎರಡು ಮುಖವೀಣೆ, ಎರಡು ಡೊಳ್ಳು, ಪಂಬ ಮತ್ತು ತುಮುಕುವಾದ್ಯಗಳಿರುತ್ತವೆ. ಕುಮ್ಮಿ , ತಂಬಂಗು, ತಪ್ಪನ್, ಲಾವಣಿ ಮತ್ತು ಚಿಂದುಗಳು ಹೆಚ್ಚು ರೂಢಿಯಲ್ಲಿ ಇರುವಂತಹವು. ತಮಿಳುನಾಡಿನ ಚಿಂದುವಿನಲ್ಲಿ ವಳಿನಡ್ಯೈಚ್ಚಿಂದು ನೊಂಡಿಚಿಂದು, ಕಾವಡಿಚಿಂದು ಇತ್ಯಾದಿ ಪ್ರಬೇಧಗಳಿವೆ. ಇದರಲ್ಲಿ ಕಾವಡಿಚಿಂದುವಿನ ಗೀತಗಳು ತಮ್ಮ ಅನೇಕ ಕಾರಣಗಳಿಂದ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿವೆ. ಶಾಸ್ತ್ರೀಯ ಸಂಗೀತದ ಕಡೆಯಲ್ಲಿ ರಂಜನೆಯನ್ನು ಹೆಚ್ಚಿಸುವ ಸಂಗೀತ ರಚನೆಯ ಭಾಗವಾಗಿಯೂ ಸೇರಲ್ಪಡುವಷ್ಟು ಭಾವಪೂರ್ಣವಾಗಿ, ಸಹಜವಾಗಿ, ರಸವತ್ತಾಗಿ, ವಿಶಿಷ್ಟವಾದ ಲಯದಿಂದ ಕೂಡಿವೆ. ಭಕ್ತಿಪರವಶತೆಯಿಂದ ಕೂಡಿದ್ದು, ಆಧ್ಯಾತ್ಮಿಕ ಬೋಧನೆಗಳು, ನೀತಿಗಳು, ಕಥೆಗಳು ಇತ್ಯಾದಿಗಳನ್ನೊಳಗೊಂಡ ಈ ಗೀತಗಳು ಭಗವಂತನ ಸಾಕ್ಷಾತ್ಕಾರ ಪಡೆಯುವ ಮೋಕ್ಷವನ್ನು ಪಡೆಯುವ ಭಕ್ತಿಸಾರವನ್ನುಳ್ಳದ್ದಗಿದ್ದು ಆತ್ಮ - ಪರಮಾತ್ಮಗಳಲ್ಲಿ ನಾಯಿಕಾ - ನಾಯಕ ಭಾವಗಳಲ್ಲಿಯೂ ಚಿಂದುಗೀತಗಳಲ್ಲಿ ಸಾಹಿತ್ಯವು ವ್ಯಕ್ತವಾಗುತ್ತವೆ. ಕೆಲವು ಚಾರಿತ್ರಿಕ ಹಾಗೂ ಪೌರಾಣಿಕ ಕಥೆಗಳೂ, ನಾಣ್ನುಡಿಗಳೂ ಕಾವಡಿಚಿಂದು ಜನಪದಗೀತಗಳಲ್ಲಿ ಇರುವುದುಂಟು. ಈ ಹಾಡುಗಳು ಪರಂಪರಾನುಗತವಾಗಿ ನಂಬಿಕೊಂಡು ಬಂದಂತೆ ಮುತ್ತಮಿಳ್, ಸಂಗೀತ, ಸಾಹಿತ್ಯ ಹಾಗೂ ನಾಟ್ಯ-ನಾಟಕ ಕಲೆಗಳನ್ನು ಲೋಕಕ್ಕೆ ಕರುಣಿಸಿದ, ತಮಿಳುನಾಡಿನ ಪ್ರಮುಖ ಆರಾಧ್ಯ ದೈವಗಳಲ್ಲೊಬ್ಬನಾದ ಸುಬ್ರಹ್ಮಣ್ಯದೇವನನ್ನು ಕುರಿತು ರಚಿಸಲ್ಪಟ್ಟಿರುತ್ತವೆ.

ಪ್ರಾಚೀನದಲ್ಲಿ ತಮಿಳಿಗರು ಯಾತ್ರೆ ಮಾಡುವ ಸಂದರ್ಭದಲ್ಲಿ ಬೆಟ್ಟಕ್ಕೆ ಹತ್ತುವ ಸಂದರ್ಭಗಳಲ್ಲಿ ಯಾತ್ರೆಗೆ ಹೋಗುವ ಕ್ಷೇತ್ರದೇವತೆಗೆ ಸಮರ್ಪಿಸಲೆಂದು ಕೊಂಡು ಹೋಗುವ ವಸ್ತುಗಳನ್ನು ಸಮಪಾಲಾಗಿ ಎರಡು ಬಟ್ಟೆಗಳಲ್ಲಿ ಕಟ್ಟಿ ಅದನ್ನು ಗಟ್ಟಿಯಾದ ಒಂದು ಉದ್ದ ಕೋಲಿನ ಎರಡು ಬದಿಯ ತುದಿಗಳಿಗೂ ಕಟ್ಟಿ ಭುಜದ ಮೇಲೆ ಹೊತ್ತು ದೂರ ಪಯಣದ ಮಾರ್ಗಾಯಾಸ ಪರಿಹಾರಕ್ಕಾಗಿ ದೇವರ ಹಾಡುಗಳನ್ನು ಹಾಡುತ್ತ ಕುಣಿಯುತ್ತ ಸಾಗುತ್ತಿದ್ದರು. ಹೀಗೆ ದೇವರ ಹರಕೆಗಾಗಿ ಹೊತ್ತದ್ದೇ ಕಾವಡಿಯೆಂದೂ, ಕಾವಡಿಯಾಟ್ಟದ ಮೂಲವು ಹೀಗಿರಬಹುದೆಂದೂ ವಿದ್ವಾಂಸರ ಊಹೆ. ಈ ಕಾವಡಿ ಚಿಂದುವಿಗಾಗಿ ಪ್ರತ್ಯೇಕವಾಗಿ ಹಾಡುಗಳೂ ರಚಿತವಾದವು.

ತಮಿಳುನಾಡಿನ ಈ ಧಾರ್ಮಿಕ ನೃತ್ತವು ಹಳದಿ ವಸ್ತ್ರವನ್ನು ಧರಿಸಿ, ಕೊರಳಲ್ಲಿ ಪುಷ್ಪ ಮಾಲೆಯನ್ನು ಧರಿಸಿ, ಕಾವಡಿಹರಕೆಯನ್ನು ಹೊತ್ತ ಪುರುಷರು ಮಾತ್ರ ನರ್ತಿಸುವಂತಹದು. ತೇಗದ ಮರದಿಂದ ಮಾಡಿದ ಗಟ್ಟಿಯಾದ ಉದ್ದದ ಕೋಲಿನ ಎರಡು ತುದಿಗಳಲ್ಲಿ ಮೇಲೆ ಅರ್ಧಚಂದ್ರಾಕೃತಿಯಲ್ಲಿ ಬಾಗಿಸಿದ ಬಿದಿರುಗಳ ಪಟ್ಟಿಗಳಿಗೆ ಕಾವಿ ಬಣ್ಣದ ಹೊಸ ವಸ್ತ್ರಗಳನ್ನು ಕಟ್ಟಿ ಹೂಗಳಿಂದಲೂ, ನವಿಲುಗರಿಗಳಿಂದಲೂ ಅಲಂಕಾರವನ್ನು ಮಾಡಿ ಅದಕ್ಕೆ ಹಗ್ಗವನ್ನು ಕಟ್ಟಿ ನೇತುಹಾಕಿರುವ ನೀರು ಅಥವಾ ಎಳನೀರಿನಿಂದ ತುಂಬಿರುವ ಮಡಕೆಗಳನ್ನು ಕಟ್ಟಿ ಕಾವಡಿಯನ್ನು ತಯಾರಿಸಿ ಅದನ್ನು ಭುಜದಲ್ಲಿ ಹೊತ್ತು ಸಮತೋಲನವಾಗಿ ತೂಗಿಸುತ್ತ ನರ್ತಿಸುತ್ತಾರೆ. ಕಾವಡಿಯಲ್ಲಿ ಹಾಲು - ಪನ್ನೀರುಗಳನ್ನು ಹೊರುವುದೂ ಉಂಟು.

ಈ ಧಾರ್ಮಿಕ ನೃತ್ತವು ಪ್ರಮುಖವಾಗಿ ಶಿವನ ದ್ವಿತೀಯ ಪುತ್ರನಾದ ಮುರುಗ (ಸುಬ್ರಹ್ಮಣ್ಯ) ದೇವರ ಪ್ರೀತ್ಯರ್ಥವಾಗಿದ್ದು, ಈ ಕಾವಡಿ ನರ್ತನಕ್ಕೆ ಪಂಬೈ ಮತ್ತು ನೈಯಾಂಡಿ ಮೇಳವು ಗೀತ-ವಾದ್ಯ-ಲಯಗಳನ್ನು ಒದಗಿಸುತ್ತದೆ. ಇಂಪಾದ ಈ ಗೀತ - ವಾದ್ಯ - ಲಯಗಳು ಕೇಳುಗರಿಗೆ ಸಂತೋಷವನ್ನುಂಟುಮಾಡುವುದಲ್ಲದೆ ಕಾವಡಿಯ ಭಾರವನ್ನು ಹೊರುವವರಿಗೂ ಆಯಾಸ, ಶ್ರಮ, ನೋವುಗಳನ್ನು ತಡೆದುಕೊಳ್ಳಲು ಶಕ್ತಿ, ಉಲ್ಲಾಸ - ಉತ್ಸಾಹಗಳನ್ನು ನೀಡುವಲ್ಲಿಯೂ ಯಶಸ್ವಿಯಾಗುತ್ತವೆ. ಇದು ಯಾತ್ರೆಯ ದಾರಿಯಲ್ಲಿ ಕಾವಡಿಯನ್ನು ಹೊತ್ತು ಮಾಡುವ ನರ್ತನವಾದ್ದರಿಂದ ಈ ಚಿಂದುವನ್ನು ವಳಿನಡ್ಯೈ ಚಿಂದು ಎಂದು ಕರೆಯುವುದೂ ಉಂಟು. ಒಬ್ಬ ಮುಖ್ಯಗಾಯಕನು ಚಿಂದು ಭಕ್ತಿಗೀತವನ್ನು ಹಾಡಿದರೆ ಉಳಿದ ಭಕ್ತಾದಿಗಳು ಪುನರಾವರ್ತಿಸಿ

Copyright reserved

ಹಾಡಿ ದೇವದೇವನನ್ನು ಭಜಿಸುತ್ತಾರೆ. ಈ ಲಯಬದ್ದ ಸ್ತುತಿಗಾಯನದಿಂದ ಭಕ್ತ್ಯಾವೇಶ ಉನ್ಮತ್ತರಾಗಿ ಕಾವಡಿ ಚಿಂದು ನೃತ್ತಕಾರರು ಅತಿ ಭಾರವಿರುವ ಕಾವಡಿಯನ್ನು ಲಯಬದ್ದವಾಗಿ ಭುಜಗಳಿಗೆ ಬದಲಿಸುತ್ತ, ತಲೆಯ ಹಾಗೂ ಮೂಗಿನ ಮೇಲೆಯೂ ಇಡುತ್ತ, ಅಲ್ಲಿಯೇ ಕಾವಡಿಯನ್ನು ಏರಿಳಿಸುತ್ತಲೂ ಕಾವಡಿಯನ್ನು ಕೈಯಲ್ಲಿ ಹಿಡಿದುಕೊಳ್ಳದೆಯೇ ಬೇರೆ ಬೇರೆ ಭಂಗಿಗಳಲ್ಲಿಯೂ ಕಾವಡಿಯ ಸಮತೋಲನವನ್ನು ಕಾಯ್ದುಕೊಳ್ಳುತ್ತಲೂ, ತಮ್ಮ ಕಲೆಗಾರಿಕೆಯ ಹೆಚ್ಚುಗಾರಿಕೆಯನ್ನು ತೋರುತ್ತಲೂ ವಿಧವಿಧ ಲಯಕ್ಕೆ ನರ್ತಿಸುತ್ತಾರೆ! ಕಾವಡಿ ಚಿಂದು ಹಾಡುಗಳನ್ನು ದೂರದಿಂದ ನಡೆದು ಬರುವ ಯಾತ್ರಾರ್ಥಿಗಳೂ ಭಕ್ತಿಯಿಂದ ಹಾಡುತ್ತ ಬರುತ್ತಾರೆ. ಬೇರೆ ಬೇರೆ ವೃತ್ತಗಳಲ್ಲಿ ರಚಿತವಾದ ಕಾವಡಿ ಚಿಂದು ಹಾಡುಗಳನ್ನು ನವರಾತ್ರಿಯ ಕಡೆಯ ದಿನದಲ್ಲಿ ದೇವಸ್ಥಾನಗಳಲ್ಲಿಯೂ ಹಾಡುವುದುಂಟು. ತಿರುಚಂದೂರು ಪಳನಿ ಮುಂತಾದ ಮುರುಗನ್ ದೇವಾಲಯಗಳಲ್ಲಿ ದೇವರ ಉತ್ಸವವು ಹೊರಡುವ ಪೂರ್ವಭಾವಿಯಾಗಿ ಮುರುಗನ್ ವಳ್ಳಿಯರ ಪ್ರೇಮಕಥೆಗಳನ್ನುಳ್ಳ ಕಾವಡಿಚಿಂದುವಿನ ಹಾಡುಗಳನ್ನು ತಮಟೆಯಂತಹ ಲಯವಾದ್ಯಗಳ ಹಾಗೂ ನಾಗಸ್ವರವಾದ್ಯಗಳೊಂದಿಗೆ ಹಾಡುತ್ತಾರೆ, ಕುಣಿಯುತ್ತಾರೆ. ನಯ್ಯಾಂಡಿ ಅಥವಾ ಚಿನ್ನಮೇಳವೆಂದು ಕರೆಯಲ್ಪಡುವ ಈ ವಾದ್ಯಮೇಳಗಳು ಜನಪದ ಸಂಗೀತಕ್ಕೇ ಹೊಂದುವಂತಿದ್ದು, ಜನಪದದ್ದೇ ಸಂಗೀತ, ನೃತ್ತ ಹಾಗೂ ನಾಟಕ ಇತ್ಯಾದಿ ರಂಗಕಲೆಗಳಿಗೆ ಸೂಕ್ತವಾಗಿ ಹೊಂದುವಂತಹ ರೀತಿಗಳನ್ನು ಹೊಂದಿ ಜನಸಾಮಾನ್ಯರನ್ನು ರಂಜನೆಗೊಳಿಸುತ್ತವೆ. ನಯ್ಯಾಂಡಿ ಮೇಳದಲ್ಲಿ ಎರಡು ನಾಗಸ್ವರಗಳು, ಎರಡು ತವಿಲ್, ಒಂದು ಪಂಬೈ, ಒಂದು ತಮುಕ್ಕು ಹಾಗೂ ದೊಡ್ಡ ಕಂಚಿನ ತಾಳಗಳು ಇದ್ದು ಇದರ ವಾದ್ಯಕಾರರು ತಮ್ಮ ತಮ್ಮ ವಾದ್ಯಗಳನ್ನು ನುಡಿಸುವುದರೊಂದಿಗೆ ನರ್ತಿಸುತ್ತಾರೆ. ಈ ವಾದ್ಯಮೇಳಕಾರರಿಗೆ ಕಾವಡಿಚಿಂದು ಮಾತ್ರವಲ್ಲದೆ ಕರಗ, ಕುದುರೆಬೊಂಬೆ ನೃತ್ತ ಹಾಗೂ ಕುರವನ್ - ಕೊರತಿ (ಕೊರವಂಜಿ) ನೃತ್ತಗಳಿಗೆ ನುಡಿಸಲೂ ಪರಿಣತಿಯಿದ್ದು ಬಹು ಬೇಡಿಕೆಯಿರುತ್ತದೆ.

ಮಧುರೈ ಜಿಲ್ಲೆಯ ತಿರುಪ್ಪುರಕುಂಡ್ರಂ ಮತ್ತು ಪಳನಿಗಳು ಸುಬ್ರಹ್ಮಣ್ಯ /ಮುರುಗನ ಪ್ರಸಿದ್ದ ತೀರ್ಥಯಾತ್ರಾ ಮಲೆಯ ಕ್ಷೇತ್ರಗಳು. ಈ ಬೆಟ್ಟಗಳನ್ನು ಇಡುಂಬನೆಂಬ ರಕ್ಕಸನು ಒಂದು ಕೋಲಿನ ಎರಡು ಬದಿಗಳ ತುದಿಗೆ ಕಟ್ಟಿ ಹೊತ್ತುಕೊಂಡು ಓಡುತ್ತಿದ್ದನಂತೆ. ಈ ರಕ್ಕಸನನ್ನು ಮುರುಗನು ಕೊಂದನು. ಕಾವಡಿಯನ್ನು ಹೊರುವವರು ಈ ಬೆಟ್ಟಗಳ ದಾರಿ ಮಧ್ಯದಲ್ಲಿ ಇರುವ ಇಡುಂಬನ ಗುಡಿಗೂ ಹೋಗಿ ಪೂಜೆ ಸಲ್ಲಿಸದಿದ್ದರೆ ಯಾತ್ರೆ ಪೂರ್ಣವಾಗದೆಂಬ ನಂಬಿಕೆ ಜನಪದಕ್ಕಿದೆ. ಈ ಬೆಟ್ಟಗಳಲ್ಲಿರುವ ಮುರುಗನ ದೇವಸ್ಥಾನಕ್ಕೆ ಯಾತ್ರೆ ಹೋಗುವ ಕಾವಡಿ ಹರಕೆಯ ಯಾತ್ರಿಕರು ತಮ್ಮ ಕೆಳದುಟಿಗೆ ತಾಮ್ರ ಅಥವಾ ಹಿತ್ತಾಳೆಯ ಬಳೆಗಳನ್ನು ಚುಚ್ಚಿಕೊಳ್ಳುತ್ತಾರೆ! ಇದು ಅವರ ಮೌನವನ್ನು ಕಾಪಾಡಲಿಕ್ಕಂತೆ ! ದೈಹಿಕ ಹಾಗೂ ಮನೋಬಲವನ್ನಪೇಕ್ಷಿಸುವ ಅತ್ಯಂತ ಕಠಿಣತಮವಾದ ತಾಂಡವರೂಪದ /ಬಲಯುತವಾದ ಈ ಕಾವಡಿ ಚಿಂದು ನೃತ್ಯವು ಭಕ್ತರಿಗೆ ಈ ರೀತಿಯಾಗಿ ತಮ್ಮನ್ನು ತಾವೇ ಶಿಕ್ಷಿಸಿಕೊಳ್ಳುತ್ತ, ತಮ್ಮ ಅಹಂಕಾರ, ಕೋಪತಾಪಾದಿಗಳು, ದೈಹಿಕ ಹಾಗೂ ಮನೋದೌರ್ಬಲ್ಯಗಳು ಮುಂತಾದ ಕೊರತೆಗಳನ್ನು ದೂರ ಮಾಡಿಕೊಳ್ಳುವ ಭಕ್ತಿಯ ಸಾಧನವಾಗಿದೆ.



Copyright Reserved

ವಳಿನಡೈಚ್ಚಿಂದು —

ವಳಿನಡೈಚ್ಚಿಂದುಗಳು ಸಾಮಾನ್ಯವಾಗಿ ಕಾಡುಪ್ರದೇಶದ ಕಠಿಣಮಾರ್ಗಗಳಲ್ಲಿ ಯಾತ್ರಾರ್ಥಿಗಳಾಗಿ ನಡೆಯುವಾಗ ಹಾಡುವಂತಹದು. ಚತುರಗಿರಿ (ಚದುರಗಿರಿ/ಸತುರಗಿರಿ) ಎಂಬ ದೊಡ್ಡ ಬೆಟ್ಟವೊಂದು ತಮಿಳುನಾಡಿನ ಮಧುರೈ ಪಟ್ಟಣದ ನೈರುತ್ಯದಿಕ್ಕಿನಲ್ಲಿ ಸುಮಾರು 58 ಕಿ. ಮೀ. ದೂರದಲ್ಲಿ ಕಾಡಿನಿಂದ ಸುತ್ತುವರೆದಿದೆ. ಈ ಗುಡ್ಡಗಾಡುಗಳಲ್ಲಿ ಸುಮಾರು 17 ನೆಯ ಶತಮಾನದಲ್ಲಿ ರಚಿತವಾದ ಸುಂದರಮಹಾಲಿಂಗಂ ಮತ್ತು ಚಂದನಮಹಾಲಿಂಗಂ ಎಂಬ ಎರಡು ಶಿವಾಲಯಗಳಿದ್ದು ಇಲ್ಲಿರುವ ಗುಹೆಗಳಲ್ಲಿ ಸಿದ್ಧರು ವಾಸಿಸುತ್ತಾ ಉಪಾಸನೆಯನ್ನು ಮಾಡುತ್ತಾರೆಂದು ಪ್ರತೀತಿಯಿದೆ. ಈ ಗುಹೆಗಳಲ್ಲಿರುವ ಬಂಡೆಗಲ್ಲುಗಳಲ್ಲಿ ಅತ್ಯಂತ ಪ್ರಾಚೀನವಾದ ವರ್ಣಚಿತ್ರಗಳಿವೆ. ಪ್ರತಿ ಅಮಾವಾಸ್ಯೆಯಂದು ತಮಿಳಿಗರಿಗೆ ಪ್ರಸಿದ್ಧ ಯಾತ್ರಾಸ್ಥಳವಾದ ಈ ಕ್ಷೇತ್ರಗಳ ಆಡಳಿತವನ್ನು ಸಪ್ಪೂರಿನ ಪಾಳಿಯಾರ್ ಜಮೀನುದಾರರು ನಡೆಸುತ್ತಿದ್ದರು. ಈ ದೇವಾಲಯಗಳ ಅರ್ಚಕರೂ ಆಗಿರುವ ಪಾಳಿಯಾರ್ ಜನಾಂಗದವರು ನಾಟಿವೈದ್ಯದಲ್ಲಿ, ಸಿದ್ಧವೈದ್ಯದಲ್ಲಿ ಉನ್ನತ ಪರಿಣತಿಯನ್ನು ಹೊಂದಿದವರು. ಇಲ್ಲಿಗೆ ನಡೆದು ಬರುವ ಯಾತ್ರಾರ್ಥಿಗಳು ಚತುರಗಿರಿ ವಳಿನಡೈಚ್ಚಿಂದು ಭಕ್ತಿಗೀತಗಳನ್ನು ಹಾಡುತ್ತ ಬೆಟ್ಟವನ್ನು ಹತ್ತುತ್ತಾರೆ.

ಚತುರಗಿರಿ ವಳಿನಡೈಚ್ಚಿಂದುವಿನ ಗೀತಗಳು ಪಂಚಪದಿ ವೃತ್ತಗಳಲ್ಲಿ ರಚಿತವಾಗಿದ್ದು(ತಮಿಳು ಛಂದಸ್ಸಿನಲ್ಲಿ ಇದನ್ನು 'ಸೀರ್' ಎಂದು ಕರೆಯುತ್ತಾರೆ. ಸೀರ್ ಎಂದರೆ ವೃತ್ತ), ಕೆಲವು ಚಿಂದು ಹಾಡುಗಳು 8 ರಿಂದ 24 ಪಾದಗಳನ್ನು ಹೊಂದಿದ್ದು ಕಥಾನಕಗಳಂತೆ ಇರುತ್ತದೆ. ಇದರಲ್ಲಿ ತಲೈವಿ(ನಾಯಕಿ)ಯು ತನ್ನ ತೋಳಿ(ಸಖಿ)ಗೆ ದೇವಾಲಯವನ್ನು ಕುರಿತು ಮಾಡುವ ವರ್ಣನೆಗಳಿರುತ್ತವೆ. ಗೀತದ ಪ್ರತಿ ಖಂಡವೂ ತನ್ನ ಗತಿ - ಲಯಗಳನ್ನು ಕುರಿತಾಗಿ ಹಿಂದೆ ಪರಂಪರಾಗತವಾಗಿದ್ದ ಹಾಡುಗಳ ಮಟ್ಟುಗಳನ್ನು ಉದಾಹರಣೆಗಾಗಿ ನೀಡುವಂತಿರುತ್ತದೆ. ಮೊದಲ ಹಾಡು ಪ್ರಾರ್ಥನಾ ಗೀತವಾಗಿದ್ದು ಅನಂತರ ಉದ್ದೇಶಿತ ವಸ್ತುವಿಷಯಗಳನ್ನು ಗೀತವು ಹೊಂದಿರುತ್ತವೆ.

ಚತುರಗಿರಿಯ ವಳಿನಡೈಚ್ಚಿಂದುವು ಮೊದಲಿಗೆ ಗಣೇಶನ ಸ್ತುತಿಯಿಂದ ಆರಂಭವಾಗಿದೆ. ಅನಂತರ ತನ್ನ ಸಖಿಯ ಸೌಂದರ್ಯವನ್ನು ಕುರಿತು ನಾಯಕಿಯು ಹೊಗಳುವ ಹಾಡಿದ್ದು ಇದರ ಮಟ್ಟು 'ಮಾಮಗಳ್ ಮೇವಿಯ ಪಿರೈನಗರ್' ಹಾಡಿನಂತೆ ಇರುತ್ತದೆಂದು ಉಲ್ಲೇಖಿಸಿದೆ. ಐದು ಪಾದದ ಈ ಹಾಡು ಬಹುಶಃ ಹಿಂದಿದ್ದ ಚಿಂದು ಹಾಡಿನ ಮಟ್ಟಾಗಿದ್ದಿರಬಹುದೆಂದು ಹಿಂದೆಯೇ ಹೇಳಿದೆ. ಅನಂತರದಲ್ಲಿ ಪಂಚಪದಿಗಳ ಹದಿಮೂರು ಪದ್ಯಗಳಿದ್ದು ಇದರಲ್ಲಿ ನಾಯಕಿಯು ಸುಂದರಮಹಾಲಿಂಗದೇವನ ಹಾಗೂ ಆತನ ಪತ್ನಿಯಾದ ಆನಂದವಲ್ಲಿಯ ಕೀರ್ತಿಯನ್ನು ಕುರಿತಾಗಿ ವರ್ಣಿಸುತ್ತಾಳೆ. ಈ ಭಾಗವು ಲಿಂಗೋದ್ಭವದ ಸಮಯದಲ್ಲಿ ವಿಷ್ಣು ಹಾಗೂ ಬ್ರಹ್ಮರುಗಳು ಅದರ ಆದ್ಯಂತಗಳನ್ನು ಕಂಡುಹಿಡಿಯಲಾಗದ ವಿಷಯವನ್ನೂ ತ್ರಿಪುರಾಸುರ ದಹನ, ಶಿವನ ಮಹಿಮೆ ಇತ್ಯಾದಿಗಳೂ ಬಣ್ಣಿಸಲ್ಪಟ್ಟಿವೆ. ಅನಂತರದ ಭಾಗವು

ಚತುರಗಿರಿಯ ಶ್ರೀಮಂತಿಕೆಯನ್ನು ಬಣ್ಣಿಸಿದೆ. ಆರು ಪಂಚಪದಿ ಪದ್ಯಗಳುಳ್ಳ ಈ ಹಾಡು ಅಣ್ಣಾಮಲೈ ರೆಡ್ಡಿಯಾರ್ ರವರ 'ಎನ್ನಾಡಿ ನಾನ್ ಪೆರ್ರ ಮಂಗೈ' ಎಂಬ ಚಿಂದು ಹಾಡಿನ ಮಟ್ಟಿನಲ್ಲಿದೆ. ಅನಂತರದ ನಾಲ್ಕು ಚಿಂದು ಪಂಚಪದಿ ಪದ್ಯಗಳು 'ಮಂಜು ನಿಗರ್ ಕೊಂತಾಲಮ್ಮಿನ್ನು' ಎಂಬ ಚಿಂದು ಹಾಡಿನ ಮಟ್ಟಿನಲ್ಲಿದೆ ಎಂದು ಹೇಳಲ್ಪಟ್ಟಿದ್ದು ವಿಶೇಷವಾದ ವೃಕ್ಷ, ಔಷಧಿ, ದೇಗುಲದ ಪೂಜೆ, ಹರಕೆಗಳು ಇತ್ಯಾದಿಗಳನ್ನು ಕುರಿತಾಗಿದೆ. ಮುಂದಿನ ಭಾಗವು ಚೌಪದಿಯಲ್ಲಿದ್ದು 14 ಹಾಡುಗಳನ್ನು 'ತೆಲ್ಲುದಮಿಳುಕುದವು ಶೀಲನ್' ಎಂಬ ಅಣ್ಣಾಮಲೈ ರೆಡ್ಡಿಯಾರ್ ವಿರಚಿತ ಕಾವಡಿಚಿಂದುವಿನ ಹಾಡಿನ ಮಟ್ಟಿನಲ್ಲಿದ್ದು ಸ್ಥಳೀಯ ವಿಶೇಷಗಳನ್ನು ವರ್ಣಿಸಿದೆ.

https://www.academia.edu/39474001/The_Paliyars_and_Shiva_Temples_of_the_Caturagiri_Hills_Virudunagar_District_Tamil_Nadu_South_India_and_the_Caturagiri_Vazhinadaiccindu

copyright preserved

ನೊಂಡಿಚಿಂದು —

ನೊಂಡಿಚ್ಚಿಂದುಗಳು ನೊಂಡಿಗಳಿಗೆ ಸಂಬಂಧಿಸಿದ್ದು. ಎಂದರೆ ಜಾನಪದ ನಾಟಕಗಳಲ್ಲಿ ನಿರೂಪಕ ಅಥವಾ ನಿವೇದಕರು ನಾಟಕದ ಆರಂಭದಲ್ಲಿ ಮಾಡುವ ಪ್ರಸ್ತುತಿಗೆ ಸಂಬಂಧಿಸಿದ್ದು. ಒಂದು ನೊಂಡಿಚಿಂದುವಿನ ಕಥಾನಕವು ಹೀಗಿದೆ : 'ಭೂಮಿಯಲ್ಲಿ ಶಿವನು ಕೂಲಿಕಾರನಂತೆ ವೇಷವನ್ನು ಧರಿಸಿ ಆತನ ಪರಮಭಕ್ತೆಯಾದ ಮುದುಕಿ ವಂಡಿಯ ಮನೆಗೆ ಬಂದಿದ್ದಾನೆ. ಆಕೆಯು ನೀಡಿದ ಸಿಹಿಪಾಯಸವನ್ನುಣ್ಣುತ್ತ ಮೆಚ್ಚುತ್ತ ತಾನು ಅತಿದೂರದಿಂದ ಪಯಣಿಸಿಕೊಂಡು ಬಂದಿದ್ದ ಹಿರಿದಾದ ಪರ್ವತಶ್ರೇಣಿಯ ದಾರಿಯ ಪರಿಯನ್ನು ವರ್ಣಿಸುತ್ತಾನೆ. ತನಗೆ ತನ್ನ ಇಬ್ಬರು ಪತ್ನಿಯರಾದ ಪಾರ್ವತಿ ಗಂಗೆಯರಿಂದುಂಟಾದ, ತನ್ನ ಮಾತನ್ನೇ ಕೇಳದ ಮೂವರು ಪುತ್ರರಾದ ಗಣಪತಿ, ಮುರುಗನ್, ವೀರಭದ್ರರಿಂದುಂಟಾದ ಅಲಕ್ಷ್ಯ, ಅಳಲುಗಳನ್ನು ಆಕೆಯ ಬಳಿ ತೋಡಿಕೊಳ್ಳುತ್ತಾನೆ. ತನ್ನ ಪತ್ನಿಯ ಸಹೋದರನಾದ ನಾರಾಯಣನೋ ತನ್ನನ್ನು ನಿರಾಳವಾಗಿ ಕಡೆಗಣಿಸಿ ಸುಖದಿಂದ ಪಾಲ್ಗಡಲಲ್ಲಿ ಆದಿಶೇಷನ ಮೇಲೆ ಪವಡಿಸಿದ್ದಾನೆ, ಎಂದು ದೂರುತ್ತಾನೆ! ಆ ಸಮಯದಲ್ಲಿ ಊರಿನ ರಾಜಭಟರು ಗಟ್ಟಿಮುಟ್ಟಾಗಿರುವ ವ್ಯಕ್ತಿಯೊಬ್ಬನು ಯಾವ ಕೆಲಸಕಾರ್ಯಗಳನ್ನೂ ಮಾಡದೆ ಸುಮ್ಮನೆ ಮುದುಕಿಯ ಮನೆಯಲ್ಲಿ ಕುಳಿತು ತಿನ್ನುವುದನ್ನು ನೋಡಿ ಶಿವನಿಗೆ ಜೋರಾದ ಛಡಿಯೇಟುಗಳನ್ನು ಕೊಡುತ್ತಾರೆ. ಶಿವನಿಗೆ ಬಿದ್ದ ಒಂದೊಂದು ಪೆಟ್ಟಿನ ನೋವಿನ ಝಳವನ್ನು ಆ ಊರಿನ ರಾಜನೂ ಅನುಭವಿಸುತ್ತಾನೆ! ಈ ಮೊದಲು ತನ್ನ ಭಕ್ತಳಾದ ವಂಡಿಯಲ್ಲಿ ತನ್ನ ಹೆಸರು ಚೊಕ್ಕಲಿಂಗಂ ಎಂದೂ ತನ್ನ ಪತ್ನಿಯ ಹೆಸರು ಮೀನಾಕ್ಷಿ ಎಂದು ಹೇಳಿದ್ದರೂ ಈಗ ಆಕೆಗೆ ತನ್ನ ನಿಜರೂಪವನ್ನು ತೋರಿ ಅನುಗ್ರಹಿಸಿ, ಮೋಕ್ಷವನ್ನು ಕರುಣಿಸುತ್ತಾನೆ.

ತಮಿಳುನಾಡಿನಲ್ಲಿ ಚಿಂದು ಎಂಬ ಶಬ್ದವು ಸಾಮಾನ್ಯವಾಗಿ ತಮಿಳು ಭಾಷೆಯ ವಿಶೇಷ ದ್ವಿಪದಿ ರಚನೆಗಳ ವೃತ್ತಗಳಿಗೆ ಪ್ರಯೋಗಿಸಲ್ಪಡುತ್ತವೆ. ಈ ದ್ವಿಪದಿಗಳು ಲೋಕಪ್ರಸಿದ್ಧವಾಗಿ ರೂಢಿಯಲ್ಲಿರುವ ಜನಪದ ರೂಢಿಯ ರಾಗಗಳ ಮಟ್ಟುಗಳಲ್ಲಿ ಹಾಡಲ್ಪಡುತ್ತವೆ. ಕಾವಡಿಚಿಂದುವಿನ ಹಾಡುಗಳು ಚರಣಗಳನ್ನು ಮಾತ್ರ ಹೊಂದಿದ್ದು ಅವಕ್ಕೆ ಪಲ್ಲವಿ ಅನುಪಲ್ಲವಿಗಳು ಇರುವುದಿಲ್ಲ. ಸಾಮಾನ್ಯವಾಗಿ ಜನಪದಕ್ಕೆ ಹೊಂದುವ ರಾಗಗಳಾದ ನಾದರಾಮಕ್ರಿಯಾ, ಆನಂದಭೈರವಿ, ಹರಿಕಾಂಭೋಜಿ ರಾಗದ ಜನ್ಯರಾಗವಾದ ಜಂಜುರಿಟಿ, ಅಥವಾ ಅದರ ಇನ್ನಿತರ ಜನ್ಯರಾಗಗಳಲ್ಲಿ ಇರುತ್ತವೆ. ಈ ಹಾಡುಗಳು ಹರಕೆಗಾಗಿ ಕಾವಡಿಯನ್ನು ಹೊರುವ ಭಕ್ತರಿಗಾಗಿ ಇದ್ದು ಹೆಚ್ಚಿನವು ಮುರುಗ (= ಸುಬ್ರಹ್ಮಣ್ಯ, ಕಾರ್ತಿಕೇಯ)ನನ್ನು ಕುರಿತಾದ ಭಕ್ತಿಗೀತಗಳಾಗಿರುತ್ತವೆ. ತಮಿಳು ಭಾಷೆಯಲ್ಲಿ ಅಮ್ಮಾನೈ, ಕುಮ್ಮಿ, ಕಾವಡಿಚಿಂದು ಮುಂತಾದ ಪ್ರಕಾರಗಳಲ್ಲಿ ರಾಮಾಯಣ ಕಥೆಯೂ ಮೂಡಿ ಬಂದಿದೆ. ಚಿಂದು ಭಾಗವತದ ಕಥಾಭಾಗವು ಕವಿತೆಗಳು, ಪ್ರಾಸಬದ್ಧ ಹಾಡುಗಳು ಮತ್ತು ಗದ್ಯಗಳಿಂದ ರಚಿಸಲ್ಪಟ್ಟಿರುತ್ತವೆ. ಕಾವಡಿಚಿಂದುವಿನ ಸಾಹಿತ್ಯವು ತಮಿಳುನಾಡಿನ ಜನಪದ ಸಾಹಿತ್ಯವಾಗಿದ್ದರೂ ಕರ್ಣಾಟಕ ಶಾಸ್ತ್ರೀಯ ಸಂಗೀತ ಕಚೇರಿಗಳಲ್ಲೂ ಇದನ್ನು ಲೋಕರಂಜನೆಗಾಗಿ ಕಚೇರಿಯ ಕಡೆಯ ಭಾಗದಲ್ಲಿ ವಿದ್ವಾಂಸರು ತುಕಡಾ ರೀತಿ ಹಾಡುತ್ತಾರೆ. ಅಂತೆಯೇ ನೊಂಡಿ ಚಿಂದು, ವಳಿನಡೈಚಿಂದುಗಳ ಪದ್ಯಗಳೂ ಕರ್ನಾಟಕಶಾಸ್ತ್ರೀಯಸಂಗೀತದ ವೇದಿಕೆಗಳಲ್ಲಿ ಪ್ರಸ್ತುತಗೊಳ್ಳುತ್ತವೆ.

ತಮಿಳುನಾಡಿನಲ್ಲಿ ರೂಢಿಯಿರುವ ಕೆಲವು ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳಿಗೆ ಪರಸ್ಪರವಾಗಿ ಜಾನಪದ ಪದ್ಯಗಳಿಗೆ ರೂಢಿಯಿರುವ ರಾಗಗಳ ಪಟ್ಟಿ ಇಂತಿದೆ. : —

1..ಕ.ಸಂ.ರಾಗ- ನಾದನಾಮಕ್ರಿಯಾ = ಜಾನ.ರಾಗ — ಆನಂದ ಕಳಿಪ್ಪು.
2..ಆನಂದ ಭೈರವಿ = ಆನಂದ ಕಳಿಪ್ಪು
3..ಪುನ್ನಾಗವರಾಳಿ = ಒಡಮ್
4..ಸೆಂಜುರುಟ್ಟಿ /ಜಂಜುರಿಟಿ = ತೆಮ್ಮಂಗು, ಚಿಂದು.
5..ಕುರಂಜಿ = ಗೌರಿಕಲ್ಯಾಣಂ.
6..ನೀಲಾಂಬರಿ = ತಲಟ್ಟು

ಭಕ್ತಿವಿಷಯಕವಾದ ಜಾನಪದಗೀತೆಗಳಾದ, ಚಾರಿತ್ರಿಕ ವಿಷಯಗಳನ್ನೂ, ಧಾರ್ಮಿಕ ಆಚರಣೆಗಳ ವಿಷಯಗಳನ್ನೂ ಒಳಗೊಂಡಿರುವ ಕಾವಡಿಚಿಂದು ಹಾಡುಗಳು ಪ್ರಾಚೀನ ಸಂಪ್ರದಾಯದ ಚಿಂದೂ ಹಾಡುಗಳನ್ನನುಕರಿಸಿ ಅನಂತರದಲ್ಲಿ ಅನೇಕಾನೇಕವಾಗಿ ಪರದೇಶಗಳ ವಸಾಹತುಗಳ ಕಾಲದಲ್ಲಿಯೂ ರಚಿತವಾದವು. ಸಾಂಪ್ರದಾಯಿಕ ಚಿಂದೂ ಹಾಡುಗಳನ್ನನುಕರಿಸಿ ಮುರುಗನ /ಸುಬ್ರಹ್ಮಣ್ಯನ ಸ್ತುತಿಪರವಾದ ಕಾವಡಿ ಚಿಂದು ರಚನೆಗಳನ್ನು ತಮಿಳು ಕವಿಗಳಾದ ಅಣ್ಣಾಮಲೈ ರೆಡ್ಡಿಯಾರ್ ರವರೂ (1865 - 1891), ರಾಷ್ಟ್ರಕವಿ ಸುಬ್ರಹ್ಮಣ್ಯಭಾರತಿಯವರೂ, ಕವಿ ಗೋಪಾಲಕೃಷ್ಣ ಭಾರತಿಯವರೂ ರಚಿಸಿದ್ದಾರೆ. ಸಂಗೀತಸಂತ ತ್ಯಾಗರಾಜರ ಕಾಲದವರೇ ಆದ ಕವಿ ಗೋಪಾಲಭಾರತಿಯವರು ರಚಿಸಿದ ತಮಿಳು ಗೇಯನಾಟಕವಾದ 'ನಂದನಾರ್ ಚರಿತಂ' ನಲ್ಲಿ 45 ಕೀರ್ತನೆಗಳು, 7 ಕನ್ನಿಗಳು, 7 ಕಡುಕ್ಕಗಳು, 4 ತುಕಡಗಳು 5 ಇರುಸೊಲ್ಲಲಂಗರಗಳು, 10 ದಂಡಕಗಳು, 3 ಆನಂದಕಳಿಪ್ಪುಗಳು, 2 ಚಿಂದುಗಳು, 3 ಲಾವಣಿಗಳು ಹಾಗೂ 2 ನೊಂಡಿಚ್ಚಿಂದುಗಳೂ ಇವೆ. ಊತ್ತುಕಾಡು ವೆಂಕಟಕವಿ, ರಾಮಲಿಂಗ ಅಡಿಗಳ್, ಊತ್ತುಕಾಡು ವೆಂಕಟಸುಬ್ಬಯ್ಯರ್ ಮೊದಲಾದವರು ಕಾವಡಿಚಿಂದುವಿನ ಅನೇಕ ಪ್ರಸಿದ್ಧ ಗೀತರಚನೆಗಳನ್ನು ರಚಿಸಿದ್ದರೂ ಕಾವಡಿಚಿಂದುವಿನ ಗೀತಗಳನ್ನು ಮೊದಲು ಜನಪ್ರಿಯಗೊಳಿಸಿದವರು ಮೇಳಗಾರಂ ತಿರಿಕೂಡ ರಾಸಪ್ಪ (ರಾಜಪ್ಪ) ಕವಿಯಾರ್.

ಹಿಂದೂಗಳು ಮಾತ್ರವಲ್ಲದೆ ಕೆಲವು ಇಸ್ಲಾಂ ಮತದವರೂ ಚಿಂದು ಹಾಡುಗಳನ್ನು ಕುರಿತಾಗಿ ಪುಸ್ತಕಗಳನ್ನು ಬರೆದಿರುವುದುಂಟು. 20 ನೇ ಶತಮಾನದ 2-3ನೆಯ ದಶಕಗಳಲ್ಲಿ ಎಸ್. ಖಾದರ್ ಇಬ್ರಾಹಿಂ ಮತ್ತು ಎಸ್. ಕೆ. ನಾಗಪ್ಪ ನಾಯಕರ್ ರವರುಗಳು ತಿರುಚ್ಚಿಯ ಆರಾಧ್ಯ ದೈವ ಕುಲಮಾಯಿ ದೇವಿಯನ್ನು ಕುರಿತಾಗಿ ಕುಮ್ಮಿ ಶೈಲಿಯ ಅಲಂಕಾರ ಚಿಂದು ಹಾಡುಗಳ ಪುಸ್ತಕವನ್ನು ಬರೆದಿದ್ದಾರೆ, ಎಮ್. ಕರೀಂ ಸಾಹೇಬರು ತಿರುಚೆಂದೂರಿನ ಸುಬ್ರಹ್ಮಣ್ಯ ದೇವರನ್ನು ಕುರಿತಾದ ಸಣ್ಣ ಕಥಾರೂಪದ ವಳ್ಳಿಯರ್ ಚಿಂದು ಹಾಡುಗಳ ಸಾಂಪ್ರದಾಯಿಕ ಜನಪದ ಗೀತಗುಚ್ಛವನ್ನು ಬರೆದಿದ್ದಾರೆ, ಟಿ. ಸಾಹಿಬ್ ಪುಲವರ್ ರವರು ಅಧಿಶಯ ವೆಳ್ಳಂ ಚಿಂದು ನೃತ್ಯಗೀತಗಳನ್ನು ಪ್ರವಾಹದಿಂದ ಉಕ್ಕೇರುವ ಪುಣ್ಯತೀರ್ಥ ಕಾವೇರಿಯನ್ನು ಕುರಿತಾಗಿ ಬರೆದಿದ್ದಾರೆ. ತಮಿಳುನಾಡಿನ ತಂಜಾವೂರಿನ ಬಳಿ ಇರುವ ಉಮಯಾಳಪುರಂನಲ್ಲಿ ವಾಸವಿದ್ದ ಆನಂದಭಾರತಿ ಅಯ್ಯಂಗಾರ್ ರವರು (ಇ. 1786 - 1846) ನೊಂಡಿ ನಾಟಕಗಳನ್ನೂ ನೊಂಡಿಚ್ಚಿಂದುಗಳನ್ನು ಬರೆದಿದ್ದಾರೆ. 19 ನೆಯ ಶತಮಾನದಲ್ಲಿ ಸಿರುಮಾನವೂರು ಮುನುಸಾಮಿ ಮೊದಲಿಯಾರರು ತಮ್ಮ ತೀರ್ಥಯಾತ್ರಾಪರ್ಯಟನವನ್ನು ದಾಖಲಿಸಲು ನೊಂಡಿಚಿಂದುವಿನಂತಹ ರಚನೆಯನ್ನು ಮಾಡಿದ್ದಾರೆ.

#.. [Learn Valli Kanavan Kavadi Sindhu with Tamil lyrics - YouTube]
#.. [Senni kula nagar vaasan - YouTube] sung by Sudha Raghunathan.

ಆಂಧ್ರ- ತೆಲಂಗಾಣ ಪ್ರದೇಶಗಳ ಚಿಂದು ನೃತ್ಯ —

ತೆಲಂಗಾಣದೇಶದ ಅತ್ಯಂತ ಪ್ರಖ್ಯಾತ ರಂಗಪ್ರದರ್ಶನಕಲೆಯೆಂದರೆ ಚಿಂದು ಯಕ್ಷಗಾನ. 'ಚಿಂದು' ಎಂದರೆ ನೆಗೆ, ಹಾರು, ಎಗರು ಎಂದರ್ಥ. ಈ ರಂಗಕಲೆಯು ಹಾರುವುದನ್ನು, ನೆಗೆತಗಳನ್ನೂ ಬಹಳವಾಗಿ ಹೊಂದಿರುವುದರಿಂದಲೇ ಚಿಂದು ಯಕ್ಷಗಾನವೆಂದು ಹೆಸರುಗಳಿಸಿತು. ಮಾದಿಗ ಜನಾಂಗದ ಉಪಜನಾಂಗವಾದ ಚಿಂದುಮಾದಿಗ ಜನಾಂಗವೇ ಈ ಕಲೆಯಲ್ಲಿ ನುರಿತವರಾಗಿದ್ದು ರಂಗಪ್ರಯೋಗವನ್ನು ಮಾಡುವುದರಿಂದಲೂ ಇದಕ್ಕೆ ಚಿಂದು ಯಕ್ಷಗಾನವೆಂದು ಹೇಳುತ್ತಾರೆ. ಹೆಚ್ಚಿನ ಕಥೆಗಳು ವಿಷ್ಣುಮಹಿಮೆಗಳನ್ನು ವರ್ಣಿಸುವ ಭಾಗವತ ಪುರಾಣಕ್ಕೇ ಸೇರಿದವಾದ್ದರಿಂದ ಚಿಂದು ಯಕ್ಷಗಾನವನ್ನು ಚಿಂದು ಭಾಗವತವೆಂದೂ ಹೇಳುತ್ತಾರೆ. ಸರ್ಕಾರದ ರೀತ್ಯಾ ಚಿಂದುಮಾದಿಗ ಜನಾಂಗವು ಪರಿಶಿಷ್ಟ ಜಾತಿಗೆ ಸೇರಿದ್ದು.

ಆಂಧ್ರದ ಈ ಚಿಂದು ಕಲಾಕಾರ ಪಂಗಡವು ನಲಗೊಂಡ ಜಿಲ್ಲೆಯ, ಅರವಪಲ್ಲಿ ಮಂಡಲದ, ಕೋಡೂರು ಹಳ್ಳಿಯಲ್ಲಿ, ಪೆದ್ದ ನೇಮಿಲಿ ಹಳ್ಳಿಯ ಮಾದಿಗ ಪೇಟೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ಈ ಪಂಗಡವು ಚಿಂದುವು ಪಾರಂಪರಿಕವಾಗಿ ಬಂದಿರುವ ಮಾದಿಗಜಾತಿಯಲ್ಲೇ ಒಂದು ಉಪಜಾತಿಯಾಗಿದೆ. ಈ ಚಿಂದು ಮಾದಿಗರಿಗೆ ಜಾಂಬಪುರಾಣವೆಂಬ ಕಥಾನಕವನ್ನು ರಂಗಪ್ರಯೋಗ ಮಾಡುವ ಕಲೆಯು ಕುಲ-ವಂಶಪಾರಂಪರ್ಯವಾಗಿ ಬಂದಿರುವುದಾಗಿದೆ.

ಚಿಂದು ಪರಂಪರೆಯಲ್ಲಿ ಜಂಬೂಪುರಾಣ ಹಾಗೂ ಯಲ್ಲಮ್ಮ ವೇಷವೆಂದು ಮೂಲವಾದ ಎರಡು ಕಥೆಗಳಿವೆ. ಈ ಚಿಂದು ಕಲೆಯ ರಕ್ಷಕರು ಮಾದಿಗರು, ಇವರು ಎಲ್ಲಮ್ಮ ದೇವತೆಯ ಪೂಜಾರಿಗಳೂ ಹೌದು. ತಮ್ಮ ಹಳ್ಳಿಯಲ್ಲಿಯ ಪ್ರದರ್ಶಿಸುವ ಜಂಬುಪುರಾಣ ಹಾಗೂ ಯಲ್ಲಮ್ಮ ವೇಷದ ಈ ಕಲೆಯು ಸಾಮಾನ್ಯವಾಗಿ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ಅವರ ಕೂಟದೊಳಗೆ ಮಾತ್ರ ಪ್ರದರ್ಶಿಸಲ್ಪಡುತ್ತದೆ. ಇನ್ನೊಂದು ಬಗೆಯದು ಹಳ್ಳಿಯ ಎಲ್ಲರಿಗೂ ದೊರೆಯುವಂತಹುದು. ಇದನ್ನು ಚಿಂದು ಭಾಗವತ ಅಥವಾ ಚಿಂದು ಯಕ್ಷಗಾನವೆಂದು ಕರೆಯುತ್ತಾರೆ. ಈ ಕಲೆಯು ಅವರಿಗೆ ಕಲಾಕಾರರೆಂಬ ಕೀರ್ತಿಯನ್ನು ತಂದುಕೊಟ್ಟಿದೆ. ಇದರಲ್ಲಿ ರಾಮಾಯಣ, ಮಹಾಭಾರತ ಹಾಗೂ ಅನೇಕ ಪುರಾಣ ಕಥಾನಕಗಳು ನೃತ್ತಸಮೇತವಾಗಿ ಪ್ರದರ್ಶಿಸಲ್ಪಡುತ್ತವೆ. ಹತ್ತರಿಂದ ಇಪ್ಪತ್ತೈದು ವರ್ಷಗಳವರೆಗಿನ ಕಲಾಕಾರರು ಪಾತ್ರಗಳಿಗೆ ತಕ್ಕಂತೆ ಅತ್ಯಂತ ವರ್ಣಯುತ ವೇಷಭೂಷಗಳನ್ನು ಧರಿಸಿ ಭಾಗವಹಿಸುತ್ತಾರೆ. ಇದರಲ್ಲಿ ಕಥಾನಕಗಳ ಹಾಡುಗಳು ದೇವತೆಗಳ ಕಥೆಗಳನ್ನು ಯಕ್ಷರು ಹಾಡುವಂತೆಯೇ ರಚಿಸಲ್ಪಟ್ಟಿದ್ದರಿಂದ ಇವು ಯಕ್ಷಗಾನ ಅಥವಾ ಭಾಗವತ ಶೈಲಿಗಳದು ಎಂದು ಕರೆಯುತ್ತಾರೆ ಎಂದು ವಿದ್ವಾಂಸರು ಹೇಳುತ್ತಾರೆ. ಕಥಾನಕವನ್ನು ವಾದ್ಯಗಳೊಂದಿಗೆ ಗಾಯಕರು ಗಾಯನ ಮಾಡುತ್ತಾರೆ. ಈಗ ಚಿಂದು ಕಲಾಪ್ರದರ್ಶನವು ಊರಿನ ಹಲವು ಉತ್ಸವಗಳ ಸಂದರ್ಭಗಳಲ್ಲಿಯೂ ಪ್ರದರ್ಶಿಸಲ್ಪಡುತ್ತವೆ.

ಆಂಧ್ರ ರಾಜ್ಯದ ಇತಿಹಾಸದ ಆದ್ಯಂತವಾಗಿ ಅಸ್ಥಿತ್ವದಲ್ಲಿರುವ ಹಲವು ನೃತ್ಯ ಪ್ರಕಾರಗಳೆಂದರೆ, ಚೆಂಚು ಭಾಗವತಂ, ಕೂಚಿಪುಡಿ, ಭಾಮಾಕಲಾಪಮ್, ಬುರ್ರಕಥಾ, ವೀರನಾಟ್ಯಂ, ಬುಟ್ಟು ಬೊಮ್ಮಲು, ದಪ್ಪು, ತಪ್ಪೆಟ ಗುಲ್ಲು, ಲಂಬಾಡಿ, ಬೊನಾಲು, ಧಿಂಸ, ಕೋಲಾಟಂ ಮತ್ತು ಚಿಂದು. ಚಿಂದು ಭಾಗವತವು ತೆಲಂಗಾಣದಲ್ಲಿ ಬಹುವಾಗಿ ಪ್ರಸ್ತುತಪಡಿಸುವ ಯಕ್ಷಗಾನವನ್ನು ಹೋಲುವ ಕಲೆಯಾಗಿದೆ. ಕಾಲಕ್ರಮದಲ್ಲಿ ಈ ಕಲೆಯು ಮಾಲರು ಮತ್ತು ಮಾದಿಗ ಜನಾಂಗದವರಿಗೆ ಮಾತ್ರ ಸೀಮಿತವಾಗಿ, ಚಿಂದು ಭಾಗವತವನ್ನು ಮಾಡುವ ಜನಾಂಗವು ಪೆದ್ದ (ದೊಡ್ಡ) ಮಾದಿಗರೆಂದೂ, ಭಿಕ್ಷಾ ಪರ್ಯಟನೆ ಮಾಡುವ, ಯಕ್ಷಗಾನಗಳನ್ನು ಮಾಡುವ ಜನಾಂಗದವರು ಚಿನ್ನ (ಸಣ್ಣ) ಮಾದಿಗರೆಂದೂ ಕರೆಯಲ್ಪಡುತ್ತಾರೆ. ಮಾದಿಗ ಶಬ್ದವು ಮತಂಗ ಎಂಬ ಶಬ್ದದಿಂದ ಬಂದಿದೆಯೆಂದು ಕೆಲವು ಸಂಶೋಧಕರರ ಅಭಿಪ್ರಾಯ.
ತೆಲುಗುಭಾಷೆಯಲ್ಲಿ ಚಿಂದು ಎಂದರೆ ಹಾರು ಎಂದು ಒಂದು ಅರ್ಥವಿದ್ದರೆ ಶಕ್ತಿಶಾಲಿಯಾದ ಹೆಜ್ಜೆ ಎಂಬ ಅರ್ಥವೂ ಪದಕೋಶಗಳಲ್ಲಿ ದೊರೆಯುತ್ತದೆ. ಈ ನಾಟ್ಯದಲ್ಲಿ ಹಾರುವ, ನೆಗೆಯುವ ಅಂಶಗಳು ಹೆಚ್ಚಿದ್ದರಿಂದ ಈ ಭಾಗವತಕ್ಕೆ ಚಿಂದು ಭಾಗವತವೆಂಬ ಹೆಸರು ರೂಢಿಯಾಯಿತೆಂದು ತಜ್ಞರು ಹೇಳಿದ್ದಾರೆ. ಇದರಲ್ಲಿ ಕಥಾಭಾಗವು ಹೆಚ್ಚು ಭಾಗವತದ್ದೇ ಆಗಿದೆ. ಈ ಜನಾಂಗದ ಮೂಲ ಪುರುಷನು ಜಾಂಬ ಮಹಾಮುನಿಯೆಂದೂ ಜಾಂಬವ ಪುರಾಣದಿಂದ ಈ ಭಾಗವತವು ಆರಂಭವಾಗುತ್ತದೆಂದೂ ಈ ಜನಾಂಗದ ಮುಖಂಡರಾದ ಗದ್ದಾಂ ಸಾಮಯ್ಯನವರು ಹೇಳುತ್ತಾರೆ. ಯಲ್ಲಮ್ಮ ದೇವಿಯ ಆರಾಧಕರೂ ಆಗಿರುವ ಈ ಜನಾಂಗದಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರ ಮನೆಯಲ್ಲಿಯೂ ಜನರು ಈ ಕಲೆಯನ್ನು ಅಭ್ಯಾಸ ಮಾಡಿ ಕರಗತ ಮಾಡಿಕೊಂಡಿದ್ದು ಪ್ರತಿದಿನವೂ ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸುವಷ್ಟು ಪ್ರತಿಭಾವಂತರಾಗಿರುತ್ತಾರೆ. ಮಳೆಗಾಲದಲ್ಲಿ ಸಾಮಾನ್ಯವಾಗಿ ಯಕ್ಷಗಾನವನ್ನು ಮಾಡುವುದಿಲ್ಲ. ಮಳೆಗಾಲದಲ್ಲಿ ಕೃಷಿ ಕಾರ್ಮಿಕರಾಗಿಯೋ, ಮೀನುಗಾರರಾಗಿಯೋ ಅಥವಾ ಹಗ್ಗದ ತಯಾರಿಕೆಯಲ್ಲಿಯೋ ತಮ್ಮನ್ನು ತಾವು ತೊಡಿಗಿಸಿಕೊಳ್ಳುತ್ತಾರೆ. ಸರಕಾರಗಳೂ ಈ ಜನಾಂಗದ ಏಳಿಗೆಗಾಗಿ ಸ್ವಲ್ಪ ಮಟ್ಟಿಗೆ ಈಗ ಸಹಾಯವನ್ನು ಮಾಡುತ್ತಿವೆ.

copyright preserved

ಚಿಂದು ಮಾದಿಗ ಜನಾಂಗದ ಮೂಲಕಥೆ - ಜಾಂಬ ಪುರಾಣ

ಚಿಂದು ಮಾದಿಗರು ಜಾಂಬವ ಮುನಿಗೆ ಜನಿಸಿದವರು ಎಂದು ಅವರ ಕಥಾನಕಗಳು ಹೇಳುತ್ತವೆ. ಜಾಂಬವಮುನಿಯೇ ಮಾದಿಗರ ಪರಂಪರಾನುಗತ ದೈವ. ಜಾಂಬವಮುನಿಯ ದ್ವಿತೀಯ ಪತ್ನಿಯಾದ ಜಗದ್ವಿನುತಮಾತಾಳಿಂದ ಚಿಂದು ಮಾದಿಗರು ಜನಿಸಿದವರೆಂದೂ ಆತನ ಪ್ರಥಮ ಪತ್ನಿಯಾದ ಜಗದೀಶ್ವರಮಾತಾಳಿಂದ ಮಾದಿಗರು ಜನಿಸಿದರೆಂದು ಅವರ ಪರಂಪರೆಯ ನಂಬುಗೆ. ಆದ್ದರಿಂದಲೇ ಚಿಂದು ಮಾದಿಗರ ಹಾಗೂ ಮಾದಿಗರ ನಡುವಿನ ಸಂಪ್ರದಾಯ ಸಂಬಂಧಗಳು ಪರಸ್ಪರವಾಗಿ ಅವಲಂಬನೆಯನ್ನು ಹೊಂದಿರುವ ಜನಾಂಗಗಳಾಗಿವೆ. ಹಿರಿಯ ಮಗನೇ ತಂದೆಯ ವಾರೀಸುದಾರ. ಆತನೇ ಮನೆತನದ ಸಾಂಪ್ರದಾಯಿಕವಾದ ಎಲ್ಲ ಜವಾಬ್ದಾರಿಗಳನ್ನು ಹೊರಬೇಕು, ಉಳಿದವರು ಆತನಿಗೆ ಸಹಕರಿಸಬೇಕು. ಇಲ್ಲವಾದಲ್ಲಿ ಉಳಿದವರು ಶಿಕ್ಷಾರ್ಹರಾಗುತ್ತಾರೆ. ಇದು ಆ ಜನಾಂಗದ ಅಲಿಖಿತ ಕಾನೂನು. ವಾರೀಸುದಾರನು ಮನೆತನದ ಸಾಂಪ್ರದಾಯಿಕ ಧಾರ್ಮಿಕಾಚರಣೆಗಳನ್ನು, ಚಿಂದು ಭಾಗವತವನ್ನು ಆರಂಭಿಸಲು ವಿಧ್ಯುಕ್ತವಾಗಿ ತೊಡಗುತ್ತಾನೆ. ಇದಕ್ಕೆ ಉಳಿದವರು ಧನ ಹಾಗೂ ಇನ್ನಿತರ ಸಹಾಯವನ್ನು ನೀಡುತ್ತಾರೆ.

ಜಾಂಬವಮುನಿಯ ಕಥಾನಕವು ಹೀಗಿದೆ : ತ್ರಿಪುರದಲ್ಲಿ ವಾಸಿಸುತ್ತಿದ್ದ ಡಂಕಾಸುರನು ಸದಾ ಕಾಲವೂ ದೇವತೆಗಳನ್ನು ಹಿಂಸಿಸುತ್ತಿರಲು ದೇವತೆಗಳ ಕೋರಿಕೆಯ ಮೇರೆಗೆ ಶಂಕರನು ಈ ರಕ್ಕಸನನ್ನು ವಧಿಸುತ್ತಾನೆ. ವಧಾ ಸಮಯದಲ್ಲಿ ರಕ್ಕಸನಿಂದ ಭೂಮಿಗೆ ತೊಟ್ಟಿಕ್ಕಿದ ರಕ್ತಬಿಂದುಗಳಿಂದ ಪುನಃ ಪುನಃ ರಾಕ್ಷಸರು ಹುಟ್ಟುತ್ತಲೇ ಇರುತ್ತಾರೆ. ಜಗತ್ಕಂಟಕರಾದ ಈ ರಕ್ಕಸರನ್ನು ವಧಿಸಲು ದೇವಿ ಆದಿಪರಾಶಕ್ತಿಯು ತನ್ನ ನಾಲಗೆಯನ್ನೇ ಭೂಮಿಯಲ್ಲಿ ಚಾಚಿ ಭೂಮಿಗೆ ರಕ್ತಬಿಂದುಗಳು ಬೀಳದಂತೆ ತಡೆಗಟ್ಟಿ ರಕ್ಕಸರು ಹುಟ್ಟದಂತೆ ಮಾಡಿದರೂ ಈ ಅಸುರರ ರಕ್ತವನ್ನು ಆಕೆ ಕುಡಿದದ್ದರಿಂದ ಆಕೆಯೇ ಅತ್ಯಂತವಾಗಿ ಕ್ರೋಧದಿಂದ ದೇವತೆಗಳನ್ನು ಕೊಲ್ಲಲು ಅವರ ಬೆನ್ನಟ್ಟುತ್ತಾಳೆ. ದೇವತೆಗಳು ಜಾಂಬವಮುನಿಯನ್ನು ಆಶ್ರಯಿಸಿ ಕಾಪಾಡಬೇಕೆಂದು ಕೋರುತ್ತಾರೆ. ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ ಜಾಂಬವಮುನಿಯು ತಾನು ಗೋಸಂಗಿಯ ವೇಷವನ್ನು ಧರಿಸಿ ಆದಿಪರಾಶಕ್ತಿಯು ಕೋಪವನ್ನು ತಣಿಸಲು ಯತ್ನಿಸುತ್ತಾನೆ. ದೇವತೆಗಳು ಆತನಿಗೆ ಮೂವತ್ತೆರಡು ಬಗೆಯ ವೇಷ ಭೂಷಣಗಳನ್ನಿತ್ತು ಗೋಸಂಗಿಯ ವೇಷವನ್ನು ಧರಿಸಲು ಸಹಕರಿಸುತ್ತಾರೆ. ಇವುಗಳನ್ನು ಚಿಂದು ಮಾದಿಗರು ತಮ್ಮ ಜನಾಂಗಕ್ಕೆ ಪರಂಪರಾನುಗತವಾಗಿ ದೊರೆತ ಬಿರುದುಗಳೆಂದು ನಂಬುತ್ತಾರೆ. ವಿಷ್ಣುವು ತನ್ನ ಚಕ್ರದಿಂದ ಸೃಜಿಸಿದ ಡಪ್ಪು ಎಂಬ ಅವನದ್ದ ಲಯವಾದ್ಯವನ್ನು ನೀಡುತ್ತಾನೆ. ಶಂಕರನು ತನ್ನ ವಸ್ತ್ರವಾಗಿದ್ದ ವ್ಯಾಘ್ರಚರ್ಮವನ್ನು ನೀಡುತ್ತಾನೆ. ಗಣಪತಿಯು ಬೊಡ್ಡುಗಂಟೆಯನ್ನು (ದೇಹದ ದೊಡ್ಡ ಗಂಟೆ) ಯನ್ನು ನೀಡುತ್ತಾನೆ. ವೀರಭದ್ರನು ಸಣ್ಣ ಗೆಜ್ಜೆಗಳಿಂದ ಅಲಂಕರಿಸಿದ ಚಲ್ಲಣವನ್ನೂ, ವೀರಗೋಲನ್ನೂ (ಚಾಟಿ) ನೀಡುತ್ತಾನೆ. ಲಕ್ಷ್ಮಿಯು ಕಮಲಪುಷ್ಪವನ್ನು ನೀಡುತ್ತಾಳೆ. ಇದರಂತೆಯೆ ಅನೇಕ ದೇವತೆಗಳು ತಮ್ಮ ತಮ್ಮ ಮುಖ್ಯ ವಸ್ತುಗಳನ್ನು ಗೋಸಂಗಿ ವೇಷದ ಜಾಂಬವಮುನಿಗೆ ನೀಡುತ್ತಾರೆ. ಗೋಸಂಗಿಯಾದ ಜಾಂಬವಮುನಿಯು ತನ್ನ ಇಬ್ಬರು ಪತ್ನಿಯರು, ಮಕ್ಕಳು ಹಾಗೂ ಗುರುವಾದ ರೌದ್ರ ಮಹಾಮುನಿಗಳೊಂದಿಗೆ ಗೆಜ್ಜೆಧ್ವನಿಯನ್ನು ಮಾಡುತ್ತಾ ಮಾಡುತ್ತಾ ಮೆರವಣಿಗೆಯಲ್ಲಿ ಪರಬ್ರಹ್ಮನ ಬಳಿಗೆ ಹೋಗುತ್ತಾನೆ. ದೇವತೆಗಳು ಆತನನ್ನು ಹಿಂಬಾಲಿಸುತ್ತಾರೆ. ಪರಬ್ರಹ್ಮನ ಆಸ್ಥಾನದಲ್ಲಿ ಅವನದ್ದ ಹಾಗೂ ತತವಾದ್ಯಗಳ ಸಂಗೀತಮೇಳದೊಂದಿಗೆ ಗೋಸಂಗಿಯು ಶಕ್ತಿಶಾಲಿಯಾಗಿ ರೋಮಾಂಚಕಾರಿಯಾಗಿ 32 ಬಗೆಯ ವೈವಿಧ್ಯಮಯ ಹೆಜ್ಜೆಗಳಿಂದ, ಎಂದರೆ ಚಿಂದುಗಳಿಂದ ನರ್ತಿಸುತ್ತಾರೆ. ಹೀಗೆಯೇ ಒಂಬತ್ತು ದಿನಗಳ ಕಾಲ ನರ್ತನದೊಂದಿಗೆ ದೇವಿಗೆ ಎಮ್ಮೆ, ಕೋಣ, ಆಡು ಇತ್ಯಾದಿಗಳನ್ನು ಬಲಿ ನೀಡುವುದರೊಂದಿಗೆ ತೆಂಗಿನಕಾಯಿ, ಪರಿಮಳ ದ್ರವ್ಯಗಳ ಊದುಬತ್ತಿ, ಬೆಲ್ಲ, ಹಣ್ಣುಹಂಪಲು, ಪುಷ್ಪಗಳನ್ನೂ ಸಮರ್ಪಿಸುತ್ತಾರೆ. ಆ ನಂತರದಲ್ಲಿ ಆದಿಶಕ್ತಿಯು ಪ್ರಸನ್ನಳಾಗಿ ತನ್ನ ರೌದ್ರತೆಯನ್ನು ತ್ಯಜಿಸಿ ಶಾಂತಳಾಗಿ ಜಾಂಬವಮುನಿಗೆ ಕಿರೀಟದಂತಹ ತಲೆಯ ಆಭರಣವನ್ನೂ ಆ ಕಿರೀಟಕ್ಕೆ ಹಾಕುವಂತಹ ಗರಿಯಂತಹ ಇನ್ನೊಂದು ವಸ್ತುವನ್ನೂ ವರಗಳಾಗಿ ನೀಡುತ್ತಾಳೆ. ಹೀಗೆ 32 ವಸ್ತುಗಳನ್ನು ದೇವತಾದಿಗಳಿಂದ ಗಳಿಸಿದ ಜಾಂಬವಮುನಿಯು ಹಿಂತಿರುಗಿ

copyright reserved

ಬರುತ್ತಾನೆ. ಹೀಗೆ ಜಾಂಬಪುರಾಣವು ದೇವಿಯ ರೌದ್ರತೆಯನ್ನು ಶಮನ ಮಾಡಿದ ಕಥಾನಕವನ್ನು ಹೊಂದಿದೆ. ಹೀಗೆ ಜಾಂಬಪುರಾಣವು ಮಾದಿಗರಿಗೆ ಗೋಸಂಗಿ ಪಾತ್ರಕ್ಕೆ ವೇಷವನ್ನು ಧರಿಸಲು ವೇಷಭೂಷಗಳೂ ಅಲಂಕಾರಗಳೂ ಆಯುಧಗಳೂ ದೊರೆತ ಪರಿಯನ್ನು ವರ್ಣಿಸಿದರೂ ಚಿಂದು ಮಾದಿಗರಿಗೆ ಚಿಂದು ಜಿಹ್ವಮಹಾಮುನಿಗಳ ಪುತ್ರರಾದ ಚಿಂದುಮಾದಿಗರಿಗೆ ಹೇಗೆ ಇವೆಲ್ಲವೂ ದೊರೆಯಿತೆಂದು ಜಾಂಬಪುರಾಣವು ವರ್ಣಿಸುವುದಿಲ್ಲ.

ಇನ್ನೂ ಒಂದು ಕಥಾನಕವಿದೆ. ಅದು ಚಿಂದು ಕಲಾಕಾರರಿಗೆ ಈ ಕಲೆಯು ಬಂದ ಬಗೆ ಹಾಗೂ ಕಲಾಕಾರರಾಗುವ ಹಕ್ಕನ್ನು ಕುರಿತು ಹೇಳುತ್ತದೆ. ಈ ಕಥಾನಕವು ಜಮದಗ್ನಿ ಋಷಿ ಹಾಗೂ ಆತನ ಪತ್ನಿ ರೇಣುಕಾ ದೇವಿಯನ್ನು ಕುರಿತದ್ದಾಗಿದೆ. ಇದರಲ್ಲಿ ಬ್ರಾಹ್ಮಣ ಋಷಿಯಾದ ಜಮದಗ್ನಿಯು ತನ್ನ ಪತ್ನಿಯ ಶೀಲವನ್ನು ಶಂಕಿಸಿ, ಆಕೆಯನ್ನು ಕ್ಷಮಿಸದೆ ತನ್ನ ಪುತ್ರನಾದ ಪರಶುರಾಮನಿಗೆ ರೇಣುಕೆಯ ಶಿರವನ್ನು ಕತ್ತರಿಸಲು ಆಜ್ಞೆ ಮಾಡುತ್ತಾನೆ. ರೇಣುಕೆಯು ಜಾಂಬವಮುನಿಯ ಕಳ್ಳನ್ನು ತುಂಬಿಸಿಡುವ ಚರ್ಮದ ಚೀಲಗಳಲ್ಲಿ ಅಡಗಲು ಬಹುವಾಗಿ ಯತ್ನಿಸಿದರೂ ಬಿಡದೆ ಪರಶುರಾಮನು ಪತ್ತೆ ಹಚ್ಚಿ ತನ್ನ ತಾಯಿಯನ್ನು ಬಿಡದೆ ಕೊಲ್ಲುತ್ತಾನೆ. ತನ್ನ ಮಗನಿಂದ ರಕ್ಷಿಸಲಾಗದ ಮಾನವರ ಮೇಲೆ ಅತ್ಯಂತವಾಗಿ ಕ್ರೋಧಗೊಂಡ ರೇಣುಕೆಯು ಎಲ್ಲಮ್ಮನ ರೂಪವನ್ನು ತಾಳಿ ಸಮಸ್ತ ಜನರನ್ನು ಕೊಂದು ರಕ್ತವನ್ನು ಹೀರಿ ನುಂಗಿಹಾಕಿಬಿಡಲು ಹೊರಡುತ್ತಾಳೆ. ಜಾಂಬವಮುನಿಯು ಉಪಾಯ ತೋಚದೆ ತನ್ನ ಗುರು ಹಾಗೂ ತನ್ನ ಪ್ರಥಮ ಪತ್ನಿಯಾದ ಜಗದ್ವೀರಮಾತಾಳ ಪುತ್ರರಾದ ಚಪಲ ಮಹಾಮುನಿ ಮತ್ತು ರೌದ್ರ ಮಹಾಮುನಿಗಳಲ್ಲಿ ಎಲ್ಲಮ್ಮನ ಕೋಪವನ್ನು ಹೇಗಾದರೂ ಮಾಡಿ ತಣಿಸುವ ಉಪಾಯ

ಮಾಡಬೇಕೆಂದು ಅವರಲ್ಲಿ ಕೋರಿ ಎಲ್ಲಮ್ಮ ದೇವಿಯ ಕೋಪವನ್ನು ಶಮನಗೊಳಿಸಬೇಕೆಂದು ಯತ್ನಿಸುತ್ತಾನೆ. ಆದರೆ ಅವರು ತಮ್ಮ ಅಸಹಾಯಕತೆಯನ್ನು ಹೇಳಿದಾಗ ಜಾಂಬವಮುನಿಯು ತನ್ನ ಪುತ್ರನಾದ ದಕ್ಕಲಿವಾಡು (ದಕ್ಕಲಿಯವನು) ವನ್ನು ಕೋರುತ್ತಾನೆ. ಈ ದಕ್ಕಲಿವಾಡುವು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ವಿವಾಹಕ್ಕಾಗಿ ಆಭರಣ ಹಾಗೂ ಚರ್ಮದ ವಸ್ತುಗಳನ್ನು ತಯಾರಿಸಲೆಂದೇ ಈಗಾಗಲೇ ತಂದೆಯಿಂದ ಸಮರ್ಪಣೆಯನ್ನು ಮಾಡಲ್ಪಟ್ಟವನು. ಈ ದಕ್ಕಲಿವಾಡುವೂ ತನ್ನ ಅಸಹಾಯಕತೆಯನ್ನು ಹೇಳಿದಾಗ ಕಡೆಗೆ ಜಾಂಬವಮುನಿಯು ತನ್ನ ದ್ವಿತೀಯ ಪತ್ನಿಯಾದ ಜಗದ್ವಿನುತಮಾತೆಯಲ್ಲಿ ಜನಿಸಿದ ಚಿಂದುಜೀವಮಹಾಮುನಿಯೆಂಬ ಪುತ್ರನನ್ನು ಕರೆದು ಎಲ್ಲಮ್ಮನನ್ನು ಶಾಂತಗೊಳಿಸಲು ಹೇಳುತ್ತಾನೆ. ಆಗ ಆ ಚಿಂದುಜೀವಮಹಾಮುನಿಯೆಂಬ ಪುತ್ರನು ಜಾಂಬವಮುನಿಗೆ 'ತಂದೆಯೇ ನೀನೀಗಾಗಲೇ ಒಮ್ಮೆ ಆದಿಶಕ್ತಿಯ ಕೋಪವನ್ನು ಯಶಸ್ವಿಯಾಗಿ ತಣಿಸಿದ್ದೀಯೆ. ನೀನೇ ಏಕೆ ಇನ್ನೊಮ್ಮೆ ಎಲ್ಲಮ್ಮನ ಕೋಪವನ್ನು ತಣಿಸಬಾರದು? ಎಂದು ಪ್ರಶ್ನಿಸುತ್ತಾನೆ. ಆಗ ಜಾಂಬವಮುನಿಯು ತನ್ನ ಮೊಣಕಾಲನ್ನು ಪರ್ವತವೊಂದು ಘಾಸಿಗೊಳಿಸಿ ನೋಯಿಸಿದ್ದರಿಂದ ತನಗೆ ನರ್ತಿಸಲು ಸಾಧ್ಯವಾಗದೆಂದೂ ತನ್ನ ಗೋಸಂಗಿ ಪಾತ್ರವನ್ನು ಚಿಂದು ಪುತ್ರನು ನಿರ್ವಹಿಸಿ ಎಲ್ಲಮ್ಮ ದೈವವನ್ನು ಸಮಾಧಾನಪಡಿಸಬೇಕೆಂದು ಹೇಳುತ್ತಾನೆ. ಚಿಂದು ಪುತ್ರನು ಒಪ್ಪಿದರೂ ತನ್ನ ತಂದೆಯಲ್ಲಿ ಆತನು ತಾನು ಗೋಸಂಗಿ ವೇಷವನ್ನು ಧರಿಸಲು, ದೇವತೆಗಳಿಂದ ಅನುಗ್ರಹವಾಗಿ ದೊರೆತ 32 ಬಗೆಯ ಬಿರುದುಗಳನ್ನು ತಂದೆಯು ತನಗೆ ನೀಡಿ ಗೋಸಂಗಿ ವೇಷಕ್ಕೆ ಸಹಕರಿಸಬೇಕೆಂಬ ಶರತ್ತನ್ನು ಹಾಕಿ ತನ್ನ ತಂದೆಯಿಂದ ಎಲ್ಲ 32 ಬಗೆಯ ದೇವತಾಪ್ರಶಸ್ತಿಗಳನ್ನೂ ಗಳಿಸುತ್ತಾನೆ. ಈಗ ಜಾಂಬವಮುನಿಯ ಚಿಂದು ಪುತ್ರನು ಈ ಬಿರುದುಗಳಿಂದ ತಂದೆಯಂತೆಯೇ ಅಲಂಕೃತನಾಗಿ ಜೀವಮಹಾಮುನಿಯೆಂಬ ಅಭಿದಾನವನ್ನು ಪಡೆದವನಾಗಿ ರೇಣುಕಾ ಎಲ್ಲಮ್ಮ ದೇವಿಯನ್ನು ಶಾಂತಗೊಳಿಸಲೆಂದು ತತ, ಅವನದ್ಧ ಇತ್ಯಾದಿ ಅನೇಕ ವಾದ್ಯಗಳು ಹಾಗೂ ವಾದನಕಾರರ ಸಮೇತ ಮೆರವಣಿಗೆಯಲ್ಲಿ ಹೊರಡುತ್ತಾನೆ. 32 ಬಗ್ಗೆಯ ನೃತ್ತಹೆಜ್ಜೆಗಳನ್ನು ನರ್ತಿಸಿ ದೇವಿಯನ್ನು ಶಾಂತಗೊಳಿಸುತ್ತಾನೆ. ಎಲ್ಲಮ್ಮ ದೇವಿಯು ಜೀವಮಹಾಮುನಿಯನ್ನೂ ಆತನ ಪತ್ನಿ ದೇವಲ ಸಾನಿಯನ್ನೂ ಹರಸಿ ಅವರಿಬ್ಬರಿಗೂ ಗೋಸಂಗಿ ಹಾಗೂ ಎಲ್ಲಮ್ಮ ವೇಷವನ್ನು ಧರಿಸಿ ಈ ಪುರಾಣವನ್ನು ಪರಂಪರಾಗತವಾಗಿ ಮಾದಿಗ ಜನಾಂಗಕ್ಕೆ ಕಥಾನಕದ ಮೂಲಕ ರಂಗದಲ್ಲಿ ಅಭಿನಯಿಸಿ ತೋರುವ ಹಾಗೂ ಇದಕ್ಕೆ ಅಗತ್ಯವಾದ ಧನ, ವಸ್ತು ಇತ್ಯಾದಿ ರೂಪಗಳ ಸಹಾಯವನ್ನು ತನ್ನ ಪಂಗಡದವರಿಂದ ಪಡೆಯುವ ಹಕ್ಕನ್ನು ದಯಪಾಲಿಸುತ್ತಾಳೆ. ಜಾಂಬವಮುನಿಯ ಮೊದಲ ಪತ್ನಿಯ ಪುತ್ರರ ವಂಶಸ್ಥರು ಮಾದಿಗರೆಂದೂ ಎರಡನೆಯ ಪತ್ನಿಯ ಪುತ್ರನ ವಂಶಸ್ಥರು ಚಿಂದುಮಾದಿಗರೆಂದೂ ಕರೆಯಲ್ಪಟ್ಟರು. ಈಗಲೂ ಈ ಎರಡು ಪಂಗಡಗಳು ಹಿರಿಯ - ಕಿರಿಯ ಸಹೋದರ ಭಾವದಲ್ಲಿಯೇ ಜೀವಿಸುತ್ತಿದ್ದಾರೆ. ಚಿಂದು ಮಾದಿಗರು ಅಭಿನಯಿಸುವ ಕಲೆಗಾಗಿ ಮಾದಿಗ ಜನಾಂಗವು ಆರ್ಥಿಕ ಹಾಗೂ ಇನ್ನಿತರ ರೂಪಗಳಲ್ಲಿ ಪೋಷಕರಾಗಿದ್ದುಕೊಂಡು ಸಹಾಯ ಮಾಡಲೇಬೇಕಾದ ಜವಾಬ್ದಾರಿ ಅವರಿಗಿದೆ. ಚಿಂದು ಮಾದಿಗರಿಗೆ ಚರ್ಮಗಾರಿಕೆಯನ್ನು ಮಾಡಲು ಹಕ್ಕಿಲ್ಲ. ಅದು ಮಾದಿಗರಿಗೆ ಮಾತ್ರ ಇರುವಂತಹ ಹಕ್ಕು. ಅದೇ ರೀತಿ ಮಾದಿಗರಿಗೆ ರಂಗಕಲೆಯಾಗಿ ಗೋಸಂಗಿ ಹಾಗೂ ಎಲ್ಲಮ್ಮ ವೇಷವನ್ನು ಮಾಡುವ ಹಕ್ಕಿಲ್ಲ. ಈ ಜನಾಂಗವು ಹಣ, ಧಾನ್ಯ ಇತ್ಯಾದಿ ರೂಪಗಳಲ್ಲಿ ಪೋಷಕತ್ವವನ್ನು ಕಡ್ಡಾಯವಾಗಿ ಮಾಡಲೇ ಬೇಕು. ಈ ಎರಡು ಪಂಗಡಗಳಿಗೂ ತಮ್ಮ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದಿದ್ದರೆ ಎಲ್ಲಮ್ಮನ ಕೋಪ ತಾಪ ಶಾಪಗಳನ್ನು ಎದುರಿಸಬೇಕಾದೀತೆಂಬ ಭಯವೇ ಇದೆ.

ಅಂದಿನಿಂದ ಇಂದಿನವರೆಗೆ ಚಿಂದು ಮಾದಿಗರು ಮಾದಿಗ ಸಮುದಾಯಕ್ಕೆ ತಮ್ಮ ಪರಂಪರೆಯ ಪುರಾಣವನ್ನು ಪ್ರಚುರಪಡಿಸುವ ಭಾಗವತರಾಗಿ ಜೀವನವನ್ನು ನಡೆಸುತ್ತಿದ್ದಾರೆ. ಹೆಚ್ಚಿನ ಕಲಾವಿದರು ಬಡವರೇ ಆದ್ದರಿಂದಲೂ, ಬಡವರಿಗೆಂದೇ ಪ್ರದರ್ಶನವೂ ಆಗುವುದರಿಂದಲೂ ರಂಗಸಜ್ಜಿಕೆ, ವೇಷ ಇತ್ಯಾದಿಗಳು ಹೆಚ್ಚು ಖರ್ಚಿನದ್ದಾಗಲು ಸಾಧ್ಯವಿಲ್ಲ. ಆದರೂ ಪ್ರತಿಭೆಯಲ್ಲಿ ಈ ಕಲಾಪ್ರದರ್ಶನವು ಯಾವುದೇ ಪ್ರಮುಖ ನಾಟಕರಂಗಭೂಮಿಗಿಂತಲೂ ಕಡಿಮೆಯಿರುವುದಿಲ್ಲ. ಚಿಂದು ಜನಾಂಗದ ಸ್ತ್ರೀ ಪುರುಷರಾದಿಯಾಗಿ ಅಭಿನಯಿಸುವ ಎಲ್ಲ ನಾಟಕಗಳಂತೆಯೆ ಮುಖ್ಯವಾಗಿ ಜಾಂಬಪುರಾಣದ

Copyright Reserved

ರಂಗಪ್ರಯೋಗದ ಕಡೆಯಲ್ಲಿ ವೇಷವಾಗಿ ಯಲ್ಲಮ್ಮ ದೇವತೆಯ ವೇಷವು ಬಂದೇ ಬರಬೇಕಾದದ್ದು ಸಂಪ್ರದಾಯ. ಸ್ತ್ರೀಪುರುಷರಿಬ್ಬರೂ ನಟಿಸಿದರೂ ಯಲ್ಲಮ್ಮ ವೇಷಧಾರಣೆಯನ್ನು ಸ್ತ್ರೀಯರೇ ಮಾಡಬೇಕಾದದ್ದೂ ಇಲ್ಲಿ ಸಂಪ್ರದಾಯವೇ. ಎಲ್ಲಮ್ಮ ವೇಷಕ್ಕೆ ಅವಶ್ಯವಿರುವ ಕಹಿಬೇವಿನ ಸೊಪ್ಪಿಗಾಗಿ ಅವರ ವಾಸಸ್ಥಳಗಳ ಆಸುಪಾಸಿನಲ್ಲಿ ಕಹಿಬೇವಿನ ಮರಗಳನ್ನು ಬೆಳೆಸಿರುತ್ತಾರೆ. ಈ ಮರವು ಎಲ್ಲರ ಆರೋಗ್ಯಕ್ಕೂ ಅತಿಮುಖ್ಯವೆಂದೂ, ಆಕ್ರಮಣ ಮಾಡುವ ಅತಿದುಷ್ಟಶಕ್ತಿಗಳಿಂದ ಈ ಮರವು ತಮ್ಮ ಮಕ್ಕಳನ್ನು ಕಾಪಾಡುತ್ತದೆಂದೂ, ತಮ್ಮ ಮನೆಗಳ, ಮನಗಳ ಕಾಯಿಲೆಗಳನೇಕದರಿಂದಲೂ ಹಾಗೂ ಇವುಗಳಿಂದ ಉಂಟಾಗುವ ಆತ್ಮಹತ್ಯೆಯೇ ಮೊದಲಾದ ಕೇಡುಗಳಿಂದಲೂ ಈ ಮರಗಳು ತಮ್ಮ ಜನಾಂಗವನ್ನು ರಕ್ಷಿಸುತ್ತದೆಂದು ಈಗಲೂ ಈ ಜನಾಂಗದವರಿಗೆ ನಂಬಿಕೆಯಿದೆ.

ಗೋಸಂಗಿಯ ಮುಖವರ್ಣಿಕೆ, ವಸ್ತ್ರ ಹಾಗೂ ಆಭರಣಾಲಂಕಾರಗಳು –

ಹಿಂದೆ ಗೋಸಂಗಿ ವೇಷಕ್ಕೆ ಅವಶ್ಯವಿರುವ ಎಲ್ಲ ಮುಖವರ್ಣಿಕೆಗಳೂ ದೇಶೀಯವಾದ, ಆಯಾ ಸ್ಥಾನಿಕವಾದ ವಸ್ತುಗಳಿಂದಲೇ ತಯಾರಿಸಲ್ಪಡುತ್ತಿತ್ತು. ಈ ಕಚ್ಚಾ ತಯಾರಿಕೆಯ, ದಟ್ಟವಾಗಿರುವ, ಮೂಲಸಪ್ತವರ್ಣಗಳಷ್ಟು ಮಾತ್ರ ಬಳಕೆಯಲ್ಲಿದ್ದವು. ವರ್ಣಗಳನ್ನು ಮಿಶ್ರಗೊಳಿಸಿ ಬೇರೆ ಬೇರೆ ವರ್ಣಾಂತರಗಳನ್ನು ತಯಾರಿಸಿ ಉಪಯೋಗಿಸುವ ಅವಶ್ಯಕತೆ ಇರಲಿಲ್ಲವೋ ಅಥವಾ ಪರಂಪರೆಯಲ್ಲಿಯೇ ರೂಢಿಯಾಗಲಿಲ್ಲವೋ ಹಗಲಿನಲ್ಲಿಯೇ ರಂಗಕಾರ್ಯಕ್ರಮವು ನಡೆಯುತ್ತಿದ್ದುದರಿಂದಲೋ ಅಥವಾ ಆಧುನಿಕವಾದ ರಂಗಸ್ಥಳಗಳಲ್ಲಿ ನಡೆಯುವಂತಲ್ಲದಿದ್ದರಿಂದಲೋ ತಿಳಿಯದು, ಆದರೆ ವರ್ಣಗಳನ್ನು ಮಿಶ್ರಗೊಳಿಸಿ ಬೇರೆ ಬೇರೆ ವರ್ಣಛಾಯೆಗಳನ್ನು ತಯಾರಿಸಿ ಉಪಯೋಗಿಸುವ ಪರಿಪಾಟವಂತೂ ಇವರಲ್ಲಿ ಇಲ್ಲ. ಈ ಅಭ್ಯಾಸವು ಸಾಮಾನ್ಯವಾಗಿ ಹೆಚ್ಚಿನ ಜನಪದ ಕಲೆಗಳಲ್ಲಿ ಅದರಲ್ಲಿಯೂ ಕೇರಳ, ದಕ್ಷಿಣೋತ್ತರ ಕರ್ನಾಟಕಗಳಲ್ಲಿ ರಾತ್ರಿಯೇ ನಡೆಯುವಂತಹದಾದರೂ ಭೂತಕೋಲ ನೃತ್ತದ ವೇಷಗಳು ಮುಂತಾದುವುಗಳಲ್ಲಿಯೂ ಕಂಡುಬರುತ್ತದೆ. ಸಾಧಾರಣವಾಗಿ ಮುಖವರ್ಣಿಕೆಗಳಲ್ಲಿ ಉಪಯುಕ್ತವಾಗುವ ವರ್ಣಗಳು ಚಿಂದುವಿನಲ್ಲಿ ಪಾತ್ರಗಳನ್ನು ಬಿಂಬಿಸುವ ಕಾರ್ಯವನ್ನು ಮಾಡುತ್ತವೆ. ಉದಾಹರಣೆಗೆ ಪುರಾಣಗಳಲ್ಲಿ ರಾಮ - ಕೃಷ್ಣರಂತಹ ವಿಷ್ಣು ಅವತಾರಗಳು ನೀಲಿವರ್ಣವನ್ನು ಬಿಂಬಿಸುವಂತೆ ಈ ಚಿಂದು ಭಾಗವತದಲ್ಲಿಯೂ ನೀಲಿವರ್ಣವು ದೇವತೆಗಳಿಗೆ ಮುಖವರ್ಣಿಕೆಯಾಗಿ ಉಪಯೋಗಿಸಲ್ಪಟ್ಟು ಪ್ರೇಕ್ಷಕರಿಗೆ ಪಾತ್ರ ಪರಿಚಯದ ಅರಿವಿಗೆ ಸಹಾಯವನ್ನು ಮಾಡುತ್ತದೆ.

ಗೋಸಂಗಿಯ ವಸ್ತ್ರಾಭರಣಗಳು –

ಗೋಸಂಗಿ ಪಾತ್ರಕ್ಕೆ ಮುಖವರ್ಣಿಕೆಯಂತೆಯೇ ವಸ್ತ್ರಾಭರಣಗಳೂ ಅತಿಮುಖ್ಯವಾದುದು. ಸಾಧಾರಣವಾಗಿ ದ. ಕ. ಜಿಲ್ಲೆಯ ಭೂತನೇಮಗಳಲ್ಲಿ ಕೆಲವು ದೈವಗಳು ಇತ್ಯಾದಿ ಜನಪದ ದೈವಾಚರಣೆಗಳ ವೇಷಗಳಂತೆ ಗೋಸಂಗಿಗೂ ಉದ್ದವಾದ ಮೀಸೆಯಿರುತ್ತದೆ. ಗೋಸಂಗಿ ವೇಷಕ್ಕಾಗಿ ಮೀಸೆಯನ್ನು ಕುರಿಯ ತುಪ್ಪಳದಿಂದ ತಯಾರಿಸಲಾಗಿರುತ್ತದೆ. ಅವರ ಪುರಾಣ ಕಥೆಯಲ್ಲಿ ಉಲ್ಲೇಖಿಸಲ್ಪಟ್ಟಂತೆ ಕಿರೀಟದಲ್ಲಿ ಲಕ್ಷ್ಮೀದೇವಿಯೂ, ಶಿವನ ಪ್ರಮಥ ಗಣಗಳು ದಯಪಾಲಿಸಿದ ಕಮಲದ ಹೂವೂ ಇರುತ್ತವೆ. ಆಭರಣಗಳಲ್ಲಿ ಇನ್ನೊಂದು ವಿಶೇಷ ಸಂಗತಿಯೆಂದರೆ ಅವುಗಳು ಕಪ್ಪೆಚಿಪ್ಪು, ಕವಡೆಗಳು ಮುಂತಾದವುಗಳಿಂದ ತಯಾರಿಸಲ್ಪಟ್ಟವು. ಪುರಾಣಕಥೆಯೊಂದರಂತೆ ಈ ಭೂಮಿಯು ಸೃಷ್ಟಿಯಾಗುವುದಕ್ಕಿಂತಲೂ ಪೂರ್ವದಲ್ಲಿಯೇ ಜಾಂಬವಮುನಿಯು ಜನಿಸಿದ್ದು ಕಪ್ಪೆಚಿಪ್ಪಿನಲ್ಲಿ. ಆದ್ದರಿಂದ ಈ ಕಪ್ಪೆಚಿಪ್ಪು ಕವಡೆಗಳ ಆಭರಣಗಳು ಮುನಿಯ ಸೃಷ್ಟಿಪೂರ್ವದ ಇರುವಿಕೆಯ ಸೂಚಕವಾಗಿದೆ. ಉಳಿದಂತೆ ಭೂಷಣಗಳಾಗಿ ಗಂಟೆಗಳು, ಬೇವಿನ ಸೊಪ್ಪು, ಬಾಗುಕತ್ತಿ ಮುಂತಾದವೂ ಸೇರಿವೆ. ರಂಗಪ್ರದರ್ಶನದಲ್ಲಿ ಕಥಾನಕದ ವಾಚಿಕ ಭಾಗದಲ್ಲಿ ಪುರಾಣದ ಕಥೆಯೊಂದಿಗೆ ವೇಷಭೂಷಗಳು ಗೋಸಂಗಿಗೆ ಪ್ರಾಪ್ತವಾದ ಬಗ್ಗೆ ಉಲ್ಲೇಖಿಸಲ್ಪಡಲಾಗುತ್ತದೆ.

Copyright Reserved

ರಂಗವೇಷಭೂಷಣದ ಸಿದ್ಧತೆ —

ಗೋಸಂಗಿ ವೇಷವನ್ನು ಧರಿಸುವವರಿಗೆ ವೇಷ ಧರಿಸುವ ಒಂದೆರಡು ದಿನಗಳ ಹಿಂದಿನಿಂದಲೇ ಆಹಾರ ವಿಹಾರಗಳಲ್ಲಿ, ಬ್ರಹ್ಮಚರ್ಯ ಪಾಲನೆ ಇತ್ಯಾದಿಯಾಗಿ ಕೆಲವು ಸಾಂಪ್ರದಾಯಿಕ ಹಾಗೂ ಧಾರ್ಮಿಕ ಕಟ್ಟುಕಟ್ಟಲೆಗಳನ್ನು ವಿಧಿಸಿದೆ. ಆತನು ತನ್ನ ಬೆಳಗಿನ ಶೌಚಾದಿಗಳನ್ನು ಮುಗಿಸಿ ಸ್ನಾನವನ್ನು ಪೂರೈಸಿ, ಎಲ್ಲಮ್ಮ ದೇವತೆಯ ಪೂಜೆಗೈದು ವೇಷ ಧರಿಸಲು ಅವಶ್ಯವಿರುವ ಧಾರ್ಮಿಕ ಪ್ರಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತಾನೆ. ಈ ಧಾರ್ಮಿಕ ಕ್ರಿಯೆಗಳಲ್ಲಿ ವೇಷಭೂಷಗಳನ್ನು ಒಳಗೊಂಡ ಎಲ್ಲಮ್ಮ ಪೆಟ್ಟಿ (ಪೆಟ್ಟಿಗೆ) ಯನ್ನು ಗುಡಿಗೆ ತೆಗೆದುಕೊಂಡು ಹೋಗಿ ಎಲ್ಲಮ್ಮ ದೇವತೆಯ ವಿಗ್ರಹದ ಎದುರಿನಲ್ಲಿಟ್ಟು ತೆಂಗಿನಕಾಯಿ ಒಡೆದು, ಒಂದು ಬಾಟಲಿ ಸೇಂದಿಯನ್ನೂ ಸಮರ್ಪಿಸುತ್ತಾನೆ. ಆತ ಪ್ರಸಾದ ರೂಪವಾಗಿ ಹಣೆಗೆ ಕುಂಕುಮವನ್ನು ಪೂಸಿಕೊಂಡ ನಂತರ ಚಿಂದು ಮಾದಿಗರು ಎಲ್ಲಮ್ಮ ದೇವತೆಗೆ ಸಮರ್ಪಿಸಿದ ಸೇಂದಿಯನ್ನು ಆತನಿಗೆ ಕುಡಿಯಲು ನೀಡುತ್ತಾರೆ. ಇಷ್ಟು ಧಾರ್ಮಿಕ ವಿಧಿಗಳ ನಂತರ ಆತನ ವೇಷಧಾರಣೆಯು ಆರಂಭವಾಗುತ್ತದೆ. ಮುಖವರ್ಣಿಕೆಯಾದ ಅನಂತರ ವಸ್ತ್ರಧಾರಣೆ. ವಸ್ತ್ರವು ಮೇಲೆ ಹಾಗೂ ಕೆಳ ಉಡುಪುಗಳಾಗಿ ವಿಭಾಗಗೊಂಡಿದ್ದು ಮೇಲಂಗಿಯು ನಡುಮೈವರೆಗೂ ಮುಚ್ಚಿದ್ದು ಕೆಳಚಲ್ಲಣವು ಪಾದದವರೆಗೂ ಇರುತ್ತದೆ. ಧರಿಸುವ ಒಳಚಲ್ಲಣವು ಸಾಮಾನ್ಯವಾಗಿ ಚಿತ್ರವಿನ್ಯಾಸಗಳನ್ನು ಉಳ್ಳ ಕೆಂಪು ವರ್ಣದ್ದಾಗಿರುತ್ತದೆ. ಕೆಳಚಲ್ಲಣದ ತುದಿಯ ಭಾಗವು ಗೆಜ್ಜೆಗಳಿಂದ ಅಲಂಕರಿಸಲ್ಪಟ್ಟಿದ್ದು ಈ ಉಡುಪನ್ನು 'ಗೆಜ್ಜೆಲಲಗು' ಎಂದು ಕರೆಯುತ್ತಾರೆ. ಗೆಜ್ಜೆಯ ಅಲಂಕಾರವುಳ್ಳ ಒಳಚಲ್ಲಣವು ವೀರಭದ್ರನಿಂದ ಗೋಸಂಗಿ ವೇಷಕ್ಕಾಗಿ ಜಾಂಬವಮುನಿಗೆ ಉಡುಗೊರೆಯಾಗಿ ಸಂದದ್ದು ಎಂದು ಅವರ ಕಥಾನಕವು ಹೇಳುತ್ತದೆ. ವೀರಭದ್ರನು ನೀಡಿದ ಗೆಜ್ಜೆಲಲಗುವು ಆತನು ದಕ್ಷಯಜ್ಞಕಾಲದಲ್ಲಿ ಕುಣಿದಾಗ ದೊರೆತದ್ದೆಂದು ಕಥಾನಕವು ಹೇಳುತ್ತದೆ. ಈ ಗೆಜ್ಜೆಲಲಗು ಗೋಸಂಗಿ ಪಾತ್ರದ ಶಕ್ತಿಯುತ (ತಾಂಡವ) ಕುಣಿತಕ್ಕೆ ಒಳ್ಳೆಯ ಲಯದ ಸೊಗಸನ್ನು ಒದಗಿಸುತ್ತದಾದ್ದರಿಂದ ಆ ಜನಾಂಗಕ್ಕೆ ಪುರಾತನದಲ್ಲಿ ಈ ನೃತ್ತವು ಎಲ್ಲಮ್ಮ ದೇವಿಯ ಕೋಪವನ್ನು ಶಮನಗೊಳಿಸಲು ಸಾಧ್ಯವಾಯಿತೆಂಬ ನಂಬುಗೆಯಿದೆ. ಒಳಚಲ್ಲಣದ ಮೇಲೆ ಏಳು ಮತ್ತು ಹನ್ನೆರಡು ಅಡಿಗಳ ಸೀರೆಗಳನ್ನು ಅಡ್ಡಡ್ಡಲಾಗಿ ಸುತ್ತಿರಲಾಗಿದ್ದು ಇದೇ ಹೊರ ಚಲ್ಲಣದಂತಹ ಉಡುಪಿನಂತೆ ಉಪಯುಕ್ತವಾಗುತ್ತದೆ. ಇದಕ್ಕೆ ಕಶೆಯೆಂದು (ಕಚ್ಚೆ) ಹೆಸರು. ಈ ವಸ್ತ್ರದ ಮೇಲೆ ಗೋಸಂಗಿ ವೇಷದವರು ಚರ್ಮ, ಕಪ್ಪೆಚಿಪ್ಪು, ಕವಡೆ, ಲೋಹದ ಮಣಿಗಳು, ನೂಲಿನಿಂದ ನೇಯ್ದ ಹಾರಗಳು ಮುಂತಾದ ಆಭರಣಗಳನ್ನು ಧರಿಸುತ್ತಾರೆ. ಇವುಗಳೊಂದಿಗೆ ಹೊರನೋಟಕ್ಕೆ ಈ ಧಾರ್ಮಿಕ ಕಲೆಯನ್ನು ಅರಿಯದವರಿಗೆ ಆಭರಣದಂತೆಯೇ ಕಾಣುವ, ಪಾರಂಪರಿಕವಾಗಿ ಬಂದ ದರ್ಶನವೆಂಬ ಆಹಾರ್ಯವೂ ಇದೆ. ಇವು ಒಟ್ಟು ಏಳಿದ್ದು ಮೊದಲನೆಯ 'ರೊಮ್ಮು' ಅಥವಾ 'ಸಂಕು ದರ್ಶನ'ವೆನ್ನುವುದು ಗೋಸಂಗಿಯ ಎದೆ ಮತ್ತು ಬೆನ್ನುಗಳನ್ನು ಮುಚ್ಚಿದರೆ, ಎರಡನೆಯ 'ಕಂಠದರ್ಶನ'ವೆಂಬುದು ಕುತ್ತಿಗೆಗೆ ಕಟ್ಟಲ್ಪಟ್ಟಿರುತ್ತದೆ. ಮೂರು ಮತ್ತು ನಾಲ್ಕನೆಯವು ಬಲ ಹಾಗೂ ಎಡ ತೋಳುಗಳಿಗೆ ಕಟ್ಟಲ್ಪಟ್ಟಿದ್ದು ಇವುಗಳನ್ನು ವೇಷದವರು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಏಳನೆಯದು ಶಿರೋದರ್ಶನ, ಇದನ್ನು ಈ ಮೊದಲೇ ಕಟ್ಟಲ್ಪಟ್ಟ ತಲೆಗೊದಲ ಗಂಟಿಗೆ(ಕೊಪ್ಪು) ಕಟ್ಟಿರುತ್ತಾರೆ. ರೊಮ್ಮುದರ್ಶನವೊಂದನ್ನು ಹೊರತುಪಡಿಸಿ ಉಳಿದವು 'ದಸ್ತಾವೇಜುಗಳು' ಎಂದು ಕರೆಯಲ್ಪಡುವುದು ಆಶ್ಚರ್ಯ ಸಂಗತಿ. ದಸ್ತಾವೇಜಗಳೆಂದರೆ ದಾಖಲೆಗಳ ಕಡತವೆಂದು ಅರ್ಥವಲ್ಲವೇ? ಈ ದಸ್ತಾವೇಜುಗಳು ಸೃಷ್ಟಿಕಾರಕಳಾದ ಆದಿಶಕ್ತಿಯನ್ನು ಕುರಿತು ಹೇಳುವಂತಹವಾಗಿ ಆದಿಶಕ್ತಿಯು ಈ ಜನಾಂಗಕ್ಕೆ ನೀಡಿದ ಕಲೆಯ ದಸ್ತಾವೇಜುಗಳೇ ಆಗಿವೆ. ಗೋಸಂಗಿ ವೇಷವನ್ನು ಧರಿಸಲು ಮೂರ್ನಾಲ್ಕು ಗಂಟೆಗಳ ಕಾಲವಾದರೂ ಬೇಕು.

ಮಾದಿಗರಲ್ಲಿಯೇ ಬೇರೆ ಉಪಜನಾಂಗಗಳಾದ ಚಿಂದು, ದಕ್ಕಲೀ, ಮಾಳ, ನೂಕುಲಚಂದಯ್ಯ, ಮಷ್ಟೀದ ಮುಂತಾದವರೂ ಅವರವರ ಪರಂಪರೆಯಂತೆ ಇದೇ ಪುರಾಣವನ್ನು ಸ್ವಲ್ಪ ಸ್ವಲ್ಪವಾಗಿ ಬೇರೆ ಬೇರೆ ಕಥಾನಕಗಳಲ್ಲಿಯೂ ಆಹಾರ್ಯಗಳಲ್ಲಿಯೂ, ಹೆಸರುಗಳಲ್ಲೂ ವ್ಯತ್ಯಾಸಗಳಲ್ಲಿ ಜಾಂಬಪುರಾಣದ ಚಿಂದುಭಾಗವತವನ್ನು ನಡೆಸುತ್ತಾರೆ. ಉದಾಹರಣೆಗೆ ಉಪ್ಪಳದ ಚಿಂದುಗಳ ಕಥಾನಕವು ಅಲೇರ್ ನ ಚಿಂದುಗಳ ಅಥವಾ ವಂಗಪಾಡುವಿನ ಚಿಂದುವಿಗಿಂತ ಸ್ವಲ್ಪ

Copyright Reserved

ವ್ಯತ್ಯಾಸವಿರುತ್ತವೆ. ಚಿಂದು ಜಾಂಬಪುರಾಣದ ಕಥೆಗಳು ಸಂಸ್ಕೃತ, ತೆಲುಗು, ಪ್ರಾಂತೀಯ ಉರ್ದು ಇತ್ಯಾದಿ ಭಾಷೆಗಳಲ್ಲಿದ್ದು, ಕಥಾವಸ್ತುವಿನಲ್ಲಿ ಕಾಮಾಚಾರಗಳು ಹಾಗೂ ಅದರ ನಿಷೇಧಗಳು, ಯಜ್ಞ ಯಾಗಾದಿ ಕರ್ಮಗಳು, ದಂತಕಥೆಗಳು, ಆ ಜನಾಂಗಗಳ ಹೆಸರು, ಹುಟ್ಟು, ಅವುಗಳ ಜಾತಿ ಇತ್ಯಾದಿಗಳನ್ನು ಕುರಿತಾದ ತಾಂತ್ರಿಕ - ತಾರ್ಕಿಕಚರ್ಚೆಗಳು, ಮೂಲಕಥೆ ಇತ್ಯಾದಿಗಳನ್ನು ಒಳಗೊಂಡಿದ್ದು ಮಾತುಗಳು ದೇವರ ಸ್ತುತಿ, ಪ್ರಾರ್ಥನೆ, ಪ್ರಶಂಸೆ, ಶಾಪ ಮತ್ತು ಅದರ ಪರಿಹಾರ, ಸಂಭಾಷಣೆಗಳು ಮುಂತಾದುವಾಗಿದ್ದು ಪದ್ಯರೂಪದಲ್ಲಿರುತ್ತವೆ, ದಾನ, ಭಿಕ್ಷೆ, ದಯೆ, ಕರುಣೆ, ಯಾಚನೆ, ಸಹನೆ, ಕ್ಷಮೆ, ಧರ್ಮಪಾಲನೆ, ಸಹಬಾಳ್ವೆ ಇತ್ಯಾದಿಗಳು ಎಷ್ಟು ಮುಖ್ಯವೆಂದು ಬೋಧಿಸುವ ಭಾರತೀಯ ಸಾಂಸ್ಕೃತಿಕ, ಸಾಂಪ್ರದಾಯಿಕ, ಪಾರಂಪರಿಕ ಮೌಲ್ಯಗಳನ್ನೇ ಎತ್ತಿಹಿಡಿಯುವ, ದರ್ಶನಗಳಾಗಿರುತ್ತವೆ.

#.. chindu bhagavata - Google Search
#.. Jaanapadam - Chindu Bhagavatam - YouTube
#.. Chindu yaksha gaanam - Kiraataarjuneeyam 1 - YouTube

ಚಿಂದು ಯಕ್ಷಗಾನ ಅಥವಾ ಚಿಂದು ಭಾಗವತ —

ತೆಲಂಗಾಣದೇಶದ ಉತ್ತರಭಾಗದ ಜಿಲ್ಲೆಗಳಲ್ಲಿ, ನಿಜಾಮಾಬಾದ್ ಜಿಲ್ಲೆಯ ಅರ್ಮೂರಿನಲ್ಲಿ ರಂಗಭೂಮಿ ಕಲೆಯಾದ ಚಿಂದು ಭಾಗವತ/ಚಿಂದು ಯಕ್ಷಗಾನವು ಇಂದಿಗೂ ರೂಢಿಯಲ್ಲಿದ್ದು, ಈ ಕಲೆಯನ್ನು ಅಭಿನಯಿಸುತ್ತಿರುವವರಲ್ಲಿ ಅನೇಕರು ಸುಪ್ರಸಿದ್ಧರಾಗಿದ್ದಾರೆ. ಈ ರಂಗಕಲೆಯನ್ನು ಸರ್ಕಾರವು ಹರಿಜನವೆಂದು ಗುರುತಿಸಲ್ಪಟ್ಟ ಜನಾಂಗದ, ನುರಿತ ಕಲಾವಿದರು ತಮ್ಮ ಜನಾಂಗಕ್ಕಾಗಿಯೇ ಅಭಿನಯಿಸುತ್ತಾರೆ. ಇದರಲ್ಲಿ ಮಹಿಳಾ ಕಲಾವಿದರದೂ ಮುಖ್ಯ ಭಾಗವಹಿಸುವಿಕೆಯಿದ್ದು, ಲಿಂಗದ ಕಟ್ಟುಪಾಡುಗಳಿಲ್ಲದೆ ಮಹಿಳೆಯರು ಪುರುಷರ ಹಾಗೂ ಪುರುಷರು ಮಹಿಳೆಯರ ಪಾತ್ರಗಳನ್ನೂ ನಿರ್ವಹಿಸುತ್ತಾರೆ. ಅಂತ್ಯದಲ್ಲಿ ಮಹಿಳೆಯರೇ ಧರಿಸುವಂತಹ ಯಲ್ಲಮ್ಮ ದೇವತೆಯ ಪಾತ್ರವು ಬಂದ ನಂತರ ಯಲ್ಲಮ್ಮ ದೇವಿಯನ್ನು ಸ್ತುತಿಸುವ ಮಂಗಲದ ಹಾಡಿನಲ್ಲಿ ಚಿಂದು ಭಾಗವತವು ಕೊನೆಗೊಳ್ಳುವುದರೊಂದಿಗೆ ಯಲ್ಲಮ್ಮ ದೇವತೆಯ ಪಾತ್ರ ವಹಿಸಿದವರು ಉಳಿದ ಕಲಾವಿದರನ್ನೂ, ಪ್ರೇಕ್ಷಕರನ್ನೂ ಆಶೀರ್ವಾದಿಸುತ್ತಾರೆ. ಮಾಮೂಲಿನಂತೆ ತಮ್ಮ ಜನಾಂಗದ ಉಗಮದ ಮೂಲ ಕಥೆಯೊಂದಿಗೆ ರಾಮಾಯಣ, ಮಹಾಭಾರತ, ಭಾಗವತ ಕಥೆಗಳ ಅನೇಕ ಪ್ರಸಂಗಗಳನ್ನು ಚಿಂದು ಭಾಗವತವು ಹೊಂದಿರುವುದಲ್ಲದೆ, ಸ್ಥಳೀಯ ಪುಣ್ಯಪುರುಷರ, ರಾಜರುಗಳ, ಧೀರರ ಕಥೆಗಳನ್ನೂ ಹೊಂದಿವೆ. ಇವುಗಳೊಂದಿಗೆ ಸತಿ ಸಾವಿತ್ರಿ, ಭಕ್ತ ಪ್ರಹ್ಲಾದ, ಸತ್ಯ ಹರಿಶ್ಚಂದ್ರ, ಅಲ್ಲಿ ರಾಣಿ, ವೀರ ಅಭಿಮನ್ಯು, ಗಂಗೆ - ಗೌರಿ ಸಂವಾದ, ಬಾಲ ನಾಗಮ್ಮ ಮುಂತಾದ ಸುಮಾರು 30 ಕ್ಕೂ ಅಧಿಕ ಯಕ್ಷಗಾನವನ್ನು ಈ ಮೇಳದವರು ಅಭಿನಯಿಸುತ್ತಾರೆ. ಇದರಲ್ಲಿ ಚೆಂಚು ಲಕ್ಷ್ಮಿಯ ಕಥೆಯು ಹೆಚ್ಚು ಪ್ರಸಿದ್ಧಿಯನ್ನು ಪಡೆದಿರುವಂತಹದು.

ಹೆಚ್ಚಿನ ಎಲ್ಲ ಭಾರತೀಯ ಕಲೆಗಳಂತೆಯೇ ಈ ಕಲೆಯೂ ಧಾರ್ಮಿಕ ಆಚರಣೆಯ ಅಂಗವಾಗಿಯೇ ಬೆಳೆದು ಬಂದಿದೆ. ಚಿಂದು ಭಾಗವತ ಮೇಳದವರು ಅನಂತರದ ಕಾಲದಲ್ಲಿ ವೈಷ್ಣವ ಪಂಥದವರಿಂದ ಪ್ರಭಾವಿತರಾಗಿದ್ದರಿಂದ ಜಾಂಬಪುರಾಣದೊಂದಿಗೆ ಅನೇಕ ಕೃಷ್ಣ ಕಥೆಗಳನ್ನೂ ಅಭಿನಯಿಸುತ್ತಾರೆಂದು ಸಂಶೋಧಕರು ಊಹಿಸುತ್ತಾರೆ. ತಮ್ಮ ಪ್ರಾಚೀನ ಪರಂಪರೆಯನ್ನು ಚತೂತಪ್ಪದೆ ಈ ಜನಾಂಗವು ಉಳಿಸಿಕೊಂಡು ಬಂದಿರುವುದರಿಂದ ಆಧುನಿಕತೆ ಪ್ರಭಾವವು ಈ ರಂಗಕಲೆಯನ್ನು ಹೆಚ್ಚಾಗಿ ಆವರಿಸಿಕೊಂಡಿಲ್ಲವೆಂದು ಸಂಶೋಧಕರ ಅಭಿಪ್ರಾಯ.

ಚಿಂದು ಭಾಗವತದ ಕಲಾವಿದರು ನುರಿತವರಾಗಿದ್ದು ಅವರಿಗೆ ತಮ್ಮ ಆಹಾರ್ಯವಾಗಿ ಭುಜಕೀರ್ತಿ, ಕಿರೀಟ, ಕೊರಳಿಗೆ ಮಣಿಗಳ, ಥಳಥಳಿಸುವ ಹಾರಗಳು ಇತ್ಯಾದಿ ಆಭರಣಗಳನ್ನು

Copyright preserved

ತಯಾರಿಸಿಕೊಳ್ಳುವುದೂ, ಅತ್ಯಂತ ವೇಗವಾಗಿ ಮುಖವರ್ಣಿಕೆಯನ್ನು ಮಾಡಿಕೊಳ್ಳುವುದೂ, ಸುಲಭವಾಗಿ ವೇದಿಕೆಗಳನ್ನು ನಿರ್ಮಿಸಿಕೊಳ್ಳುವ ಕಲೆಗಳೂ, ಸುಲಭವಾಗಿ ಒಲಿದುಬಂದಿದೆ. ರಂಗಭೂಮಿಯಲ್ಲಿ ಸದಾ ಚಲನಶೀಲರಾಗಿದ್ದು ನರ್ತನ ಮಾಡುವ ಈ ಚಿಂದು ಯಕ್ಷಗಾನ ಕಲಾವಿದರು ಪ್ರೇಕ್ಷಕರನ್ನು ಬಹುವಾಗಿ ರಂಜಿಸುತ್ತಾರೆ. ತೆಲಂಗಾಣದ ನಿಜ಼ಾಮಾಬಾದ್ ನಲ್ಲಿ ನಟಿಸಿದ ಸಾರಂಗಧರ ಕಥಾ ಎಂಬ ಚಿಂದು ಭಾಗವತ ಯಕ್ಷಗಾನವು ಅತ್ಯಂತ ಖ್ಯಾತಿಯನ್ನು ಗಳಿಸಿತು. ಈ ರಂಗಕಲೆಯಲ್ಲಿ ಹಾಸ್ಯಗಾರನು ಸೂತ್ರಧಾರನಂತೆ ರಂಗವನ್ನು ನಿರ್ವಹಿಸಿ ಪೂರ್ಣ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿರುತ್ತಾನೆ. ಒಂದೊಂದು ಪಾತ್ರವೂ ವೇದಿಕೆಗೆ ಮೊದಲು ಆಗಮಿಸಿದಾಗ ಶ್ರೋತೃಗಳಿಗೆ ಆ ಪಾತ್ರವನ್ನು ಪರಿಚಯಿಸುವುದು ಮಾತ್ರವಲ್ಲದೆ ಎಲ್ಲ ಪಾತ್ರಗಳೊಂದಿಗೆ ಗಾಯನ - ನರ್ತನಗಳನ್ನೂ ಮಾಡುತ್ತಾನೆ. ಚಿಂದು ಭಾಗವತವು ಮುಖ್ಯವಾಗಿ ಗೋಸಂಗಿ (ಬ್ರಾಹ್ಮಣ ವೇಷ) ಮತ್ತು ಜಾಂಬವಂತನ ವೇಷಗಳನ್ನು ಒಳಗೊಂಡಿದ್ದು ಇವರಿಬ್ಬರ ಸಂಭಾಷಣೆಗಳು ಜಾಂಬವಂತ ಪುರಾಣದಿಂದ ಆರಿಸಲ್ಪಟ್ಟಿರುತ್ತದೆ. ಚಿಂದು ಭಾಗವತದಲ್ಲಿ ಸ್ತ್ರೀಯರು ಭಾಗವಹಿಸುವುದೂ ಉಂಟು.

ಮೌಖಿಕವಾಗಿಯೇ ಪರಂಪರಾನುಗತವಾಗಿ ಚಿಂದು ಭಾಗವತದ ಕಥಾಭಾಗವು ಮುಂದುವರೆಯುತ್ತಿದ್ದರೂ ಅರ್ವಾಚೀನವಾಗಿ ಚೇವಿರಾಲ ಭಾಗಯ್ಯ, ಜ್ಸಿಲ್ಲಾ ವೆಂಕಟೇಶದಾಸು, ಬುರುಗುಪಲ್ಲಿ ವೆಂಕಟನರಸಯ್ಯ ಪಂತುಲು, ಯಾದವದಾಸು ಮುಂತಾದವರು ತಾಲಲಯಕ್ಕೆ ತಕ್ಕಂತೆ ರಂಗಭೂಮಿಗೆ ತಕ್ಕಂತೆ ಕಥೆಗಳನ್ನು ರಚಿಸಿದ್ದಾರೆ. 300ಕ್ಕಿಂತ ಹೆಚ್ಚು ಸಾಹಿತ್ಯಗಳು ಈಗ ರಚಿತವಾಗಿವೆ. ಭಾಗವತಮೇಳ ನಾಟಕ ಕರ್ತೃವಾದ ವೆಂಕಟರಾಮ ಶಾಸ್ತ್ರಿಗಳು (ಕ್ರಿ. ಶ. 1743-1809) ತಮ್ಮ ತೆಲುಗು ಭಾಷೆಯ ನಾಟಕಗಳಲ್ಲಿ ಚೂರ್ಣಿಕೆ, ಚಂಪಕಮಾಲಾ ವೃತ್ತ ರಚನೆಗಳು, ದ್ವಿಪದಿ, ಕಂದ, ಪದ, ಪದವರ್ಣ, ಪದ್ಯ, ಸಂಧಿವಾಚನ, ಸೀಸ, ವಚನ ಮತ್ತು ತಿಲ್ಲಾನ ರಚನೆಗಳನ್ನು ರಚಿಸಿದ್ದಾರೆ. ಒಂದು ಪ್ರವೇಶದರುವಿನ ರಚನೆಯಲ್ಲಿ ಚಿಂದು ಪದ್ಯದ ರಚನೆಯೂ ಸೇರಿದೆ.

ಚಿಂದು ಭಾಗವತದ ಹಿಮ್ಮೇಳ ಹಾಗೂ ವೇಷ –

ಈ ಕಲೆಯು ದೇವದತ್ತವಾದದ್ದು ಎಂದು ನಂಬಿರುವ ಚಿಂದು ಮಾದಿಗರಲ್ಲಿ ತಮ್ಮ ಮನೆತನದ ಪ್ರಥಮ ಪುತ್ರನು ಢೋಲಕ್ ಹಾಗೂ ಡಪ್ಪು ವಾದ್ಯಗಳನ್ನು ಕಲಿಯಲೇ ಬೇಕಾದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಅಂತೆಯೇ ಚಿಂದು ಭಾಗವತರ ಮಕ್ಕಳು ಹಾಡುಗಳನ್ನೂ, ಅನೇಕ ವಿಧಗಳ ನೃತ್ತಭಾಗವನ್ನೂ, ರಂಗಸಜ್ಜಿಕೆ ಮಾಡುವುದನ್ನೂ, ಮುಖವರ್ಣಿಕೆ, ವೇಷ ಹಾಕುವುದು, ಇತ್ಯಾದಿಗಳನ್ನು ಕಲಿಯಲೇಬೇಕು. ಹಿಮ್ಮೇಳದಲ್ಲಿ ವೃಂದಗಾಯನದಲ್ಲಿ ಭಾಗವಹಿಸುವ ಮಹಿಳಾ ಕಲಾವಿದರು ಪ್ರತಿ ಹಾಡುಗಳ ಕಡೆಯಲ್ಲಿ ಜತಿಗಳನ್ನು ಹಾಡುತ್ತಾರೆ, ಈ ಜತಿಗಳಿಗೆ ಪುರುಷ ಕಲಾವಿದರು ನರ್ತಿಸುತ್ತಾರೆ. ಹಾಡುಗಳಿಗೆ ಮುಖ್ಯವಾಗಿ ಕಾಂಭೋಜಿ, ಅಸಾವೇರಿ, ಮೋಹನ, ಸೋಭ್ ವರಾಳಿ (ಶುಭಪಂತುವರಾಳಿ?) (sobhvarali) ರಾಗಗಳೂ, ರೂಪಕ, ಆದಿ, ಜುಲ್ವಾ ಮತ್ತು ತ್ರಿಪುಟ ತಾಳಗಳೂ ಅಳವಡಿಸಲ್ಪಟ್ಟಿದ್ದು ಚಿಂದು ಭಾಗವತದ ಪ್ರತಿಯೊಬ್ಬ ಕಲಾವಿದರಿಗೂ ಇವುಗಳಲ್ಲಿ ಪರಿಣತಿಯಿರುತ್ತದೆ. ಪ್ರಾಚೀನದಲ್ಲಿ ಶ್ರುತಿಗಾಗಿ ಇದ್ದ ತಿತ್ತಿ ವಾದ್ಯವನ್ನೀಗ ಹಾರ್ಮೋನಿಯಂ ವಾದ್ಯವು ಆಕ್ರಮಿಸಿಕೊಂಡಿದೆ. ಲಯದ ಭಾಗಕ್ಕೆ ಹಿಂದೆ ಡಪ್ಪು, ಢೋಲಕ್, ತಾಳಗಳು ಬಾಜಿಸಲ್ಪಡುತ್ತಿದ್ದರೂ ಈಗ ಮೃದಂಗ, ತಬಲಾ, ಹಾರ್ಮೋನಿಯಂ ವಾದ್ಯಗಳು ಉಪಯುಕ್ತವಾಗುತ್ತವೆ. ಪ್ರತಿಯೊಬ್ಬರೂ ಕಾಲ್ಗೆಜ್ಜೆಗಳನ್ನು ಧರಿಸುತ್ತಾರೆ. ವೃಂದಗಾಯನದಲ್ಲಿ ಭಾಗವಹಿಸುವ ಮಹಿಳಾ ಕಲಾವಿದರು ಲಯಕ್ಕೆ ಝುಲ್ಲರಿ ತಾಳಗಳನ್ನು ತಟ್ಟುತ್ತಾರೆ.

ಚಿಂದು ಭಾಗವತದಲ್ಲಿ ಧರಿಸುವ ವೇಷವು ಸರಳವಾಗಿ ಕಂಡರೂ ಸೊಬಗಿನಿಂದ ಕೂಡಿದ್ದು, ಮನೋಹರವಾಗಿಯೂ ನಾಜೂಕಾಗಿಯೂ ಮಾಡಲ್ಪಟ್ಟಿರುತ್ತವೆ. ಸ್ತ್ರೀಪುರುಷ ಕಲಾವಿದರು ತಮ್ಮ ತಮ್ಮ ಪಾತ್ರಗಳಿಗೆ ಸೂಕ್ತವಾದ ವೇಷವನ್ನು ಧರಿಸುವುದರೊಂದಿಗೆ ಹೆಗಲಿನ ಮೇಲೆ ಅಂಗವಸ್ತ್ರವನ್ನು ತಮ್ಮ

Copyright preserved

ಮೊಣಕಾಲಿನವರೆಗೂ ಬರುವಂತೆ ಧರಿಸುತ್ತಾರೆ. ಇದರ ಮೇಲೆ ತಮ್ಮ ಮೇಲುಡುಪು ಸ್ಥಿರವಾಗಿ ನಿಲ್ಲುವಂತಹ ಪಟ್ಕ ಅಥವಾ ದಟ್ಟಿಯನ್ನು ಧರಿಸುತ್ತಾರೆ. ಮುಖವರ್ಣಿಕೆಗೆ ಪ್ರಾಚೀನ ಪರಂಪರೆಯ ಸಾಮಗ್ರಿಗಳೇ ಇನ್ನೂ ಉಪಯುಕ್ತವಾಗುತ್ತಿವೆ.

ಶ್ರೀ ರಾಧಾಕೃಷ್ಣಮೂರ್ತಿಯವರು ಯಕ್ಷಗಾನ ಪ್ರಕ್ರಿಯೆ ಬಗ್ಗೆಯೂ ಚಿಂದು ಭಾಗವತವನ್ನು ಆಡುವ ಮಾದಿಗರ ಬಗ್ಗೆ ಹೇಳುತ್ತ ಪ್ರಾಚೀನದಲ್ಲಿ ತೆಲುಗು ಮಾತನಾಡುವ ಈ ಭೂಮಿಯು ಯಕ್ಷಭೂಮಿಯೆಂದು ಪ್ರಸಿದ್ಧವಾಗಿತ್ತೆಂದೂ, ಗಂಧರ್ವ ಜನಾಂಗಕ್ಕೆ ಸೇರಿದ ಯಕ್ಷರು ಅವರ ಸಂಗೀತ - ನೃತ್ಯಗಳಿಗೆ ಪ್ರಸಿದ್ಧರೆಂದೂ ಆದ್ದರಿಂದ ಅವರದೇ ಪ್ರಾಚೀನ ಪರಂಪರೆಯನ್ನು ಹೊಂದಿದ ಈ ಮಾದಿಗ ಜನಾಂಗಕ್ಕೆ ಯಕ್ಷಗಾನ ರಂಗಕಲೆಯು ಸುಲಭವಾಗಿಯೇ ಒಲಿಯುತ್ತದೆಂದೂ ಹೇಳಿದ್ದಾರೆ.

#.. chindu yellamma - Google Search
#.. chindu yellamma - Google Search

ಚಿಂದು ಮಾದಿಗ ಜನಾಂಗದ ಹಕ್ಕಿನ ರಂಗಭೂಮಿ –

ಜನಪದ ಪ್ರದರ್ಶನರಂಗಕಲೆಯಾದ ಚಿಂದು ಭಾಗವತವನ್ನು ಚಿಂದುಮಾದಿಗರು, ಜಾಂಬಪುರಾಣದ ಕಥೆಯ ಪ್ರದರ್ಶನವನ್ನು ಅವರ ಮಾದಿಗಕುಲದ ಪೋಷಕರೆದುರು ನೀಡಲು ವಂಶಪಾರಂಪರ್ಯವಾದ ಹಕ್ಕನ್ನುಳ್ಳವರಾಗಿದ್ದಾರೆ. ಚಿಂದು ಎಂದರೆ ಹೊಯ್ದಾಡುವ ಸ್ಪಂದನಶೀಲವಾದ, ಮಾರುಲಿವ ಹೆಜ್ಜೆಗಳು ಎಂಬ ಒಂದು ಬಗೆಯ ಅರ್ಥವು ಇದ್ದರೂ, 'ಆಂಧ್ರ ವಾಚಸ್ಪತ್ಯಮು (1940 ರಲ್ಲಿ) ಎಂಬ ತೆಲುಗು ಭಾಷೆಯ ವಿಶ್ವಕೋಶದಂತಹ, ನಾಲ್ಕು ಭಾಗಗಳನ್ನುಳ್ಳ ಗ್ರಂಥವನ್ನು ರಚಿಸಿದ ಕೋಟ ಶ್ಯಾಮಲ ಕಾಮಶಾಸ್ತ್ರಿಗಳು ತಮ್ಮ ಗ್ರಂಥದಲ್ಲಿ 'ಚಿಂದು' ಎನ್ನುವುದು ಮಾದಿಗ ಕುಲದ ಉಪಜಾತಿಯಾಗಿದ್ದು 'ಚಿಂದು' ನೃತ್ಯರೂಪಕವನ್ನು (ಯಕ್ಷಗಾನ) ಪ್ರದರ್ಶನ ವೃತ್ತಿಯಾಗಿ ಈ ಪಂಗಡವು ಆಯ್ಕೆ ಮಾಡಿಕೊಂಡ ಕಾರಣದಿಂದ ಅವರಿಗೆ ಚಿಂದು ಮಾದಿಗರೆಂಬ ಹೆಸರು ಬಂದಿದೆಯೆಂದು ಬರೆದಿದ್ದಾರೆ. ಅಂತೆಯೇ ಚಿಂದು ಶಬ್ದವು 'ಸಿಂಧು' ಎಂದರೆ ಸಾಗರ ಎಂಬ ಶಬ್ದದಿಂದ ಬಂದದ್ದೆಂದೂ, ಈ ಕಲಾವಿದರ ಚಲನೆಗಳು ಸಾಗರದ ಅಲೆಗಳ ಚಲನೆಯಂತೆ ವರ್ತುಲಾಕಾರವಾಗಿ ಸುತ್ತುತ್ತ ಸುತ್ತುತ್ತ ಬರುವುದರಿಂದ ಈ ಹೆಸರು ಬಂದಿದೆಯೆಂದೂ ಹೇಳಿದ್ದಾರೆ. ಆದರೆ ಸಿಂಧೂ ನಾಗರೀಕತೆಯಿಂದ ಬಂದಿರುವುದು ಅಸಂಭವವೆಂದೂ ಜಾಂಬಪುರಾಣದಲ್ಲಿ ಉಲ್ಲೇಖಿಸಲ್ಪಟ್ಟ ಈ ಕುಲದವರು ವಂಶಪಾರಂಪರ್ಯವಾಗಿ ಈ ಕಲೆಯನ್ನು ಪ್ರದರ್ಶಿಸುವ ಹಕ್ಕನ್ನು ಪಡೆದಿದ್ದಾರೆಂದೂ ಕೋಟ ಶ್ಯಾಮಲಕಾಮಶಾಸ್ತ್ರಿಗಳು ಹೇಳಿದ್ದಾರೆ.

ಕೆಲವು ಸಂಶೋಧಕರು ಚಿಂದು ಯಕ್ಷಗಾನವು ಕ್ರಿ. ಪೂ. ಎರಡನೆಯ ಶತಮಾನದ ಕಾಲದಲ್ಲಿತ್ತು ಕರ್ನಾಟಕದ ಯಕ್ಷಗಾನವನ್ನು ಹೋಲುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಆದರೆ ವೇಷಭೂಷವಾಗಲಿ, ಒಂದು ಜನಾಂಗಕ್ಕೆ ಮಾತ್ರ ಸೀಮಿತವಾದದು ಎಂಬ ವಿಷಯಕ್ಕಾಗಲಿ, ಶಿಷ್ಟ ಛಂದೋಬದ್ಧವಾಗಿರುವ ಸಾಹಿತ್ಯದಲ್ಲಾಗಲಿ, ಹಿಮ್ಮೇಳದಲ್ಲಾಗಲಿ, ರಂಗಸಜ್ಜಿಕೆಯಲ್ಲಾಗಲೀ, ಅನೇಕ ವಿಷಯಗಳಿಂದಾಗಿ ಚಿಂದು ಯಕ್ಷಗಾನವು ಕರ್ನಾಟಕದ ತೆಂಕು - ಬಡಗು ಯಕ್ಷಗಾನಗಳನ್ನು ಹೋಲುವುದಿಲ್ಲ. ಆದರೆ ಚಿಂದು ಯಕ್ಷಗಾನದಲ್ಲಿ ಗೀತವಾದ್ಯನೃತ್ತಗಳಲ್ಲವೂ ಇದ್ದು ವಾಚಿಕ(ಸಂಭಾಷಣೆ) ಆಹಾರ್ಯ (ವೇಷ, ಮುಖವರ್ಣಗಳು ಇತ್ಯಾದಿ), ಹಾಗೂ ರಂಗಸಜ್ಜಿಕೆಗಳ ವೈವಿಧ್ಯಗಳು ಮುಂತಾದವು ತನ್ನದೇ ಆದ ಜನಪದ ಸಂಪ್ರದಾಯ, ಶೈಲಿಗಳನ್ನು ಹೊಂದಿದ್ದು ಅನನ್ಯವಾಗಿದೆ. ಹೆಚ್ಚು ಶಿಷ್ಟವೇ ಆಗಿರುವ ಕರ್ನಾಟಕದ ಯಕ್ಷಗಾನಕ್ಕಿಂತ ಸಂಪೂರ್ಣವಾಗಿ ಬೇರೆಯೇ ಆಗಿದೆ. ಈಗೀಗ ಚಿಂದು ಭಾಗವತವೆಂಬ ಈ ಕಲೆಯು ಸೊರಗುತ್ತಿದೆಯೆಂದು ಹೇಳುತ್ತಾರೆ. ಅದಕ್ಕೆ ಕಾರಣವು ಕರ್ನಾಟಕದ ಯಕ್ಷಗಾನವು ಹೆಚ್ಚು ಶಿಷ್ಟ ಕಲಾವಿದರೇ ಅಭಿನಯಿಸಿ, ಸಾಹಿತ್ಯವನ್ನು ರಚಿಸಿ, ಹಿಮ್ಮೇಳವನ್ನು ಮಾಡುವುದರಿಂದಲೂ, ಹವ್ಯಾಸಿ ಪ್ರತಿಭಾವಂತ ಕಲಾವಿದರುಗಳಿಂದ ಈ ಕಲೆಯು ಬೆಳೆಯುತ್ತಿರುವಂತಹದೂ ಆದರೆ, ಚಿಂದು ಭಾಗವತವು ಬರೀ ಅವರ ಪಂಗಡ ಹಾಗೂ ಜಾತಿಗಳಿಗೇ

ಸೀಮಿತವಾಗಿದ್ದರಿಂದಲೂ ಇತ್ತೀಚಿನ ವಿದ್ಯಾಭ್ಯಾಸದ ರೀತಿಯಲ್ಲಿ ವ್ಯತ್ಯಾಸವಿರುವುದಿಂದಲೂ ಈ ಪರಂಪರೆಯ ಮನೋಭಾವನೆಗಳಲ್ಲಿಯೂ ಉಂಟಾದ ವ್ಯತ್ಯಾಸಗಳಿಂದಲೂ ಈ ಕಲೆಗೆ ಅಪಾಯವೊದಗಿದೆಯೆಂದು ಹೇಳಬಹುದು.

ಇತ್ತೀಚಿನವರೆಗೂ ಆಂಧ್ರಪ್ರದೇಶದಲ್ಲಿ ಚಿಂದು ನೃತ್ಯವು ರೂಢಿಯಲ್ಲಿ ಇದ್ದಿತು. ಹಳ್ಳಿಯ ಜನತೆ ತಮ್ಮ ಆರಾಧ್ಯದೈವದ ಜಾತ್ರಾ ಮಹೋತ್ಸವದ ಸಮಯದಲ್ಲಿ ದೇವರನ್ನು ಮೆರವಣಿಗೆಯಲ್ಲಿ ವೈಭವದಿಂದ ಕೊಂಡೊಯ್ಯುವ ಸಮಯದಲ್ಲಿ ಪಟಹ ಅಥವಾ ತಮಟೆ (ತಂಬಟ್ಟ) ವನ್ನು ಬಾರಿಸಿಕೊಂಡು ಚಿಂದು ಹಾಡುಗಳನ್ನು ಹಾಡುತ್ತಿದ್ದರು. ಇದು ಅನೇಕ ವರ್ಷಗಳಿಂದ ನಿಲ್ಲಿಸಲ್ಪಟ್ಟಿತ್ತು. ಕಾರಣವೇನೆಂದರೆ ಈ ಮೆರವಣಿಗೆಯಲ್ಲಿ ಕೆಲವು ವೇಳೆ ಒಂದು ಭಾಗದ ಜನಾಂಗವು ಇನ್ನೊಂದು ಭಾಗದ ಜನತೆಯನ್ನು ಜರಿಯಲು ಚಿಂದು ಹಾಡುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರೆಂದೂ, ಇದಕ್ಕೆ ಅಸಭ್ಯ ಪ್ರತಿಕೃತಿಗಳನ್ನು ಹೊತ್ತುಕೊಂಡು ಹೋಗಿ ಅಸಭ್ಯ ಪದಗಳನ್ನು ಉಪಯೋಗಿಸಿ ಹಾಡುತ್ತಾರೆಂದೂ ಕಾರಣಗಳನ್ನು ನೀಡಿ ಈ ಸಮಯದಲ್ಲಿ ಎರಡು ಭಾಗದ ಜನರಿಗೂ ಗಲಭೆಗಳುಂಟಾಗಿ ಚಿಂದುವನ್ನು ನಿಲ್ಲಿಸಿತೆಂದು ಆಗಸ್ಟ 16, 1935ರಲ್ಲಿ ಹಿಂದೂ ಪತ್ರಿಕೆಯು ಪ್ರಕಟಿಸಿತು. ಇಸವಿ 1859 ಮತ್ತು 1874 ರಲ್ಲಿ ಬ್ರಿಟಿಷ್ ಅಧಿಕಾರಿಯಾದ ಎಡ್ಗರ್ ಥರ್ಸ್ಟನ್ ಎಂಬುವವನು ಗೋಸಂಗಿ ವೇಷವನ್ನು ಮಾದಿಗ ಚಿಂದುವೆಂದೂ ಕರವಾಳನೃತ್ತ(ಖಡ್ಗನೃತ್ತ) ವೆಂದೂ, ಇದು ಕ್ರೂರಕಲೆಯೆಂದೂ ಕರೆದು 1887 ರಲ್ಲಿ ಒಬ್ಬ ಮಿಷಿನರಿಯು ಹಾಕಿದ ಕೋರ್ಟ್ ಕೇಸಿನ ಪರವಾಗಿ ನಿಂತು ಈ ಕಲೆಯನ್ನು ನಿಷೇಧಿಸಿದನು. ಈ ಮಿಷಿನರಿಯು ಗೋಸಂಗಿ ವೇಷದಲ್ಲಿ ಬರುವ ಗೋಸಂಗಿಯು ಕೈಯಲ್ಲಿ ಕತ್ತಿಯಂತೆ ಆಯುಧವಾಗಿ ಹಿಡಿಯುವ ಕೊಂಗವಲು ಕಟ್ಟೆಯನ್ನು ನೋಡಿ, ಗೋಸಂಗಿ ವೇಷವು ಕ್ರೂರವಾದ್ದೆಂದೂ ಈ ಕಲೆಯು ಮಾಳರು ಹಾಗೂ ಮಾದಿಗರಿಗೆ ಸದಾ ಜಗಳಗಳನ್ನುಂಟು ಮಾಡುತ್ತಿದೆಯೆಂದು ಕಾರಣಗಳನ್ನಿತ್ತು ಈ ಗೋಸಂಗಿ ವೇಷವನ್ನು ಕುಂಪೆನಿ ಸರ್ಕಾರವು ನಿಲ್ಲಿಸಬೇಕೆಂದೂ ತಾನೂ ಇವರನ್ನೆಲ್ಲ ಪವಿತ್ರಾತ್ಮರನ್ನಾಗಿ ಮಾಡುತ್ತೇನೆಂದು ಹೇಳಿದ್ದ! ಈ ಘಟನೆಯೂ ಜನಾಂಗಗಳಲ್ಲಿ ಪರಸ್ಪರ ಅಪನಂಬಿಕೆ ಹಾಗೂ ಜಗಳಗಳನ್ನೆಬ್ಬಿಸಿ, ಅಂತರ್ಜಾತಿಯ ಕಲಹಗಳನ್ನು ಹುಟ್ಟು ಹಾಕಿ ಮತಾಂತರಗಳನ್ನು ಮಾಡುವ ಮಿಷಿನರಿಗಳ ಹುನ್ನಾರಗಳಲ್ಲಿ ಒಂದಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ!

ಕಾವ್ಯೋಲ್ಲೇಖಗಳು –

ಚಂದ್ರಶೇಖರನು ಕರ್ನಾಟಕ ದೇಶೀಯ ನೃತ್ಯಗಳಾಗಿದ್ದ ಮಾತಂಗೀ, ಶಬರೀ, ಯೋಗಿನೀ ನೃತ್ಯಗಳೊಂದಿಗೆ ನೆರೆಪ್ರಾಂತ್ಯಗಳ ನೃತ್ತಗಳಾದ ಚಿಂದು, ಜಕ್ಕಡಿ, ಕೌಲು, ಗಜಲು, ಭೈಟು, ತೂರಿಗೆ ಹಾಗೂ ಆಂದೋಲಿತಗಳನ್ನೂ ಹೇಳುತ್ತಾನೆ. –

"ಕಟ್ಟಣಿಧರುವಿನ ನಂತರ ನರ್ತಕಿ ಮಾತಂಗಿ ಶಬರಿ ಯೋಗಿಣಿ ಮುಂತಾದ ಆಟಮನಾಡಿ ನಾನಾ ದೇಶ ವೇಷ ಭಾಷೆಗಳನಳವಡಿಸಿ ಚಿಂದು ಜಕ್ಕಡಿ ಕವಿಲು ಗಜಲು ಭೈತುತುರಿಗೆ ಆಂದೋಳಿತ ಮೊದಲಾದ ಆಟಗಳಿಂ ನೋಟಕರ ದಿಟ್ಟಿಗೆ ಮಧುರಮಾಗೆ ಮೆಚ್ಚನಚ್ಚೊತ್ತಿರ್ದಳಂತು ಮಲ್ಲದೆಯುಂ" (ಪಂಪಾವ. ೯೦ವ.)

ಆಯಾ ಪ್ರಾಂತ್ಯಕ್ಕೆ ಭಾಷೆಗೆ ಅನುಗುಣವಾದ ಸಾಹಿತ್ಯವನ್ನು ಹೊಂದಿ ಉದ್ಗ್ರಾಹಪದ; ಪಾಟಾಕ್ಷರಗಳು, ಪಿಲ್ಮರು, ಕೈಮುರು ಕಲಾಸಗಳಿಂದಲೂ, ಸ್ಥಾನಕ, ಚಾರಿ, ರೇಖಾ ಸೌಷ್ಠವ ಲಾಸ್ಯಾಂಗಗಳಿಂದಲೂ, ರೇಚಕಗಳಿಂದಲೂ ಹಾವಭಾವ ವಿಲಾಸದಿಂದಲೂ ಮನೋಹರವಾದ ಸೊಲ್ಲುಕಟ್ಟುಗಳನ್ನು (ನೋಡಿ ಅನುಬಂಧ ಅ.ಪರಿಭಾಷೆ) ಅನುಸರಿಸಿ ಹೆಜ್ಜೆಗಳ ನಾದವನ್ನು ಮಾಡುತ್ತ ಸಂಪ್ರದಾಯದನುಸಾರವಾಗಿ ಮಾಡುವ ನೃತ್ಯವನ್ನು ಚಿಂದುನೃತ್ಯವೆಂದು ಕರೆಯುತ್ತಾರೆ. ಇದರಲ್ಲಿ ಆರು ಬಗೆಗಳು. ಇದರಲ್ಲಿ ಕವಿಯು ಯಾವ ಬಗೆಯೆಂದು ನಿರ್ದಿಷ್ಟವಾಗಿ ಹೇಳುವುದಿಲ್ಲ. (ಇದರ ಕೆಲವು ಬಗೆಯನ್ನು ಭರತೇಶ ವೈಭವ

ನೃತ್ಯಪ್ರಸಂಗದಲ್ಲೂ, ಚನ್ನಬಸವ ಪುರಾಣದ ನೃತ್ಯಪ್ರಸಂಗಗಳಲ್ಲೂ ಚರ್ಚಿಸಿದೆ.) ಇದರ ನಂತರ ನರ್ತಕಿಯು ಯವನರಿಗೆ ಪ್ರಿಯವಾದ ಜಕ್ಕಡಿನೃತ್ಯವನ್ನು ಮಾಡಿದಳು ಎಂದು ಕವಿ ಹೇಳುತ್ತಾನೆ. ಯವನೀ ಭಾಷೆ (ಪರ್ಶಿಯನ್) ಯಿಂದ ಕೂಡಿ ಗಜರ, ಕೌಲ, ಅಹಂಗರಾಗಗಳಿಂದಲೂ, ನಾನಾಲಯ (ತ್ರಯ)ಗಳಿಂದಲೂ ವಿಚಿತ್ರವಾಗಿದ್ದು, ಧ್ರುವ ಝಂಪಾದಿ ತಾಳಗಳಿಗೆ ಭ್ರಮರಿಗಳನ್ನು ಮಾಡುತ್ತ ನರ್ತಿಸುವುದನ್ನು ಶಾಸ್ತ್ರಗಳು ಜಕ್ಕಡಿ ಅಥವಾ ಜಕ್ಕರೀ ನೃತ್ಯವೆಂದಿವೆ. (ಭರಚ. ಪ್ರಸಂಗದಲ್ಲಿ ಚರ್ಚಿಸಿದೆ.) ಚಿಂದು, ಜಕ್ಕಡಿಯಂತಹ ಪ್ರಾಂತೀಯ ನೃತ್ಯಗಳ ತರುವಾಯ ಈ ನೃತ್ಯ ಭೇದಗಳನ್ನು ಪ್ರದರ್ಶಿಸಿದಳೆಂದು ಕವಿಯ ವಿವರಣೆ. (ಪದಗತಿ ಪಾದಗತಿ - ತುಳಸಿ ರಾಮಚಂದ್ರ)

"ಈ ಪಾರಿಭಾಷಿಕ ಪದಗಳನ್ನು ಈ ಮೊದಲೇ ಉಲ್ಲೇಖಿಸಿದ್ದು; ಅವುಗಳನ್ನು ಅರಿತು ನೋಡಿದಲ್ಲಿ ಅಷ್ಟಭಾಷಾಕವಿ ಚಂದ್ರಶೇಖರನ ಕಾಲದಲ್ಲಿ (ಕ್ರಿ.ಶ.1430) ಚಿಂದುನೃತ್ತದೊಂದಿಗೆ ಇತರ ದೇಶೀ ನೃತ್ತಗಳೂ ಎಷ್ಟು ಶಿಷ್ಟವಾಗಿ ನರ್ತಿಸಲ್ಪಡುತ್ತಿದ್ದವೆಂಬುದೆಂದು ಊಹಿಸಬಹುದು." ವಿಜಯನಗರದ ಪ್ರೌಢದೇವರಾಯನ ಆಸ್ಥಾನ ಕವಿಯಾಗಿದ್ದು ಪಂಪಾಸ್ಥಾನ ವರ್ಣನಂ ರಚಿಸಿದ್ದ ಈ ಕವಿಯ ಕಾಲದಲ್ಲಿ ಆಂಧ್ರ, ಮಹಾರಾಷ್ಟ್ರ, ಹಾಗೂ ತಮಿಳುನಾಡಿನ ಎಷ್ಟೋ ಭಾಗಗಳು ಕರ್ನಾಟಕದ ವಿಜಯನಗರ ಅರಸರಿಗೆ ಸೇರಿದ್ದು ಲಲಿತಕಲೆಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು.

ಕೇರಳ ದೇಶದ ಚಿಂತು ಪಾಟ್ಟು — .

ಕೇರಳದ ಚಿಂದು ಹಾಡುಗಳು ಪರಿಶಿಷ್ಟ ಕೆಲವು ಜನಾಂಗಗಳ ಧಾರ್ಮಿಕ ಹಾಗೂ ಸಾಂಪ್ರದಾಯಿಕ ಆಚರಣೆಯಲ್ಲಿದ್ದು ಮುರುಗನ್, ಅಯ್ಯಪ್ಪ ಮುಂತಾದ ದೈವಗಳ ಆರಾಧನೆಗೆ ಇರುವಂತಹದು. ತಮಿಳಿನಂತೆಯೇ ಚಿಂದು ಹಾಡುಗಳು ಇರುವಂತೆಯೇ ಮಲಯಾಳ ಭಾಷೆಯಲ್ಲಿಯೂ ಮುರುಗನ್ ಮತ್ತು ಹಿಡುಂಬನ್ ಸ್ವಾಮಿ ತುಳ್ಳಲ್ ಚಿಂತು ಹಾಡುಗಳೂ ಅಯ್ಯಪ್ಪನ ಚಿಂತು ಹಾಡುಗಳೂ ಇವೆ. ತುಳ್ಳಲ್ ಎಂದರೆ ಏಕವ್ಯಕ್ತಿ ನೃತ್ತ.
ಈ ನೃತ್ತವು ಕೇರಳದಲ್ಲಿ 17 - 18ನೆಯ ಶತಮಾನಗಳಲ್ಲಿ ರೂಢಿಗೆ ಬಂದಿತು. ವಾಚಿಕಾಭಿನಯವಿದ್ದು ಅನೇಕ ಪುರಾಣ ಕಥೆಗಳನ್ನು ಹಾಡಿನ ರೂಪದಲ್ಲಿ ಹೇಳುತ್ತಾರೆ. ಕೇರಳದ ಪ್ರಸಿದ್ಧ ನಾಟ್ಯಗಳಾದ ಕೂಡಿಯಾಟ್ಟಂ ಮತ್ತು ಕಥಕ್ಕಳಿಗಿಂತ ತುಳ್ಳಲ್ ನೃತ್ತವೂ, ಗೀತವೂ ಬಹಳ ಸುಲಭವಿದ್ದು ಜನಪದರಿಗೆ ಸುಲಭವಾಗಿ ಅರ್ಥವಾಗುವಂತಹುದಾಗಿರುತ್ತದೆ.
ತುಳ್ಳಲ್ ಗೀತ ಹಾಗೂ ನೃತ್ತಗಳು ಆಲಯದ ಧಾರ್ಮಿಕತೆಯ ಅಂಗವಾಗಿ ಪೂಜಾಕಾರ್ಯಕ್ಕೆ ಸಂಬಂಧಿಸಿದವು. ಆದರೆ ಮುರುಗನ್ ತುಳ್ಳಲ್ ಚಿಂತು ಹಾಡುಗಳು ಜನಪದೀಯ ಕೆಲವು ಪರಿಶಿಷ್ಟ ಪಂಗಡಗಳ ಧಾರ್ಮಿಕ ಆಚರಣೆಗೆ ಮಾತ್ರ ಸಂಬಂಧಿಸಿದ್ದು. ಮಲಯಾಳ ಭಾಷೆಯಲ್ಲಿ ಇದ್ದು ಮಲಯಾಳಿಗಳೇ ಹಾಡಿದರೂ ಈ ಧಾರ್ಮಿಕ ಹಾಡುಗಳು ತಮಿಳುನಾಡಿನಿಂದ ಇಲ್ಲಿಗೆ ವಲಸೆ ಬಂದವರಿಂದ ಆರಂಭಿಸಿದ್ದಿರಬಹುದೇ ಎಂಬ ಭಾವನೆ ಮೂಡುತ್ತದೆ. ಇವು ಸಂಪೂರ್ಣವಾಗಿ ಜನಪದದ ಧಾರ್ಮಿಕ ಹಾಡುಗಳು.
ಮುರುಗನ್ ಮತ್ತು ಇನ್ನಿತರ ದೈವಗಳ ಫೋಟೋಗಳನ್ನಿಟ್ಟು ಈ ಜನಪದರೇ ಪೂಜೆ ಮಾಡಿರುತ್ತಾರೆ. ಈ ಪೂಜೆಯ ಅಂಗವಾಗಿಯೇ ಸ್ವಲ್ಪ ಬೇರೆ ಬದಿಯಲ್ಲಿ ದೀಪವನ್ನು ಹಚ್ಚಿ ಸ್ವಸ್ತಿಕವನ್ನಿಟ್ಟು ಅದಕ್ಕೆ ಪೂಜೆ ಮಾಡಿ ಪರಂಪರೆಯಿಂದಲೇ ಮೌಖಿಕವಾಗಿ ಈ ಹಾಡುಗಳನ್ನು ಕಲಿತ ಅದೇ ಜನಾಂಗದ ಕೆಲವು ಭಕ್ತರು ಆ ದೀಪವನ್ನು ಸುತ್ತುವರಿದು ಗಾಯನಕ್ಕೆ ನಿಂತು/ಕುಳಿತುಕೊಳ್ಳುತ್ತಾರೆ. ಮುಖ್ಯಗಾಯಕನು ದೇವನಾದ ಮುರುಗನ ಹಾಡಿನ ಒಂದು ಸಾಲನ್ನು ಹಾಡಿದರೆ ಉಳಿದವರು ಅದನ್ನು ಪುನರ್ ಗಾಯನ ಮಾಡುತ್ತಾರೆ. ಎಲ್ಲರ ಕೈಯಲ್ಲಿಯೂ ಡಮರುಗ ವಾದ್ಯವನ್ನು ಹೋಲುವ, ಅದಕ್ಕಿಂತಲೂ ಸ್ವಲ್ಪ ದೊಡ್ಡದಾದ ಲಯವಾದ್ಯವಿದ್ದು ಲಯಕ್ಕೆ ಸರಿಯಾಗಿ ಅದನ್ನು ತಟ್ಟುತ್ತಿರುತ್ತಾರೆ. ಹರಕೆಗಾಗಿ ವೇಲ್ ನ್ನು ಚುಚ್ಚಿಕೊಳ್ಳುವವರು ಮೊದಲೇ ದೇವರಿಗೆ ಪೂಜೆಯನ್ನು ಸಲ್ಲಿಸಿ, ಮುರುಗನ್ ಚಿಂದು ಪಾಟ್ಟುಗಳನ್ನು

Copyright preserved

ಗಾಯನ ಮಾಡುವವರ ಬಳಿ ಬರುತ್ತಾರೆ. ಈ ಹಾಡನ್ನು ಕೇಳುತ್ತ ಕೇಳುತ್ತ ಬಹುಶಃ ಹರಕೆಯನ್ನು ಹೊತ್ತ ಹದಿಹರೆಯದ ವಯಸ್ಸಿನ ಹುಡುಗರಿಗೂ, ನಡುವಯಸ್ಕರಿಗೂ ಆವೇಶವು ಬರತೊಡಗಿ ಹಾಡಿನ ಲಯಕ್ಕೆ ಕುಣಿಯಲು ಆರಂಭಿಸಿ ಕಿರಿಚುತ್ತ ನರ್ತಿಸಲು ಆರಂಭಿಸುತ್ತಾರೆ. ಹೀಗೆ ಈ ಆವೇಶ ಬಂದ ಕೂಡಲೇ ಇಂತಹ ಸಂದರ್ಭದಲ್ಲಿ ಅನುಸರಿಸಬೇಕಾದ ಧಾರ್ಮಿಕ ವಿಧಿಗಳಲ್ಲಿ ನುರಿತವರಾಗಿರುವ, ಅಲ್ಲಿ ನೆರೆದ ಹಲವರು ಆವೇಶ ಬಂದವರಿಗೆ ಆರತಿಯನ್ನೆತ್ತಿ ತಲೆಗೆ ನೀರು, ಎಳನೀರು, ಹಾಲುಗಳನ್ನು ಅಭಿಷೇಕ ಮಾಡಿ ತಂಪು ಮಾಡುತ್ತಾರೆ. ಮುಖಕ್ಕೆ ಹಾಗೂ ಮೈ ಕೈಗಳಿಗೆ ಗಂಧವನ್ನು ಹಚ್ಚಿ ಅವರ ಆವೇಶದ ಸಮಯದಲ್ಲಿ ಉಂಟಾಗುವ ದೇಹಬಾಧೆಯನ್ನು ಶಮನಗೊಳಿಸಲು ಯತ್ನಿಸುತ್ತಾರೆ.
ಈ ಭಕ್ತರು ತಮ್ಮ ಆವೇಶವು ಹೆಚ್ಚುತ್ತ ಹೋದಂತೆ ಸಾಮಾನ್ಯ ನಾಲ್ಕೂವರೆ ಐದು ಅಡಿಗಳಷ್ಟು ಉದ್ದವಾದ ಮುರುಗನ ವೇಲಾಯುಧವನ್ನು ಹೋಲುವ ಸುಮಾರು 200 mm ದಪ್ಪದ ಆಯುಧದ ದಪ್ಪ ಸರಿಗೆಯ ಕಡೆಯ ಭಾಗವನ್ನು ಬಲ ಬದಿಯ ಹೊರಕೆನ್ನೆಗೆ ಅವರವರೇ ಚುಚ್ಚಿಕೊಂಡು ಬಾಯ ಒಳಗಿನಿಂದ ಎಳೆದು ಹೊರತೆಗೆಯುತ್ತಾರೆ. ಇದಕ್ಕೆ ನುರಿತ ಇಬ್ಬರು ಅವರಿಗೆ ಸಹಾಯವನ್ನು ಮಾಡುತ್ತಾರೆ. ಈ ದಪ್ಪಸರಿಗೆಯ ಬಹಳ ತುದಿಯಲ್ಲಿ ವೇಲ್ ಇದ್ದರೆ ಚುಚ್ಚಿ ಹೊರಬಂದ ಎಡಬದಿಗೆ ನಿಂಬೆಹಣ್ಣನ್ನು ಚುಚ್ಚಿಬಿಡುತ್ತಾರೆ. ಬಾಯಿಯಲ್ಲಿ ಚುಚ್ಚಿಕೊಂಡಿರುವ ಈ ವೇಲಾಯುಧದ ತುದಿಗಳನ್ನು ಅಗಲಿಸಿದ ತಮ್ಮ ಎರಡು ಕೈಗಳಿಂದಲೂ ಹಿಡಿದುಕೊಂಡು ತಮ್ಮ ಸುತ್ತ ನೆರೆದ ಹಾಡುತ್ತಿರುವ ಮುರುಗನ್ ಚಿಂತು ಪಾಟ್ಟಿಗೆ (ಚಿಂದು ಹಾಡಿಗೆ) ಕುಣಿಯುತ್ತಲೇ ಅಲ್ಲಿ ಭಯಭಕ್ತಿಗಳಿಂದ ನೆರೆದಿರುವ ಎಲ್ಲ ಭಕ್ತರಿಗೂ ಅವರವರ ಕಷ್ಟಗಳಿಗೆ ಪರಿಹಾರವನ್ನು ಸೂಚಿಸುತ್ತ ಕೈಯಲ್ಲಿ ತೆಂಗಿನಕಾಯಿಯ ನೀರನ್ನೋ ಗಂಧವನ್ನೋ ಪ್ರಸಾದವಾಗಿ ನೀಡುತ್ತಾರೆ.
ಕೆಲವು ಪಂಗಡಗಳು ಎರಡು ಕೈಗಳಲ್ಲಿಯೂ ನವಿಲುಗರಿಗಳ ಉದ್ದವಾದ ಕಟ್ಟುಗಳನ್ನು ಹಿಡಿದು ನರ್ತಿಸುವುದೂ ಉಂಟು. ಹಾಡಿನ ಮಂಗಳದ ಭಾಗವು ಬರುವಂತೆಯೇ ಚುಚ್ಚಿದ್ದ ವೇಲಾಯುಧವನ್ನು ನುರಿತ ಸಹಾಯಕರು ನಿಧಾನವಾಗಿ ಎಳೆದು ತೆಗೆಯುತ್ತಾರೆ. ವೇಲಾಯುಧವನ್ನು ತೆಗೆಸಿಕೊಂಡ ಕೂಡಲೇ ಅವರ ಆವೇಶವು ಒಮ್ಮೆ ಹೆಚ್ಚುತ್ತದೆ. ಆದರೆ ನೆರೆದವರು ಅವರನ್ನು ಗಟ್ಟಿಯಾಗಿ ಹಿಡಿದು ತಲೆಯ ಮೇಲೆ ತಣ್ಣೀರು ಎಳನೀರುಗಳನ್ನು ಸುರಿದು ಆವೇಶವನ್ನು ಶಮನಗೊಳಿಸಿ ಅವರನ್ನು ಒಂದೆಡೆ ಎತ್ತಿಕೊಂಡು ಹೋಗಿ ಮಲಗಿಸುತ್ತಾರೆ. ಮುರುಗನ್ ತುಳ್ಳಲ್ ಚಿಂದುಪಾಟ್ಟನ್ನು ಹಾಡುತ್ತಿರುವವರು ದೀಪದ ಮುಂದೆ ಮಂಗಳವನ್ನು ಹಾಡಿ ಪೂಜೆಯನ್ನು ಮಾಡಿ ತಮ್ಮ ಗಾಯನವನ್ನು ಕೊನೆಗೊಳಿಸುತ್ತಾರೆ. ಒಂದು ವಿಶೇಷ ಸಂಗತಿಯೆಂದರೆ ಆವೇಶ ಬರುವ ಈ ಭಕ್ತರಿಗೆ ವೇಲನ್ನು ಚುಚ್ಚುವಾಗಲೂ ಅದನ್ನು ಹೊರತೆಗೆಯುವಾಗಲೂ ಸ್ವಲ್ಪವೂ ರಕ್ತವು ಬರುವುದಿಲ್ಲ! ಈ ಆಚರಣೆಗಳಲ್ಲಿ ಪಂಗಡಗಳಿಂದ ಪಂಗಡಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳೂ ಇವೆ.

ತಮಿಳುನಾಡಿನ ಪದ್ಧತಿಯಲ್ಲಿ ಪಳನಿಯಂತಹ ಮುರುಗನ್ ಬೆಟ್ಟಗಳಿಗೆ ಕಾವಡಿಯನ್ನು ಹೊತ್ತಿ ಬಾಯಿಗೆ ವೇಲನ್ನು ಚುಚ್ಚಿಕೊಂಡು ಹೋಗುವ ಪದ್ಧತಿ ಇದ್ದ ಜನಾಂಗವು ನೂರಾರು ವರ್ಷಗಳ ಹಿಂದೆಯೇ ಕಾರಣಾಂತರಗಳಿಂದ ಕೇರಳಕ್ಕೆ ವಲಸೆ ಬಂದರೂ ಅಲ್ಲಿನ ತಮ್ಮ ಧಾರ್ಮಿಕ ಪರಂಪರೆಯನ್ನು ಹೀಗೆ ಉಳಿಸಿಕೊಂಡಿರುವ ಸಾಧ್ಯತೆಗಳೇ ಹೆಚ್ಚಿವೆ. ಮುರುಗನ್ ತುಳ್ಳಲ್ ಚಿಂತು ಪಾಟ್ಟಿನ ಯೂ ಟ್ಯೂಬ್ ಲಿಂಕ್ ಗಳನ್ನು ಲೇಖನಾಂತ್ಯದ ಆಕರ ಋಣಭಾಗದಲ್ಲಿ ಕಡೆಯಲ್ಲಿ ನೀಡಿದೆ. ಆಸಕ್ತರು ನೋಡಿಕೊಳ್ಳಬಹುದು.

ಶ್ರೀ ನಾರಾಯಣ ಗುರುಗಳು ಮಲಯಾಳ ಭಾಷೆಯಲ್ಲಿ ಕುಂಡಲಿನೀ ಚಿಂದು ಹಾಡೊಂದನ್ನು ರಚಿಸಿದ್ದಾರೆ. ಈ ಹಾಡು "ಆಡು ಪಾಂಬೆ ಪುನಂ ತೇಡು ಪಾಂಬೆಯರುಲಾನಂದ ಕೂತು ಕಂಡಾಡು ಪಾಂಬೆ" ಎಂದು ಆರಂಭವಾಗುವ ಈ ಕುಂಡಲಿನೀ ಹಾಡಿಗೆ ಹಿಂದೆ ಹಾವಾಡಿಗ ಚಿಂತು ಹಾಡು ಎಂದೆ ಹೆಸರಿತ್ತು. ಈ ಹಾಡಿನಲ್ಲಿ ಶ್ರೀ ನಾರಾಯಣ ಗುರು ಸ್ವಾಮಿಗಳು ಮಾನವ ದೇಹದಲ್ಲಿ ಮೂಲಾಧಾರ ಚಕ್ರದಲ್ಲಿನ ನಿದ್ರಿಸಿರುವ ಕುಂಡಲಿನೀ ಶಕ್ತಿಯನ್ನು ಎಚ್ಚರಿಸಿ ಯೋಗ ಮಾರ್ಗದಿಂದ ಮೋಕ್ಷವನ್ನು ಗಳಿಸುವ ಬಗೆಯನ್ನು ಹೇಳಿದ್ದಾರೆ. ಈ ಹಾಡನ್ನು ಕಲಾವಿದರಾದ ಗಾಯಕರು ಮಾತ್ರ ಹಾಡುವುದಲ್ಲದೆ ಈಗೀಗ ನೃತ್ಯಕ್ಕೂ ಅಳವಡಿಸಿದ್ದಾರೆ.

Copyright reserved

ಮಂಗಲ —

ನಮ್ಮ ಭಾರತ ದೇಶವು ಲಲಿತಕಲೆಗಳ ಮೂಲಕ ಆಧ್ಯಾತ್ಮ ಸಾಧನೆಯನ್ನು ಮಾಡಿ ಮೋಕ್ಷವನ್ನು ಗಳಿಸುವ ಮಾರ್ಗವನ್ನು ತೋರುವಂತಹದು. ಚಿಂದುವಂತಹ ಅದೆಷ್ಟೋ ಜಾನಪದ ದೇಶೀ ಕಲೆಗಳೂ ಜಾನಪದರಿಗೂ ಸಹ ಮೋಕ್ಷಸಾಧನೆಗೆ, ದೈವಸಂಪ್ರೀತಿಗೆ ಕಲೆಯನ್ನೇ ಆಧ್ಯಾತ್ಮಿಕ ಮಾರ್ಗವನ್ನಾಗಿ, ಸಾಧನೆಯ ಗುರಿಯನ್ನಾಗಿ ತೋರಿಸಿಕೊಡುತ್ತವೆ. ಹೀಗೆ ಜನಪದಕಲೆಯಲ್ಲಿ ಸೇರಿರುವ ಪ್ರಬಂಧಗಳನ್ನೂ (ಹಾಡು), ನೃತ್ಯಗಳನ್ನೂ ನಮ್ಮ ಪೂರ್ವ ಸಂಗೀತಶಾಸ್ತ್ರಕಾರರು ಅತ್ಯಂತ ಪ್ರಾಚೀನದಿಂದಲೇ ಅತಿಶಯವಾಗಿ ಗೌರವಿಸಿ, ತಮ್ಮ ಗ್ರಂಥಗಳಲ್ಲಿ ಬೆಲೆ - ನೆಲೆಗಳನ್ನಿತ್ತು ಉಲ್ಲೇಖಿಸಿರುವುದು ಕಲೆಯ ಪ್ರಪಂಚಕ್ಕೇ ಹೆಮ್ಮೆಯ ಹಾಗೂ ಅತಿಶಯವಾದ ಸಂಗತಿಯಾಗಿದೆ. ಅವರು ಈ ಲಲಿತಕಲೆಗಳಿಗೆ ಜಾತಿಗಳನ್ನು ಹೇಳದೆ ಭಾಷೆಗಳನ್ನೂ ದೇಶಗಳನ್ನೂ ಮಾತ್ರ ಉಲ್ಲೇಖಿಸಿರುವುದು ಗಮನೀಯ ಹಾಗೂ ಅನುಕರಣೀಯ. ಲಲಿತಕಲೆಗಳಿಗೆ, ಪ್ರತಿಭೆಗೆ, ಮೋಕ್ಷಸಾಧನೆಗೆ ಜಾತಿ - ಕುಲ - ಗೋತ್ರ - ಅಂತಸ್ತುಗಳುಂಟೇ? ಲಲಿತಕಲೆಗಳು ಒಲಿಯಲು ಭಗವಂತನ ಅನುಗ್ರಹವಿರಲೇ ಬೇಕಲ್ಲವೇ?!

ಆಕರ ಋಣ

#.. ಪದಗತಿ - ಪಾದಗತಿ - ಡಾ. ತುಳಸೀ ರಾಮಚಂದ್ರ
#.. ಭಾರತೀಯ ಸಂಗೀತದಲ್ಲಿ ಪರಿಭಾಷಾ ಪ್ರಯೋಗ — ರಾ. ಸತ್ಯನಾರಾಯಣ.
#.. ಪುಂಡರೀಕಮಾಲಾ — ರಾ. ಸತ್ಯನಾರಾಯಣ.
#.. Studies in Indian Dance — R. Sathyanarayana.
#.. Nrttaratnavali of Jaya Senapati — General Editors A. A. Ramanathan and R. K. Parthasarathi. Critically Edited with Introduction and Notes by Dr. V. Raghavan. Government Oriental Manuscripts Library. Madras - 1965.
#.. Art and Culture of Marginalized Nomadic Tribes in Andhrapradesh — P. Sadanandam.
#.. Muslim Identity, Print Culture, and the Dravidian Factor of Tamilnadu — by J. B. Prashant More.
#.. The Paliyars and Shiva Temples of the Caturagiri Hills, Virudunagar District, Tamil Nadu. South India and the Caturagiri Vazhinadaiccindu — Veerasamy Selva.
#.. Melattur, a seat of Bhagavata Mela - an overview (part 1) - by Melattur S. Natarajan, Dubai.
#.. Music\= Cultures in Contact : Covergences and Collisions — by Margaret J. Kartomi, Stephen Blum.
#.. Encyclopaedia of the Hindu World —by Ganga Ram Garg.
#.. Chindu Chronicles - - The Hindu
#.. Bonding… A Memoir - by Vijayantimala Bali.
#.. Land and People of Indian States and Union Territories (in 36Volumes) - edited by Shankarlal C. Bhatt. Vyan publishing House, 2005.
#.. Gods, Heroes and their Story Tellers : Intangible cultural heritage of South — V. Hari Saravanan, Notion Press. 2014.
#.. Madiga and Dalit —Simon Charsle
#.. D. Venkat Rao. Mnemocultures of hospitality, Hindi: Language, discourse, writing, 2, 4: 145-64 - 2002
#.. M. Nagabhushana Sarma — Folk Performing Arts of Andhra Pradesh, Hyderabad, Telugu University, 1995

copyright preserved

#.. George Feuetstein, Subhash Kak & David Frawley ; In Search of the Cradle of civilization. Motilal Banarasidass ; Delhi, 1995, 2001, 2005, 2008,ch. The spiritual heritage of ancient India.
#.. Dr. Sunil Kumar Satapathy : aAnthropology of Santhal Songs, Dance and Music of Orissa. Pub - Indian Academy of Folk and Tribal Culture, Bhubaneswar, January 1990.

Google links—
#.. https://www.flickr.com/photos/28689511@N05/4302452854/
ಚಿಂದು ಕಲಾಕಾರರ ಕೆಲವು ಫೋಟೋಗಳು. ಈ ಕಲೆಯು ಈಗ ನಾಟಕರಂಗದ ಆಹಾರ್ಯವನ್ನು ಅನುಸರಿಸಿರುವುದಾಗಿ ತಿಳಿಯುತ್ತದೆ.

#..https://books.google.co.in/books?id=y2noBgAAQBAJ&pg=PT295&lpg=PT295&dq=chindu+yellamma+information&source=bl&ots=zx_ypv9OR1&sig=ACfU3U3QYdXzdiKHuzkqFLO0uLRi25eG1g&hl=en&sa=X&ved=2ahUKEwiP7fuiivnlAhXXbCsKHVHZAjU4ChDoATAJegQIBhAB#v=onepage&q=chindu%20yellamma%20information&f=false

#..https://www.academia.edu/39474001/The_Paliyars_and_Shiva_Temples_of_the_Caturagiri_Hills_Virudunagar_District_Tamil_Nadu_South_India_and_the_Caturagiri_Vazhinadaiccindu.

#.. https://www.kalakendra.com/dance/bharatanatyam/ performances/bharatanatyam-kavadi-chindu-sd316

#.. http://www.simoncharsley.co.uk/perform2.html

#.https://books.google.co.in/books?id=y2noBgAAQBAJ&pg=PT296&lpg=PT296&dq=chindu+bhagavatam&source=bl&ots=zx-CnwfIJ1&sig=ACfU3U1jODpkaPZNRlz8eBAhFwmPKBPlEw&hl=en&sa=X&ved=2ahUKEwiO1uaslIvpAhWJbn0KHbdhACw4FBDoATACegQICRAB#v=onepage&q=chindu%20bhagavatam&f=false

#.. 1..https://youtu.be/TgcMbVhHLIc — ಕೇರಳದ ಧಾರ್ಮಿಕ ಕಲಾಪಗಳ ಚಿಂತು ಪಾಟ್ಟು.
#.. 2.. https://youtu.be/SgsxQC9aoRU

#..https://m.facebook.com/story.php?story_fbid=2695689467414376&id=100009200486783&sfnsn=wiwspmo&extid=K4OLFafBxYGaaGW1 — ವಿದುಷಿಯರಾದ ಬಾಂಬೆ ಸಹೋದರಿಯರ ಕಾವಡಿಚಿಂದುವಿನ ಗಾಯನ

#.. https://youtu.be/2CAAtNEk1AU — ಕಾವಡಿಚಿಂದುವಿನ ಭರತನಾಟ್ಯ

#.. ದೇವಾಲಯಗಳಲ್ಲಿ ಕಾವಡಿಚಿಂದುವಿನ ಸೇವೆ.
1..https://youtu.be/VV8qYS3CCzI

2..https://youtu.be/kF66MnFUmMc

Copyright preserved

3..https://youtu.be/xBX4rOLFmWg

#..https://books.google.co.in/books?id=gEyKdQQVeusC&pg=PA143&lpg=PA143&dq=kanduka+play&source=bl&ots=7GyLC-QjDi&sig=ACfU3U0RLZWjJ4Csav3A88Fx6hJEP23QAQ&hl=en&sa=X&ved=2ahUKEwiMwYqynZzqAhV2zTgGHRjmAMsQ6AEwCHoECAEQAQ#v=onepage&q=kanduka%20play&f=false

----

Copyright preserved